ಸೋಮವಾರ,6 ಜೂನ್ 2022 | ಪುಟಗಳು: 14 | ಬೆಲೆ: ₹ 5.00
www.vijaykarnataka.com
ಸಂಪುಟ: 23 | ಸಂಚಿಕೆ: 242

VK

# ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಕರಣ್ ಜೋಹರ್ ಪಾರ್ಟಿ ಎಫೆಕ್ಟ್: ಕತ್ರಿನಾ, ಶಾರುಖ್ ಸೇರಿ 50 ಮಂದಿಗೆ ಕೋವಿಡ್ ಪಾಸಿಟಿವ್ P06

ಮಹೇಶ್ ಬಾಬು, ತ್ರಿವಿಕ್ರಮ್ ಕಾಂಬಿನೇಷನ್ ಚಿತ್ರದಲ್ಲಿ ನಟಿಸಲಿರುವ ರವಿಚಂದ್ರನ್? ಲವಲVK

ವಿವಾದಾತ್ಮಕ ಹೇಳಿಕೆ: ಬಿಜೆಪಿಯಿಂದ ನೂಪುರ್ ಶರ್ಮಾ ಸಸ್ಪೆಂಡ್, ನವೀನ್ ಜಿಂದಾಲ್ ಉಚ್ಚಾಟನೆ P01



# ಸಂಪಾದಕೀಯ EDITORIAL


## ಜಮ್ಮು ಕಾಶ್ಮೀರದಲ್ಲಿ ಹಿಂಸೆ ನಿಲ್ಲಲಿ

### ಉಗ್ರರ ಉಪಟಳದಿಂದ ಸ್ಥಳೀಯರಲ್ಲಿ ಹೆಚ್ಚುತ್ತಿದೆ ಅಭದ್ರತೆ



ರಷ್ಯಾ ಎಂಬ ದೈತ್ಯ ರಾಷ್ಟ್ರವು ಸತತ 101 ದಿನದಿಂದ ಉಕ್ರೇನ್ ಮೇಲೆ ದಾಳಿ ನಡೆಸುತ್ತಿದ್ದು, ಇಡೀ ದೇಶವೇ ಮಸಣದಂತಾಗಿದೆ. ಆಂತರಿಕ ಕದನಗಳಿಂದ ಹಲವು ದೇಶಗಳ ಪರಿಸ್ಥಿತಿ ಉಕ್ರೇನ್‌ಗಿಂತ ಭಿನ್ನವಾಗಿಲ್ಲ. ಇವು ಅಪಾಯದ ಕುಲುಮೆಗಳಲ್ಲಿ ಬೇಯುತ್ತಿವೆ. ಚೇತರಿಕೆಯ ಹಾದಿಗಳೇ ಮುಚ್ಚಿದಂತಾಗಿವೆ. ಜನ ಜೀವನ ಹದಗೆಟ್ಟಿದೆ. ಇಂಥ ದೇಶಗಳತ್ತ ನೋಟ.

# ಆಂತರಿಕ ಕದನ ಯುದ್ಧಕ್ಕಿಂತ ಭೀಕರ



### ನಲುಗುತ್ತಿರುವ ಅಫ್ಘನ್



### ಹಸಿವಿನಿಂದ ಅಮ್ಮಾ ಎನ್ನುತ್ತಿರುವ ಯೆಮೆನ್

ಯೆಮೆನ್ ಪ್ರಸ್ತುತ ಸಿವಿಲ್ ವಾರ್‌ಗೆ ತುತ್ತಾಗಿದ್ದು, 2019 ರಲ್ಲಿಯೇ 20,000 ಕ್ಕೂ ಹೆಚ್ಚು ಜನ ಮರ್ಮರಣಕ್ಕೀಡಾಗಿದ್ದಾರೆ. ... ಮಾರ್ಚ್ 2019 ರವರೆಗೆ ... 17,700 ಕ್ಕೂ ಹೆಚ್ಚು ನಾಗರಿಕರನ್ನು ಕೊಂದಿದೆ. ... 12,000 ನಾಗರಿಕರು ಸೇರಿದಂತೆ 100,000 ಕ್ಕೂ ಹೆಚ್ಚು ... ಅಂದಾಜು 13 ಮಿಲಿಯನ್ ಯೆಮೆನ್ ...

### ಇರಾಕ್ ವಾರ್ ರಕ್ತ ಚರಿತೆ

### ಸಿರಿಯಾದಲ್ಲಿ ನಿರಾಶ್ರಿತರ ಗೋಳು

### ಮೆಕ್ಸಿಕೊದಲ್ಲಿ ಹಿಂಸಾತ್ಮಕ ಮಾದಕ ಜಾಲ


### ಸೊಮಾಲಿಯದಲ್ಲಿ ಅಧಿಕಾರಕ್ಕಾಗಿ ಕಿತ್ತಾಟ, ಜನರಿಗೆ ಹಸಿವಿನ ಸಂಕಟ

### ಲಿಬಿಯಾ ಆಂತರ್ಯುದ್ಧಕ್ಕೆ ಕೊನೆ ಇಲ್ಲ

### ಮಧ್ಯ ಆಫ್ರಿಕನ್ ಗಣರಾಜ್ಯ ಕ್ಷೋಭೆ

# ಬೋಧಿ ವೃಕ್ಷ

## ಹಿರಿಯರು ದಾರಿ ತಪ್ಪಿದರೆ ಘೋರ ಅನಾಹುತ



ಶ್ರೀ ಸತ್ಯಾತ್ಮತೀರ್ಥ ಶ್ರೀಪಾದರು, ಉತ್ತರಾದಿಮಠ

# ಸಂಕಲ್ಪ ಶಿಬಿರದ ಶುಭ ಲಗ್ನದಲ್ಲಿ ಕೈ ಸಾರಥಿಗಳ ಸ್ನೇಹ ಮಿಲನ



ರಾಜ್ಯಕಾರಣ
ಶಶಿಧರ ಹೆಗಡೆ
shashidhar.handiki@timesgroup.com

### ಸೀ-ವಲಲ ಸೇರಿದರೆ?

### ಸಿದ್ದು-ಡಿಕೆಶಿ ಬಾಸ್‌ಟ್ರಕ್:



### ಒಂದಾಗಲು ಹಿಡೆಯೇಕೆ?

### ಸ್ಟ್ರಾಂಗ್ ಕೊಡೋದ್ಯಾರು?

editor@vijaykarnataka.com

# ವಿಕ ಅನುದಿನ ಕಗ್ಗ



658

# ಸಂಗ್ಯಾ ಮಂಗ್ಯಾ


## ವಾಚಕರ ವಿಜಯ

### ಮೂಲ ಆಶಯ ಮರೆಯಬಾರದು

ಆರ್.ವೆಂಕಟರಾಜು ಬೆಂಗಳೂರು

# ವಿಕ ಚಿಣ್ಣರ ಪತ್ರ

### ಸಚಿವರೇ, ಅಂಕಪಟ್ಟಿಯನ್ನೇ ಪರಿಗಣಿಸಿ



- ರಿತೇಶ್ ಶಿವರಾಮು
7ನೇ ತರಗತಿ ಕೆನರಾ ಹಿರಿಯ ಪ್ರಾಥಮಿಕ ಶಾಲೆ, ಮಂಗಳೂರು

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಅಂಚೆ: ವಾಚಕರ ವಿಜಯ, ನಂ. 4, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18. ಫ್ಯಾಕ್ಸ್: 080-40877695 / 40877696.

ಸೋಮವಾರ, 6 ಜೂನ್ 2022 | ಪುಟಗಳು: 14 | ಬೆಲೆ: ₹ 5.00
www.vijaykarnataka.com
ಸಂಪುಟ: 23 | ಸಂಚಿಕೆ: 242
VK
# ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA



ಐಫಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತುಳುವಿನಲ್ಲಿ ಮಾತನಾಡಿ ಗಮನ ಸೆಳೆದ ಐಶ್ವರ್ಯ, ಸುನಿಲ್ ಶೆಟ್ಟಿ P07

ಬಾಂಗ್ಲಾದೇಶದ ಕಂಟೈನರ್ ಡಿಪೋದಲ್ಲಿ ಬೆಂಕಿ ಅವಘಡ: 49 ಜನರು ಸಾವು, ನೂರಾರು ಮಂದಿಗೆ ಗಾಯ P06

ಟೆನಿಸ್ ದಿಗ್ಗಜ ರಾಫೆಲ್ ನಡಾಲ್ ಮುಡಿಗೆ ಹದಿನಾಲ್ಕನೇ ಫ್ರೆಂಚ್ ಓಪನ್ ಮುಕುಟ P08



ರಾಜ್ಯದ ಹಾಸ್ಟೆಲ್‌ಗಳಲ್ಲಿ ಮೂಲ ಸೌಕರ್ಯ ಮೂಲೆಗುಂಪು | ಶುರುವಲ್ಲೇ ಗೋಳು

## ಸೊರಗಿವೆ ವಸತಿ ಶಾಲೆಗಳು

■ **ನಾಗರಾಜು ಅಶ್ವತ್ಥ್** ಬೆಂಗಳೂರು ಗ್ರಾಮಾಂತರ
nagaraju.a@timesgroup.com

ಮನೆಯಿಂದ ಶಾಲೆಗಳಿಗೆ ಹೋಗುತ್ತಿರುವ ಚಿಣ್ಣರಿಗೆ ಪಠ್ಯಪುಸ್ತಕ ಬಂದಿಲ್ಲ ಎಂಬ ಚಿಂತೆಯಾದರೆ, ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ಲಕ್ಷಕ್ಕೂ ಅಧಿಕ ಮಕ್ಕಳಿಗೆ ಹಲವಾರು ಚಿಂತೆ!

ರಾಜ್ಯದಲ್ಲಿ ವಸತಿ ಸಹಿತ ಶಿಕ್ಷಣ ಒದಗಿಸುತ್ತಿರುವ ಶಾಲೆಗಳಲ್ಲಿ ಮೂಲಸೌಕರ್ಯವೇ ಮೂಲೆಗುಂಪಾಗಿದೆ. ಸ್ವಚ್ಛ ಶೌಚಾಲಯ, ಉತ್ತಮ ವಾತಾವರಣ, ಗುಣಮಟ್ಟದ ಆಹಾರ, ಪೀಠೋಪಕರಣಗಳ ಕೊರತೆ ಸೇರಿದಂತೆ ನಾನಾ ರೀತಿಯ ಸೌಲಭ್ಯಗಳ ಕೊರತೆಯಿಂದ ಎಲ್ಲ ಕಡೆಯೂ ವಿದ್ಯಾರ್ಥಿಗಳು ತೀವ್ರ ಸಮಸ್ಯೆ ಅನುಭವಿಸುತ್ತಿದ್ದಾರೆ.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ವಸತಿ ಶಾಲೆಗಳು ನಿರ್ವಹಣೆಯಾಗುತ್ತಿವೆ. ರಾಜ್ಯದ ಎಲ್ಲ ಕಡೆ ವಿಜಯ ಕರ್ನಾಟಕ ನಡೆಸಿದ ರಿಯಾಲಿಟಿ ಚೆಕ್ ವೇಳೆ ಮೂಲ ಸೌಕರ್ಯಗಳ ಕೊರತೆಯು ಬಹಿರಂಗವಾಗಿ ಬೆಳಕಿಗೆ ಬಂದಿದೆ. »07

> ಬಾಡಿಗೆ ಕಟ್ಟಡಗಳಲ್ಲಿ ನಿರ್ವಹಣೆಯಾಗುತ್ತಿರುವ ವಸತಿ ಶಾಲೆಗಳು, ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ನಿರ್ಮಾಣಕ್ಕೆಂದು ಸರಕಾರಕ್ಕೆ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣ ಬಿಡುಗಡೆಯಾದ ಕೂಡಲೇ ಉತ್ತಮ ಮೂಲಸೌಕರ್ಯಗಳುಳ್ಳ ಕಟ್ಟಡ ನಿರ್ಮಿಸಲಾಗುತ್ತದೆ.
>
> **-ಕೋಟ ಶ್ರೀನಿವಾಸ ಪೂಜಾರಿ** ಸಚಿವ

ಸಾಂದರ್ಭಿಕ ಚಿತ್ರ



**826** ರಾಜ್ಯದಲ್ಲಿರುವ ಒಟ್ಟು ವಸತಿ ಶಾಲೆಗಳು

**40,540** ವಸತಿ ಶಾಲೆಗಳಿಗೆ ಪ್ರತಿವರ್ಷ (6ನೇ ತರಗತಿ) ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ

**1,301** ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

**69,956** ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆದವರು

### ಏನೇನು ಸಮಸ್ಯೆ?

- ವಸತಿ ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲ, ಕಟ್ಟಡ ಇರುವೆಡೆ ಭದ್ರತೆ ಇಲ್ಲ
- ಮಕ್ಕಳು ಮಲಗುವ ಕೊಠಡಿಗಳಿಗೆ ಕಿಟಕಿ ಬಾಗಿಲುಗಳಿಲ್ಲ
- ಪೌಷ್ಟಿಕ ಆಹಾರಕ್ಕಾಗಿ ಸರಕಾರವೇ ಸಿದ್ಧಪಡಿಸಿರುವ ಊಟದ ಮೆನು ಪಾಲನೆಯಾಗುತ್ತಿಲ್ಲ
- ಮಕ್ಕಳಿಗೆ ಅವಧಿ ಮೀರಿದ ಎಣ್ಣೆ, ಪೇಸ್ಟ್, ಸೋಪು ನೀಡಲಾಗುತ್ತಿದೆ
- ಶೌಚಾಲಯ, ಬಿಸಿನೀರು ಪೂರೈಕೆ, ಸ್ವಚ್ಛತೆ, ನಿರ್ವಹಣೆಗೆ ಸಿಬ್ಬಂದಿ ಅಲಭ್ಯ
- ಅಧ್ಯಯನಕ್ಕೆ ಕುರ್ಚಿ-ಮೇಜುಗಳಿಲ್ಲ, ನೆಲದ ಮೇಲೆಯೇ ಕುಳಿತು ಓದಿಕೊಳ್ಳಬೇಕಿದೆ
- ಸಾಮಾನ್ಯ ಹಾಸ್ಟೆಲ್‌ಗಳಂತೂ ಓವರ್‌ಲೋಡ್.

ವಸತಿ ಶಾಲೆಗಳ ಸ್ಥಿತಿಗತಿ, ವಿಕ ರಿಯಾಲಿಟಿ ಚೆಕ್ »12

### ಎಲ್ಲಿ ಹೋದರು 27 ಸಾವಿರ ಮಕ್ಕಳು?

■ **ಮಾರುತಿ ಸುಣಗಾರ** ಬಳ್ಳಾರಿ
maruthi.sunagar@timesgroup.com

ಮಹಾಮಾರಿ ಕೊರೊನಾ ಸೋಂಕಿನಿಂದಾಗಿ ರಾಜ್ಯದಲ್ಲಿ ಎರಡು ವರ್ಷ ಸಮರ್ಪಕವಾಗಿ ಶಾಲೆಗಳು ನಡೆಯಲಿಲ್ಲ. ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಪೂರ್ಣ ಪ್ರಮಾಣದಲ್ಲಿ ಶಾಲೆಗಳು ಆರಂಭಗೊಂಡಿದ್ದು, ಪ್ರವೇಶಾತಿ ಪ್ರಕ್ರಿಯೆ ಭರದಿಂದ ಸಾಗಿದೆ. ಆದರೆ, ರಾಜ್ಯದಲ್ಲಿ 27 ಸಾವಿರಕ್ಕೂ ಹೆಚ್ಚು ಮಕ್ಕಳು ಶಾಲೆಯಿಂದ ದೂರ ಉಳಿದಿದ್ದು, ಅವರನ್ನು ಪುನಃ ಶಾಲೆಗಳಿಗೆ ಕರೆತರುವುದು ಶಿಕ್ಷಣ ಇಲಾಖೆಗೆ ಸವಾಲಾಗಿದೆ.

ಕೊರೊನಾ ಅಲೆಗಳು ಕಡಿಮೆಯಾಗುತ್ತಿದ್ದಂತೆ ಮಕ್ಕಳಿಗೆ ನಿರಂತರ ಶಿಕ್ಷಣ ಒದಗಿಸುವ ಉದ್ದೇಶದೊಂದಿಗೆ ರಾಜ್ಯ ಸರಕಾರ ಆನ್‌ಲೈನ್ ತರಗತಿ, 'ವಿದ್ಯಾಗಮ' ಸೇರಿ ನಾನಾ ಕ್ರಮಗಳ ಮೂಲಕ ಮಕ್ಕಳಿಗೆ ಶಿಕ್ಷಣ ನೀಡಲು ಕ್ರಮಕೈಗೊಳ್ಳಲಾಗಿತ್ತು. ಆದರೂ, ಬಹುತೇಕ ಮಕ್ಕಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಂದ ವಂಚಿತರಾಗಿದ್ದರು. »07

#### ಬೆಂಗಳೂರಿನಲ್ಲೇ ಹೆಚ್ಚು

ರಾಜ್ಯದಲ್ಲಿ ಒಟ್ಟು 46,591 ಮಕ್ಕಳು ಶಾಲೆಯಿಂದ ದೂರವುಳಿದಿದ್ದಾರೆ. ಈ ಪೈಕಿ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯಲ್ಲಿ ಅತಿಹೆಚ್ಚು ಎಂಬಂತೆ 8,260 ಮಕ್ಕಳು ಶಾಲೆಯಿಂದ ದೂರವುಳಿದಿದ್ದಾರೆ. ನಂತರದ ಸ್ಥಾನದಲ್ಲಿ ಬೀದರ್ ಇದ್ದು, 3043 ಮಕ್ಕಳು ಶಾಲೆಯಿಂದ ವಂಚಿತರಾಗಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಶಾಲೆಯಿಂದ ದೂರ ಉಳಿದ ಮಕ್ಕಳ ಸಂಖ್ಯೆ ಕನಿಷ್ಠಮಟ್ಟದಲ್ಲಿದೆ.

ಎಲ್ಲ ಧರ್ಮಗಳಿಗೆ ಸಮಾನ ಗೌರವ | 'ಪ್ರವಾದಿ' ವಿವಾದದ ಬಗ್ಗೆ ಕೇಸರಿ ಪಕ್ಷದ ಸ್ಪಷ್ಟನೆ

## ಸಂವಿಧಾನವೇ ಬಿಜೆಪಿ ಧರ್ಮ

**ಹೊಸದಿಲ್ಲಿ:** ಪ್ರವಾದಿ ಅವರ ಕುರಿತು ಪಕ್ಷದ ವಕ್ತಾರರು ನೀಡಿದ ಹೇಳಿಕೆ, ಅದರಿಂದ ಉತ್ತರ ಪ್ರದೇಶದಲ್ಲಿ ಭುಗಿಲೆದ್ದ ಕೋಮು ಗಲಭೆಯಿಂದ ಮುಜುಗರಕ್ಕೆ ಒಳಗಾಗಿರುವ ಬಿಜೆಪಿ, ಭಾನುವಾರ ಈ ಬಗ್ಗೆ ಸ್ಪಷ್ಟನೆ ನೀಡಿದೆ. ಪಕ್ಷವು ಎಲ್ಲ ಧರ್ಮಗಳನ್ನು ಸಮಾನವಾಗಿ ಗೌರವಿಸುತ್ತದೆ. ಸಂವಿಧಾನದ ಹಕ್ಕುಗಳಿಗೆ ಪಕ್ಷವು ಬದ್ಧವಾಗಿದೆ ಎನ್ನುವ ಮೂಲಕ ವಿವಾದಾತ್ಮಕ ಹೇಳಿಕೆಯಿಂದ ಬಿಜೆಪಿಯು ಅಂತರ ಕಾಯ್ದುಕೊಂಡಿದೆ.

"ಭಾರತ ಸಂವಿಧಾನವು ಎಲ್ಲರಿಗೂ ಅವರ ಇಚ್ಛೆಯ ಧರ್ಮ ಹಾಗೂ ನಂಬಿಕೆಗಳನ್ನು ಪಾಲಿಸುವ ಹಕ್ಕು ನೀಡಿದೆ. ಬಿಜೆಪಿಯು ಎಲ್ಲ ಧರ್ಮಗಳನ್ನು ಗೌರವಿಸುತ್ತದೆ. ಯಾವುದೇ ಧರ್ಮ, ಪಂಥ ಅಥವಾ ಸಮುದಾಯದವರನ್ನು ಕುಚೋದ್ಯವಾಗಿ ಕಾಣುವ ಇಲ್ಲವೇ ಅವಮಾನಿಸುವುದನ್ನು ಪಕ್ಷವು ಸಹಿಸುವುದಿಲ್ಲ. ಧಾರ್ಮಿಕ ವ್ಯಕ್ತಿತ್ವಗಳ ಅವಹೇಳನ ಮಾಡಿ, ಕೋಮು ಸೌಹಾರ್ದತೆಗೆ ಧಕ್ಕೆ ತರುವವರನ್ನು ಅಥವಾ ಧರ್ಮಗಳನ್ನು ಅವಮಾನಿಸುವ ಸಿದ್ಧಾಂತವನ್ನು ಎಂದಿಗೂ ಪ್ರೋತ್ಸಾಹಿಸುವುದಿಲ್ಲ" ಎಂದು ಬಿಜೆಪಿ ಕಾರ್ಯದರ್ಶಿ ಅರುಣ್ ಸಿಂಗ್ ನೀಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

"ಭಾರತದ ಸಂವಿಧಾನವು ಜನರಿಗೆ ಯಾವುದೇ ನಂಬಿಕೆ ಹಾಗೂ ಧರ್ಮವನ್ನು ಪಾಲಿಸುವ ಹಕ್ಕು ನೀಡಿದೆ. ಅದೇ ರೀತಿ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣಬೇಕೆಂದು ಸಂವಿಧಾನ ತಿಳಿಸುತ್ತದೆ. ಸಂವಿಧಾನವೇ ನಮ್ಮ ಪರಮ ಧರ್ಮ," ಎಂದು ಪ್ರಕಟಣೆಯಲ್ಲಿ ಬಿಜೆಪಿ ಹೇಳಿದೆ. »07

#### ನೂಪುರ್ ಶರ್ಮಾ ಅಮಾನತು, ನವೀನ್ ಜಿಂದಾಲ್ ಉಚ್ಚಾಟನೆ





ಉತ್ತರ ಪ್ರದೇಶದ ಕಾನ್ಪುರದಲ್ಲಿ ಕೋಮುಗಲಭೆಯ ಬೆನ್ನಲ್ಲೇ ಬಿಜೆಪಿಯು ಪಕ್ಷದ ರಾಷ್ಟ್ರೀಯ ವಕ್ತಾರ ನೂಪುರ್ ಶರ್ಮಾ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದೆ. ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷ ಕಾಲ ಅಮಾನತುಗೊಳಿಸಿದೆ. ಅಲ್ಲದೇ ದಿಲ್ಲಿಯ ಬಿಜೆಪಿ ಮಾಧ್ಯಮ ಘಟಕದ ಮುಖ್ಯಸ್ಥ ನವೀನ್ ಜಿಂದಾಲ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ನೂಪುರ್ ಶರ್ಮಾ ಅವರು ಖಾಸಗಿ ಟಿವಿ ಕಾರ್ಯಕ್ರಮವೊಂದರಲ್ಲಿ ಪ್ರವಾದಿ ಮೊಹಮ್ಮದ್‌ರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಕಾನ್ಪುರದಲ್ಲಿ ಮುಸ್ಲಿಂ ಸಮುದಾಯದವರು ಜೂನ್ 3ರಂದು ಪ್ರತಿಭಟನೆ ನಡೆಸಿದ್ದರು. ಗುಂಪುಗಳು ಕಲ್ಲುತೂರಾಟ ನಡೆಸಿ, ಪರಸ್ಪರ ಸಂಘರ್ಷಕ್ಕೆ ಇಳಿದಿದ್ದರಿಂದ ಗಲಾಟೆಯು ಕೋಮುಗಲಭೆಗೆ ತಿರುಗಿತ್ತು. ಅರಬ್ ರಾಷ್ಟ್ರಗಳಲ್ಲೂ ಇದೇ ವಿಚಾರವಾಗಿ ಖಾಸಗಿ ಟಿವಿಯ ವಿರುದ್ಧ ಅಭಿಯಾನ ನಡೆಯುತ್ತಿದೆ.

**ನಿಯಮ ಉಲ್ಲಂಘನೆ:** ಶಿಸ್ತು ಸಮಿತಿಯ ಸದಸ್ಯ ಓಂ ಪಾಠಕ್ ಅವರು, "ವಿವಿಧ ವಿಷಯ ಹಾಗೂ ವಿಚಾರಗಳ ಕುರಿತು ಪಕ್ಷವು ಹೊಂದಿರುವ ನಿಲುವುಗಳಿಗೆ ವಿರುದ್ಧವಾಗಿ ನೀವು ಹೇಳಿಕೆ ನೀಡಿದ್ದೀರಿ. ಈ ಮೂಲಕ ಬಿಜೆಪಿ ಸಂವಿಧಾನದ ನಿಯಮ 10(ಎ) ವನ್ನು ಉಲ್ಲಂಘಿಸಿದ್ದೀರಿ. ನಿಮ್ಮ ವಿರುದ್ಧ ಅಂತರಿಕ ವಿಚಾರಣೆಯು ಆಗತ್ಯವಿರುವ ಕಾರಣ ತಕ್ಷಣದಿಂದಲೇ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವ ಹಾಗೂ ರಾಷ್ಟ್ರೀಯ ವಕ್ತಾರ ಹುದ್ದೆಯಿಂದ ಅಮಾನತುಗೊಳಿಸಲಾಗಿದೆ," ಎಂದು ನೂಪುರ್ ಶರ್ಮಾ ಅವರಿಗೆ ಪತ್ರದಲ್ಲಿ ತಿಳಿಸಿದ್ದಾರೆ. ಹಾಗೆಯೇ "ನವೀನ್ ಜಿಂದಾಲ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳು ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಹದ್ದಾಗಿವೆ," ಎಂದೂ ಸ್ಪಷ್ಟಪಡಿಸಿದ್ದಾರೆ.

### ಕತಾರ್, ಕುವೈತ್ ಸಮನ್ಸ್‌ಗೆ ಭಾರತದಿಂದ ಉತ್ತರ

**ದೋಹಾ:** ಭಾರತವು ಎಲ್ಲ ಧರ್ಮಗಳನ್ನು ಸಮಾನವಾಗಿ ಗೌರವಿಸುತ್ತದೆ ಎಂದು ಕತಾರ್ ಮತ್ತು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ಸ್ಪಷ್ಟಪಡಿಸಿವೆ. ಭಾರತದಲ್ಲಿ ಆಡಳಿತ ಪಕ್ಷದ ನಾಯಕರು ಇಸ್ಲಾಂ ವಿರೋಧಿ ಹೇಳಿಕೆ ನೀಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕತಾರ್ ಮತ್ತು ಕುವೈತ್‌ನ ವಿದೇಶಾಂಗ ಸಚಿವಾಲಯಗಳು ಅಲ್ಲಿನ ಭಾರತೀಯ ರಾಯಭಾರಿಗಳಿಗೆ ಭಾನುವಾರ ಸಮನ್ಸ್ ಜಾರಿ ಮಾಡಿದ್ದವು. ಇದರ ಬೆನ್ನಲ್ಲೇ ರಾಯಭಾರ ಕಚೇರಿಯಿಂದ ಸ್ಪಷ್ಟನೆ ಹೊರಬಿದ್ದಿದೆ.

#### ವಿಕ ಹೊಂಗಿರಣ

ನೀವು ಯಶಸ್ವಿಗಾಗಿ ಪ್ರಯತ್ನಿಸಿ ವಿಫಲವಾದರೂ ಬೇಸರ ಬೇಡ. ಏಕೆಂದರೆ ಪ್ರಯತ್ನವನ್ನೇ ಮಾಡದವರಿಗಿಂತಲೂ ನೀವು ಎಷ್ಟೋ ಪಾಲು ಉತ್ತಮ.


Vencobb

ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹113/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹153/-

| ವಿಥ್ ಸ್ಕಿನ್ | ವಿಥೌಟ್ ಸ್ಕಿನ್ |
|---|---|
| ₹214/- | ₹245/- |

ಗ್ರಾಹಕರಿಗೋಸ್ಕರ ನೀಡಲಾಗಿದೆ



KPTA
M: 7618763488

| | |
|---|---|
| ಬ್ರಾಯ್ಲರ್ ಹೋಲ್‌ಸೇಲ್ ದರ | ರೂ. 128 |
| ಫಾರಂ ಕೋಳಿ ಹೋಲ್‌ಸೇಲ್ ದರ | ರೂ. 118 |
| ಗಿರಿರಾಜ ಕೋಳಿ ಹೋಲ್‌ಸೇಲ್ ದರ | ರೂ. 87 |
| ಬ್ರಾಯ್ಲರ್ ರೀಟೇಲ್ ಮಾರಾಟದ ದರ | ರೂ. 180 |

| ವಿಥ್ ಸ್ಕಿನ್ | ವಿಥೌಟ್ ಸ್ಕಿನ್ | ಮೊಟ್ಟೆಗಳು (100ಕ್ಕೆ) |
|---|---|---|
| ರೂ. 260 | ರೂ 290 | ರೂ 495 |


ಕೇಂದ್ರ ಸರಕಾರದ ಆಸಕ್ತಿ | ಕೇರಳಕ್ಕೆ ಮಾಹಿತಿ ರವಾನೆ

## ಶಂಕರ ಜನ್ಮಸ್ಥಾನ ರಾಷ್ಟ್ರೀಯ ಸ್ಮಾರಕ

■ **ಅಜಿತ್ ಸ್ವರ್ಗ** ಪೆರ್ಲ
ajithswarga@gmail.com

ಆದಿ ಶಂಕರಾಚಾರ್ಯರ ಜನ್ಮ ಸ್ಥಳ ಕಾಲಡಿಯಲ್ಲಿ ರಾಷ್ಟ್ರೀಯ ಸ್ಮಾರಕ ನಿರ್ಮಿಸಲು ಕೇಂದ್ರ ಸರಕಾರ ಆಸಕ್ತಿ ತೋರಿದೆ. ಕೇಂದ್ರ ಸಂಸ್ಕೃತಿ ಸಚಿವಾಲಯ ಅಧೀನದಲ್ಲಿರುವ ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರವು ಈ ಕುರಿತು ಕೇರಳ ಸರಕಾರಕ್ಕೆ ಮಾಹಿತಿ ರವಾನಿಸಿದೆ.

ಕಳೆದ ಡಿಸೆಂಬರ್‌ನಲ್ಲಿ ಕಾಲಡಿಗೆ ಭೇಟಿ ನೀಡಿದ್ದ ಪ್ರಾಧಿಕಾರದ ಅಧ್ಯಕ್ಷ ತರುಣ್ ವಿಜಯ್ ಅವರು ರಾಷ್ಟ್ರೀಯ ಸ್ಮಾರಕ ನಿರ್ಮಾಣದ ಕುರಿತು ಆಸಕ್ತಿ ವ್ಯಕ್ತಪಡಿಸಿದ್ದರು. ಬಳಿಕ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರಿಗೆ ಸ್ಮಾರಕ ನಿರ್ಮಾಣದ ಕುರಿತು ಮಾಹಿತಿ ರವಾನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜಭವನವು ರಾಜ್ಯ ಸಂಸ್ಕೃತಿ ಇಲಾಖೆಯಿಂದ ವರದಿ ಕೇಳಿದೆ. ಕೇರಳ ಸರಕಾರ ತನ್ನ ಅಭಿಪ್ರಾಯ ತಿಳಿಸಬೇಕಿದೆ.

19ನೇ ಶತಮಾನದಲ್ಲಿ ಕೇರಳದ ಎರ್ನಾಕುಲಂ ಜಿಲ್ಲೆಯ ಪೆರಿಯಾರ್ ನದಿ ದಡದಲ್ಲಿರುವ ಕಾಲಡಿಯನ್ನು ಆದಿ ಶಂಕರರ ಜನ್ಮ ಸ್ಥಳ ಎಂದು ಮರು ವ್ಯಾಖ್ಯಾನಿಸಲಾಗಿದೆ. ಶೃಂಗೇರಿ ಮಠಾಧೀಶರು ಶಂಕರರ ಜನ್ಮಸ್ಥಳ ಕುರಿತ ವಿಚಾರದ ನೇತೃತ್ವ ವಹಿಸಿದ್ದರು. ಪ್ರಸ್ತುತ ಕಾಲಡಿಯಲ್ಲಿ ಶಾರದಾ ದೇವಿ ಹಾಗೂ ದಕ್ಷಿಣಾಮೂರ್ತಿ ದೇವಾಲಯಗಳಿವೆ. ಇದನ್ನು ಶೃಂಗೇರಿ ಮಠ ಎಂದೂ ಕರೆಯಲಾಗುತ್ತಿದೆ. ಆದಿ ಶಂಕರರ ಮನೆ ಇದ್ದ ಸ್ಥಳದಲ್ಲಿ ದೇವಾಲಯ ನಿರ್ಮಿಸಲಾಗಿದೆ ಎಂದು ನಂಬಲಾಗಿದೆ.

ಕಾಲಡಿಯಲ್ಲಿ ಶಂಕರಾಚಾರ್ಯರ ನೆನಪಿಗಾಗಿ ಕಂಚಿ ಮಠ ನಿರ್ಮಿಸಿದ ಆದಿಶಂಕರ ಗೋಪುರ ವಿಶ್ವ ಪ್ರಸಿದ್ಧವಾಗಿದೆ. 1978ರಲ್ಲಿ ನಿರ್ಮಿಸಲಾದ ಈ ಗೋಪುರ 152 ಅಡಿ ಎತ್ತರವಿದೆ. 8 ಅಂತಸ್ತಿನ ಸ್ತೂಪದ ಗೋಡೆಗಳ ಮೇಲೆ ಬಿಡಿಸಿದ ಚಿತ್ರಗಳು ಆದಿಶಂಕರರ ಜೀವನದ ಕಥೆ ಹೇಳುತ್ತವೆ. ಶಂಕರಾಚಾರ್ಯರ ಜೀವನಕ್ಕೆ ಸಂಬಂಧಿಸಿದ ಪುರಾಣ ಕಥೆಗಳು ಮತ್ತು ನಂಬಿಕೆಗಳನ್ನು ಪೆರಿಯಾರ್ ತೀರದ 'ಕಾಲಡಿ' ಎತ್ತಿ ತೋರಿಸುತ್ತಿದೆ.

ಹಲವಾರು ಶತಮಾನಗಳಿಂದ ದಾಳಿಗೊಳಗಾಗಿದ್ದ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಶಂಕರಾಚಾರ್ಯರು ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಮೊದಲಿಗರು. ದೇಶದ ಮೂಲೆಮೂಲೆಗಳಿಗೆ ಸಂಚರಿಸಿ ಅದ್ವೈತ ತತ್ವವನ್ನು ಪ್ರತಿಪಾದಿಸಿ ಜಗತ್ತಿಗೆ ಸಾರಿದ್ದರು. ಭಗವದ್ಗೀತೆ, ಉಪನಿಷತ್ ಹಾಗೂ ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲಿಗರು ಶಂಕರಾಚಾರ್ಯರು.



ಕಾಲಡಿ ಶ್ರೀ ಶೃಂಗೇರಿ ಮಠ.

> ನಾಗರಿಕತೆಯ ಪುನರುಜ್ಜೀವನದ ಶ್ರೇಷ್ಠ ತಾಣವಾದ ಕಾಲಡಿಯಲ್ಲಿರುವ ಶಂಕರಾಚಾರ್ಯರ ಜನ್ಮ ಸ್ಥಳವನ್ನು ನಿರ್ಲಕ್ಷಿಸಲಾಗುತ್ತಿದೆ. ಶೀಘ್ರವೇ ಈ ಕೊರಗು ದೂರವಾಗಲಿದೆ.
>
> **- ತರುಣ್ ವಿಜಯ್** ಅಧ್ಯಕ್ಷರು, ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರ

### 4ನೇ ಅಲೆ ಸುಳಿವಿಲ್ಲ

**ಮುಂಬಯಿ:** ಭಾರತದಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿದ್ದರೂ ನಾಲ್ಕನೇ ಅಲೆಯ ಬಗ್ಗೆ ಆತಂಕ ಬೇಡ ಎಂದು ಮುಂಬಯಿಯ ತಜ್ಞ ಡಾ.ಅಶ್ವಿನ್ ಗಿಲಡಾ ಅಭಯ ನೀಡಿದ್ದಾರೆ.

ಮಹಾರಾಷ್ಟ್ರ, ಕೇರಳ ಸೇರಿದಂತೆ ಹಲವೆಡೆ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿವೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಏರಿಕೆಯಾಗುತ್ತಿರುವ ಕೊರೊನಾ ಪ್ರಕರಣಗಳು ನಾಲ್ಕನೇ ಅಲೆಗೆ ಕಾರಣವಾಗುವ ಸುಳಿವು ಕಂಡುಬರುತ್ತಿಲ್ಲ. ಹೀಗಾಗಿ ಕೋವಿಡ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಹೇಳಿದ್ದಾರೆ. ಅದಾಗ್ಯೂ, ಲಸಿಕಾ ಕಾರ್ಯಕ್ರಮವನ್ನು ತೀವ್ರಗೊಳಿಸಬೇಕು. ಜತೆಗೆ ಸಾಮಾಜಿಕ ಅಂತರ ಸೇರಿದಂತೆ ಕೋವಿಡ್ ನಿರ್ಬಂಧ ಕ್ರಮಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದ್ದಾರೆ.

ಭಾರತದಲ್ಲಿ ಭಾನುವಾರ 4,270 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, 34 ದಿನಗಳ ಬಳಿಕ ಪಾಸಿಟಿವಿ ಪ್ರಮಾಣ ಶೇ. 1 ದಾಟಿದೆ.

ರಾಜ್ಯದಲ್ಲಿ ಭಾನುವಾರ 301 ಪ್ರಕರಣಗಳು ವರದಿಯಾಗಿದ್ದು, ಒಬ್ಬರು ಸೋಂಕಿನಿಂದ ಮೃತಪಟ್ಟಿದ್ದಾರೆ.


ಕಂದಕಕ್ಕೆ ಉರುಳಿದ ಬಸ್, 22 ಯಾತ್ರಿಗಳ ಸಾವು? »06

ಜಿಲ್ಲೆಗೊಂದು ರಫ್ತು ಉತ್ತೇಜಕ ಕೇಂದ್ರ »02

ಪಿಎಸ್‌ಐ ಹಗರಣ: 95 ಲಕ್ಷ ರೂ.ಗೆ 2 ಹುದ್ದೆ ಬಿಕರಿ »03


ದಿವ್ಯಾಂಗರಿಗೂ ಮೋದಿ ಜತೆ ಯೋಗ ಸುಯೋಗ »07


## ಈ ವಾರ ಮತ್ತೆ ಬಡ್ಡಿ ದರ ಹೆಚ್ಚಳ?

**ಮುಂಬಯಿ:** ಹಲವು ಕ್ರಮಗಳ ಹೊರತಾಗಿಯೂ ಹಣದುಬ್ಬರ ಏರಿಕೆ ಮಟ್ಟದಲ್ಲಿ ಮುಂದುವರಿದಿರುವ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತೊಂದು ಸುತ್ತು ರೆಪೊ ದರ ಏರಿಕೆ ಮಾಡುವ ಮೂಲಕ, ಸಾಲಗಳ ಮೇಲಿನ ಬಡ್ಡಿದರ ಇನ್ನಷ್ಟು ಹೆಚ್ಚಿಸಕ್ಕೆ ದಾರಿ ಮಾಡುವ ಸಾಧ್ಯತೆಯಿದೆ.

ಬುಧವಾರ ರಿಸರ್ವ್ ಬ್ಯಾಂಕ್‌ನ ತ್ರೈಮಾಸಿಕ ಆರ್ಥಿಕ ಪರಾಮರ್ಶೆ ಸಭೆ ನಡೆಯಲಿದ್ದು, ಸಭೆಯ ಬಳಿಕ ರೆಪೊ ದರ ಪರಿಷ್ಕರಣೆ ಸಂಬಂಧ ಪ್ರಕಟಿಸುವ ಸಾಧ್ಯತೆಯಿದೆ.

ಮೂಲಗಳ ಪ್ರಕಾರ ರೆಪೊದರವನ್ನು ಕನಿಷ್ಠ ಶೇ. 0.35ರಷ್ಟು ಹೆಚ್ಚಿಸುವ ಸಾಧ್ಯತೆಯಿದೆ. ಈಗಾಗಲೇ ಗವರ್ನರ್ ಶಕ್ತಿಕಾಂತ್ ದಾಸ್ ಈ ಬಗ್ಗೆ ಸುಳಿವು ನೀಡಿದ್ದಾರೆ. ಮುಂದಿನ ತಿಂಗಳಲ್ಲೂ ಈ ಏರಿಕೆ ಪ್ರವೃತ್ತಿ ಮುಂದುವರಿಯಬಹುದೆಂದೂ ತಜ್ಞರು ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಕಳೆದ ಮೇ 4ರಂದು ತಿಂಗಳು ಅರ್ಧಬಿಂದು ದಿಢೀರ್ ಕ್ರಮದಲ್ಲಿ ರೆಪೊ ದರವನ್ನು ಶೇ.0.40ರಷ್ಟು ಹೆಚ್ಚಳ ಮಾಡಿತ್ತು. ಇದರ ಬೆನ್ನಲ್ಲೇ, ವಾಣಿಜ್ಯ ಬ್ಯಾಂಕ್‌ಗಳು ಎಲ್ಲಾ ಸಾಲಗಳ ಮೇಲಿನ ಬಡ್ಡಿದರವನ್ನು ಹೆಚ್ಚಳ ಮಾಡಿವೆ.



ದುರಸ್ತಿಯಾಗದ ಹಳೇ ರಸ್ತೆಗಳು | ಪೂರ್ಣವಾಗದ ಬಿ.ಎಚ್ ಹೆದ್ದಾರಿ | ನಿತ್ಯ ಪ್ರಯಾಣಿಕರು ಹೈರಾಣ

## ಶಿವಮೊಗ್ಗ-ಬೆಂಗಳೂರು ರಸ್ತೆ ಪಯಣ ದುಸ್ತರ

■ **ಸಂತೋಷ್ ಕಾಚಿನಕಟ್ಟೆ** ಶಿವಮೊಗ್ಗ
lakshmikanthakumar.boraiah@timegroup.com

ಶಿವಮೊಗ್ಗ- ಬೆಂಗಳೂರು ನಡುವೆ ಗುಣಮಟ್ಟದ ರಸ್ತೆ ನಿರ್ಮಾಣವಾಗುತ್ತದೆ, ಪ್ರಯಾಣದ ಸಮಯ ಕಡಿಮೆಯಾಗುತ್ತದೆ ಎಂಬ ಕನಸು ಏಳೆಂಟು ವರ್ಷಗಳಿಂದ ಕನಸಾಗಿಯೇ ಉಳಿದಿದೆ.

ಹೊಸ ರಸ್ತೆ ಪೂರ್ಣವಾಗದೆ, ಹಳೇ ರಸ್ತೆ ದುರಸ್ತಿಯಾಗದೆ ಪ್ರಯಾಣಿಕರು ಪ್ರಯಾಸ ಪಡುವುದು ನಿಂತಿಲ್ಲ. ಶಿವಮೊಗ್ಗ- ಬೆಂಗಳೂರು ಸಂಪರ್ಕಿಸುವ ಬಿ.ಎಚ್. ರಸ್ತೆ (ಎನ್‌ಎಚ್ 206) ಮತ್ತು ಚಿತ್ರದುರ್ಗ ಮೂಲಕ ಸಾಗುವ ಎನ್‌ಎಚ್ 48 ಹಾಳಾಗಿದ್ದು ಪ್ರಯಾಣದ ಅವಧಿಯನ್ನು ಹೆಚ್ಚಿಸಿವೆ. ಕಾರಿನಲ್ಲಿ ಐದು ಗಂಟೆಯಲ್ಲಿ ತೆರಳಬಹುದಾದ ಸಮಯ ಈಗ 6ರಿಂದ 7ಗಂಟೆಗೆ ಏರಿಕೆಯಾಗಿದೆ.

ದ್ವಿಪಥದ ಬಿ.ಎಚ್. ರಸ್ತೆ ಕಿರಿದಾಗಿರುವುದರ ಜತೆಗೆ ಭಾರಿ ವಾಹನಗಳ ಸಂಚಾರ ದಟ್ಟಣೆ ಮತ್ತು ಅಲ್ಲಲ್ಲಿ ಗುಂಡಿ ಬಿದ್ದ ಪರಿಣಾಮ ಸ್ವಂತ ವಾಹನಗಳು ಇರುವವರು ಚಿತ್ರದುರ್ಗ ಮೂಲಕ ಬೆಂಗಳೂರಿಗೆ ಹೋಗುತ್ತಿದ್ದರು. ಆದರೆ, ಈಗ ಎನ್‌ಎಚ್ 48ರಲ್ಲೂ ಸಂಚಾರ ದುಸ್ತರವಾಗಿದೆ.

ಆರು ವರ್ಷದ ಹಿಂದೆಯೇ ಮಂಜೂರಾಗಿದ್ದ ಶಿವಮೊಗ್ಗ- ತುಮಕೂರು ನಡುವಿನ 208 ಕಿ.ಮೀ. ಚತುಷ್ಪಥ ರಸ್ತೆ ಅಭಿವೃದ್ಧಿ ಯೋಜನೆ ಎರಡು ವರ್ಷದ ಹಿಂದೆ ಚಾಲನೆ ಪಡೆದುಕೊಂಡು ಈಗಲೂ ಕುಂಟುತ್ತಿದೆ. ಭಾರತ್ ಮಾಲಾ ಪರಿಯೋಜನೆ ಅಡಿ 6397.47 ಕೋಟಿ ರೂ. ವೆಚ್ಚದ ಈ ಯೋಜನೆಯನ್ನು 4 ಹಂತಗಳಲ್ಲಿ ಕೈಗೊಳ್ಳಲಾಗಿದೆ. ರಸ್ತೆ ಅಭಿವೃದ್ಧಿಯಾಗುತ್ತಿದೆ ಎಂಬ ಸಂತಸ ಒಂದು ಕಡೆಯಾದರೆ, ಪೂರ್ಣಕ್ಕೆ ಇನ್ನೂ ಎಷ್ಟು ವರ್ಷ ಬೇಕು ಎಂಬ ಬೇಸರ ಕಾಡುತ್ತಿದೆ.

ರಸ್ತೆ ಕಾಮಗಾರಿಯು ವಾಹನಗಳ ವೇಗಕ್ಕೆ ಕಡಿವಾಣ ಹಾಕಿದೆ. ಇದರ ಮಧ್ಯೆ ಹೊಸ ರಸ್ತೆ ಅಭಿವೃದ್ಧಿ ನೆಪದಲ್ಲಿ ಹಳೇ ರಸ್ತೆಯೂ ಹಾಳಾಗಿದ್ದು ಜಲ್ಲಿ ರಸ್ತೆ ಮೇಲೆ ಸಾಗಿದ ಅನುಭವ ನೀಡುತ್ತಿದೆ. ಶಿವಮೊಗ್ಗ- ಬೀರೂರು ನಡುವಿನ ಸುಮಾರು 50 ಕಿ.ಮೀ. ರಸ್ತೆ ಹಾಳಾಗಿದೆ. ದೂಳು, ಹಾಳಾದ ರಸ್ತೆ ಮತ್ತು ಹೊಸ ರಸ್ತೆಗಳ ನಡುವೆ ಏಲಿಕತದ ಸಂಚಾರದಿಂದಾಗಿ ದಾರಿ ಸಾಗುವುದೇ ಇಲ್ಲ.




ಶಿವಮೊಗ್ಗ- ಚನ್ನಗಿರಿ ನಡುವಿನ ಎನ್‌ಎಚ್ 48 ರಸ್ತೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ವೇಗಕ್ಕೆ ಕಡಿವಾಣ ಹಾಕಿವೆ.

> ಎನ್‌ಎಚ್ 206 ಮತ್ತು ಎನ್‌ಎಚ್ 48 ರಸ್ತೆಗಳ ಅಭಿವೃದ್ಧಿ ಕಾಮಗಾರಿ ಚುರುಕುಗೊಳಿಸಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಎರಡೂ ರಸ್ತೆಗಳ ಕಾಮಗಾರಿ ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.
>
> **- ಬಿ.ವೈ. ರಾಘವೇಂದ್ರ** ಸಂಸದ, ಶಿವಮೊಗ್ಗ

#### ಎನ್‌ಎಚ್48ರಲ್ಲೂ ಅದೇ ಗೋಳು

ಬಿ.ಎಚ್. ರಸ್ತೆಯಲ್ಲಿ ಬೇಸತ್ತು, ಚಿತ್ರದುರ್ಗ ಮಾರ್ಗವಾಗಿ ಬೆಂಗಳೂರಿಗೆ ತೆರಳಲು ಹೊರಟರೆ ಅಲ್ಲಿಯೂ ಅದೇ ಗೋಳು. ಶಿವಮೊಗ್ಗದಿಂದ ಚನ್ನಗಿರಿ ನಡುವೆ 36 ಕಿ.ಮೀ. ರಸ್ತೆ ಗುಂಡಿಮಯವಾಗಿದೆ. ಇದರ ಜತೆಗೆ 517 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಹೊಸ ಮೋರಿಗಳು, ಸೇತುವೆಗಳ ನಿರ್ಮಾಣ ಕಾಮಗಾರಿಯಿಂದಾಗಿ ರಸ್ತೆ ಧೂಳುಮಯವಾಗಿದೆ. ಇದರಿಂದಾಗಿ ಅರ್ಧ ತಾಸಿನ ದಾರಿಗೆ ಒಂದೂವರೆ ಗಂಟೆ ಸಮಯ ತಗಲುತ್ತಿದೆ. 340 ಕಿ.ಮೀ. ಪ್ರಯಾಣದಲ್ಲಿ 36 ಕಿ.ಮೀ. ದಾರಿಯು ಸುಸ್ತು ಹೊಡೆಸುತ್ತಿದೆ.




ನೀವೂ ಪ್ರಶ್ನೆ ಕೇಳಬಹುದು...

ವಾಟ್ಸ್ಆ್ಯಪ್ ಸಂಖ್ಯೆ: 6366422240

## ಪಂಚಾಂಗ

ಶುಭಕೃತ್ ನಾಮ ಸಂವತ್ಸರ

ರಾಹು ಕಾಲ: ಬೆ. 7.30 - 9.00

ಗುಳಿಕ ಕಾಲ: ಮ. 1.30-3.00

ಯಮಗಂಡ ಕಾಲ: ಬೆ. 10.30-12.00

ಸೂರ್ಯ ಉದಯ: 5.53 | ಸೂರ್ಯ ಅಸ್ತ: 6.42

## ಸ್ಟೇಟ್ ನ್ಯೂಸ್

### ಮನೆ ಮನೆಗೆ ಮೋದಿ ಸಾಧನೆ

### ಎಎಪಿಗೆ ಪೃಥ್ವಿರೆಡ್ಡಿ ಪುನರಾಯ್ಕೆ





# ಜಿಲ್ಲೆಗೊಂದು ರಫ್ತು ಉತ್ತೇಜಕ ಕೇಂದ್ರ

## ಮಹಾರಾಷ್ಟ್ರ ಮಾದರಿಯಲ್ಲಿ ಎಫ್‌ಪಿಒಗಳ ಸಾಮರ್ಥ್ಯ ವೃದ್ಧಿಗೆ ರಾಜ್ಯ ಸರಕಾರ ನಿರ್ಧಾರ

■ ಕೆಂಚೇಗೌಡ ಬೆಂಗಳೂರು
kenche.gowda@timesgroup.com

ರೈತ ಸಮುದಾಯಕ್ಕೆ ಸಾಂಸ್ಥಿಕ ಬಲ ತುಂಬಿ ಉತ್ಪಾದಕತೆ ಮತ್ತು ಮಾರುಕಟ್ಟೆ ಸಾಮರ್ಥ್ಯ ವೃದ್ಧಿ ಉದ್ದೇಶದಿಂದ ರಚನೆಯಾಗಿರುವ 1084 ರೈತ ಉತ್ಪಾದಕರ ಸಂಸ್ಥೆಗಳಿಗೆ (ಎಫ್‌ಪಿಒ) ಪೂರಕವಾಗಿ ಪ್ರತಿ ಜಿಲ್ಲೆಯಲ್ಲೂ ರಫ್ತು ಉತ್ತೇಜಕ ಕೇಂದ್ರಗಳನ್ನು ಸ್ಥಾಪಿಸುವ ಮಹತ್ವದ ನಿರ್ಧಾರವನ್ನು ರಾಜ್ಯ ಸರಕಾರ ಕೈಗೊಂಡಿದೆ.

ರೈತರ ಆದಾಯ ದ್ವಿಗುಣಕ್ಕಾಗಿ ಕೇಂದ್ರ ಸರಕಾರದಿಂದ ಲಭ್ಯವಾಗುವ ಶೇ.90ರಷ್ಟು ಸಹಾಯಧನ ಬಳಸಿಕೊಂಡು 'ಒಂದು ಜಿಲ್ಲೆ ಒಂದು ಉತ್ಪನ್ನ' ಕಲ್ಪನೆಯಂತೆ ಎಫ್‌ಪಿಒಗಳ ರಫ್ತು ಚಟುವಟಿಕೆಗಳಿಗೆ ಒತ್ತಾಸೆಯಾಗಲು ಸರಕಾರ ಈ ನಿರ್ಧಾರ ಮಾಡಿದೆ. ನೆರೆಯ ಮಹಾರಾಷ್ಟ್ರದಲ್ಲಿ ಎಫ್‌ಪಿಒಗಳು ಯಶಸ್ವಿಯಾಗಿದ್ದು, ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಜಾರಿಗೆ ಮುಂದಾಗಿದೆ.

ಸೋಯಾಬೀನ್, ಜೇನು, ಕೊಬ್ಬರಿ, ಬೆಲ್ಲ, ದ್ರಾಕ್ಷಿ, ಮಾವು, ಅಕ್ಕಿ ಹೀಗೆ ನಾನಾ ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ರೈತ ಉತ್ಪಾದಕರ ಸಂಸ್ಥೆಗಳು ಸಂಸ್ಕರಣೆ, ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಮಾಡಿ ಕಳುಹಿಸಲು ರಫ್ತು ಉತ್ತೇಜಕ ಕೇಂದ್ರಗಳು ನೆರವಾಗಲಿವೆ. ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಅಪೇಡಾ) ಹಾಗೂ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ರಫ್ತು ನಿಗಮ (ಕಪೆಕ್) ಸಹಯೋಗದಲ್ಲಿ ಈ ರಫ್ತು ಉತ್ತೇಜಕ ಕೇಂದ್ರಗಳು ಆರಂಭವಾಗಲಿವೆ. ಜಲಾನಯನ ಅಭಿವೃದ್ಧಿ ಇಲಾಖೆಯನ್ನು ನೋಡಲ್ ಏಜೆನ್ಸಿಯಾಗಿ ಆಯ್ಕೆ ಮಾಡಲಾಗಿದೆ.

**ಮಹಾರಾಷ್ಟ್ರ ಮಾದರಿ:** ಎಫ್‌ಪಿಒಗಳು ಇಡೀ ದೇಶದಲ್ಲೇ ಮಹಾರಾಷ್ಟ್ರದಲ್ಲಿ ದೊಡ್ಡ ಮಟ್ಟದಲ್ಲಿ ಯಶಸ್ವಿಯಾಗಿವೆ. ಅಲ್ಲಿನ ಎಫ್‌ಪಿಒಗಳು ಮಾವು, ಈರುಳ್ಳಿ ಹಾಗೂ ದ್ರಾಕ್ಷಿಯನ್ನು ರಫ್ತು ಮಾಡುತ್ತಿದ್ದು, ದೊಡ್ಡ ಮಟ್ಟದಲ್ಲಿ ವಹಿವಾಟು ನಡೆಸುತ್ತಿವೆ. ರಾಜ್ಯದ ಪ್ರತಿ ಜಿಲ್ಲೆಯಲ್ಲೂ ರಫ್ತು ಉತ್ತೇಜಕ ಕೇಂದ್ರಗಳನ್ನು ತೆರೆಯಲು ತಕ್ಷಣ 50 ಕೋಟಿ ರೂ. ಬಿಡುಗಡೆಗೆ ಸಿಎಂ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

**ಉತ್ತಮ ಬೇಡಿಕೆ:** ವಿಜಯಪುರದ ನಿಂಬೆ ಮತ್ತು ದ್ರಾಕ್ಷಿ, ಕೋಲಾರದ ಮಾವು, ಕರಾವಳಿಯ ಸಾಂಬಾರ ಪದಾರ್ಥ, ಬ್ಯಾಡಗಿಯ ಮೆಣಸಿನಕಾಯಿ, ಮಂಡ್ಯದ ಜೋನಿ ಬೆಲ್ಲ ಮತ್ತು ಎಳನೀರು, ಹಾಸನ ಮತ್ತು ತುಮಕೂರು ಜಿಲ್ಲೆಗಳ ಕೊಬ್ಬರಿ, ಕೊಪ್ಪಳದ ಅಕ್ಕಿಗೆ ವಿದೇಶಗಳಲ್ಲಿ ಉತ್ತಮ ಬೇಡಿಕೆಯಿದೆ. ಆದರೆ, ರಫ್ತು ಮಾಡಲು ಈ ಉತ್ಪನ್ನಗಳ ಸಂಸ್ಕರಣೆ, ಗ್ರೇಡಿಂಗ್, ಪ್ಯಾಕಿಂಗ್ ಮತ್ತು ಸ್ಟೋರೇಜ್ ಕೊರತೆ ಇದೆ. ಅದಕ್ಕಾಗಿ ಸೂಕ್ತ ತರಬೇತಿ ಮತ್ತು ಮೂಲಸೌಕರ್ಯ ಹೊಂದಿದ ರಫ್ತು ಉತ್ತೇಜಕ ಕೇಂದ್ರಗಳನ್ನು ತೆರೆಯಲು ಮುಂದಾಗಿದೆ.

**ರೈತರಿಗೆ ಬಲ:** ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಣ್ಣ ಹಿಡುವಳಿ ಕಾರಣಕ್ಕೆ ಹೂಡಿಕೆ, ತಂತ್ರಜ್ಞಾನ, ಗುಣಮಟ್ಟದ ಉತ್ಪಾದನೆ ಹಾಗೂ ಉತ್ತಮ ಮಾರುಕಟ್ಟೆ ಅವಕಾಶಗಳು ಸಿಗುತ್ತಿಲ್ಲ. ಈ ಸಮಸ್ಯೆಗೆ ಪರಿಹಾರವಾಗಿ ಕಂಪನಿಗಳ ಮಾದರಿಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ತಲಾ 500 ರಿಂದ 1000 ರೈತ ಸದಸ್ಯರಾಗಿರುವ ಒಟ್ಟು 1,084 ಎಫ್‌ಪಿಒಗಳು ಈಗಾಗಲೇ ಅಸ್ತಿತ್ವದಲ್ಲಿವೆ. ಬಜೆಟ್ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿ ಪರಿಶೀಲನೆಗಾಗಿ ಶುಕ್ರವಾರ ನಡೆದ ಕೃಷಿ ಇಲಾಖೆ ಸಭೆಯಲ್ಲಿ ರೈತ ಸಮುದಾಯವನ್ನು ಪರಿವರ್ತನೆಗೆ ಒಗ್ಗಿಸಲು ಎಫ್‌ಪಿಒಗಳಿಗೆ ಬಲತುಂಬುವುದು ಅಗತ್ಯ ಆಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.




**ಯಂತ್ರಧಾರೆಯ ಹೊಣೆ**

ಕೃಷಿ ಯಾಂತ್ರೀಕರಣಕ್ಕೆ ಒತ್ತು ನೀಡಲು ರಾಜ್ಯದ ಪ್ರತಿ ಹೋಬಳಿ ಕೇಂದ್ರಗಳಲ್ಲಿ ಆರಂಭವಾಗಿರುವ "ಕೃಷಿ ಯಂತ್ರಧಾರೆ" ಕೇಂದ್ರಗಳ ನಿರ್ವಹಣೆಯನ್ನು ಹಂತಹಂತವಾಗಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಒಪ್ಪಿಸಲು ಸರಕಾರ ನಿರ್ಧರಿಸಿದೆ. ಸಣ್ಣ ಭೂಹಿಡುವಳಿ ರೈತರಿಗೆ ಅನುಕೂಲವಾಗಿದ್ದರೂ, ಈ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕೆ ಸರಕಾರ ಈ ನಿರ್ಧಾರ ಕೈಗೊಂಡಿದೆ.

ದೇಶೀಯ ಮಾರುಕಟ್ಟೆ ಅವಲಂಬನೆ ತಪ್ಪಿಸಿ, ವಿದೇಶಿ ಮಾರುಕಟ್ಟೆಯ ಸ್ಪರ್ಧಾತ್ಮಕ ಅವಕಾಶಗಳನ್ನು ಬಳಸಿಕೊಳ್ಳಲು ಎಫ್‌ಪಿಒಗಳಿಗೆ ನೆರವಾಗುವುದಕ್ಕೆ ಪ್ರತಿ ಜಿಲ್ಲೆಯಲ್ಲೂ ರಫ್ತು ಉತ್ತೇಜಕ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಕಪೆಕ್ ಮತ್ತು ಅಪೇಡಾ ಸಹಯೋಗದಲ್ಲಿ ಈ ಕೇಂದ್ರಗಳು ಆರಂಭವಾಗಲಿವೆ.
-ಡಾ.ಎಂ.ವಿ.ವೆಂಕಟೇಶ್ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ

## ಖಾಲಿ ಕೈಯಲ್ಲಿ ಸಿಎಂ ದಿಲ್ಲಿ ಓಡಾಟ: ಎಚ್ಡಿಕೆ

**ಬೆಳಗಾವಿ:** ಸಿಎಂ ಬೊಮ್ಮಾಯಿ ದಿಲ್ಲಿಗೆ ಹೋಗಿ ಖಾಲಿ ಕೈಯಲ್ಲಿ ವಾಪಸ್ ಬರುತ್ತಾರೆ. ಪ್ರಧಾನಿ ಭೇಟಿಗೆ ಸಮಯ ತೆಗೆದುಕೊಳ್ಳಲು ಅವರಿಗೆ ಆಗುತ್ತಿಲ್ಲ ಎಂದು ಮಾಜಿ ಸಿಎಂ ಕುಮಾರಸ್ವಾಮಿ ವ್ಯಂಗ್ಯ ಮಾಡಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, "ಕೇಂದ್ರ ಸರಕಾರ ರಾಜ್ಯದ ಮುಖ್ಯಮಂತ್ರಿಗೆ ಗೌರವ ನೀಡುತ್ತಿಲ್ಲ" ಎಂದು ಅಸಮಾಧಾನ ವ್ಯಕ್ತಪಡಿಸಿದರು.

"ನವ ಕರ್ನಾಟಕ ನಿರ್ಮಾಣದ ಬಗ್ಗೆ ಸಿಎಂ ಮಾತನಾಡುತ್ತಾರೆ. ಆದರೆ ಉದ್ಯಮಿಗಳು ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಮುಂದೆ ಬರುತ್ತಿಲ್ಲ. ಬೆಂಗಳೂರಿನಲ್ಲಿ ಮೊನ್ನೆ ಪ್ರವಾಹ ಬಂತು. ಕೈಗಾರಿಕೆಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಹಾನಿ ಆಗಿದೆ. ಅವರಿಗೆ ಏನು ಪರಿಹಾರ ಕೊಡುತ್ತೀರಿ," ಎಂದು ಪ್ರಶ್ನಿಸಿದರು.

"ಸಿದ್ದರಾಮಯ್ಯ ನಮ್ಮ ಪಕ್ಷದಲ್ಲಿ ಮುಂದುವರಿದಿದ್ದರೆ ನಾನು ಸಿಎಂ ಆಗೋ ಪ್ರಶ್ನೆ ಬರುತ್ತಿರಲಿಲ್ಲ, ಸಿದ್ದು ಸಿಎಂ ಆಗುತ್ತಿದ್ದರೋ ಇಲ್ಲವೋ. ಆದರೆ ಜೆಡಿಎಸ್ ಪಕ್ಷದ ಮುಖಂಡರಾಗಿ ಅವರೇ ಇರುತ್ತಿದ್ದರು" ಎಂದರು.



ವಿಜಯಪುರದಲ್ಲಿ ವಾಯವ್ಯ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬೋಗೆ ಪರ ಕುಮಾರಸ್ವಾಮಿ ಮಾತನಾಡಿದರು.

## ನನ್ನ ಜೀವನ ತೆರೆದ ಪುಸ್ತಕ

### ಸಾಧನೆ ಪುಸ್ತಕ ರೂಪದಲ್ಲಿದೆ ಎಂದ ಹೊರಟ್ಟಿ

■ ವಿಕ ಸುದ್ದಿಲೋಕ ಹುಬ್ಬಳ್ಳಿ



## ಆತ್ಮಸಾಕ್ಷಿ ಮತ ಕೇಳ್ತೇವೆ: ಡಿಕೆಶಿ



## ಶಾಸಕರ ಸೆಳೆಯಲು ಸಚಿವರಿಗೆ ಟಾಸ್ಕ್

### ಬೊಮ್ಮಾಯಿ, ಬಿಎಸ್‌ವೈ ಭೇಟಿ ಮಾಡಿದ ಸಿಂಗ್ | ಸಿದ್ಧಗೊಂಡ ಬಿಜೆಪಿ ತಂತ್ರ

■ ವಿಕ ಸುದ್ದಿಲೋಕ ಬೆಂಗಳೂರು



ರಾಜ್ಯಸಭೆ ಚುನಾವಣೆ

## ಪರಿಷತ್ ಚುನಾವಣಾ ಫಲಿತಾಂಶ ಅಸೆಂಬ್ಲಿಗೆ ದಿಕ್ಸೂಚಿ

■ ವಿಕ ಸುದ್ದಿಲೋಕ ಮೈಸೂರು

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿಕೆ



# ದಿವ್ಯಾಂಗರ ಕುಂದುಕೊರತೆ ಆಲಿಸಲು ಆಯುಕ್ತರಿಲ್ಲ!

## ವಿಶೇಷಚೇತನರ ಹಕ್ಕುಗಳ ಆಯುಕ್ತರ ಹುದ್ದೆ ಭರ್ತಿಗೆ ಸರಕಾರದಿಂದ ವಿಳಂಬ ನೀತಿ

■ ಶ್ರೀಕಾಂತ್ ಹುಣಸವಾಡಿ ಬೆಂಗಳೂರು
Srikanth.G@timesgroup.com



**ಆಯುಕ್ತರ ಹುದ್ದೆ ನೋಟ**

2021 | 1.5 | 50

ಹಕ್ಕುಗಳ ಜಾಗೃತಿಗೂ ನಿರ್ಲಕ್ಷ್ಯ

ಆಯುಕ್ತಾಲಯವೇ ಮುಖ್ಯ

ನಿರ್ದೇಶನಾಲಯ ಸದ್ಯಕ್ಕೆ ಆಸರೆ

## ರಾಷ್ಟ್ರಪತಿ ಹುದ್ದೆಗೆ ಗೆಹ್ಲೋಟ್ ಭವಿಷ್ಯ ನುಡಿದ ಸೂರೀಶ್ವರ್‌ಜೀ



■ ವಿಕ ಸುದ್ದಿಲೋಕ ದೇವನಹಳ್ಳಿ

ಹಾಪ್ ಕಾಮ್ಸ್
ಅಲ್ಪಾವಧಿ ಟೆಂಡರ್ ಪ್ರಕಟಣೆ

ಆನೇಕಲ್ ಯೋಜನಾ ಪ್ರಾಧಿಕಾರ
www.anekal.lpa.gov.in
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

# ಕೃಷಿ ಪರಿಕರಕ್ಕೆ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆ ಪಡೆದರೆ ಲೈಸೆನ್ಸ್ ರದ್ದು

## ಕೋಟಿ ವೃಕ್ಷ ಆಂದೋಲನಕ್ಕೆ ಸಚಿವ ಬಿ.ಸಿ.ಪಾಟೀಲ್ ಚಾಲನೆ

■ ವಿಕ ಸುದ್ದಿಲೋಕ ತುಮಕೂರು



Published for the Proprietors, Metropolitan Media Company Limited, by R.J. Prakashan at No.4, KSCCF Compound, Pampa Mahakavi Road, Chamarajpet, Bengaluru - 560018 and printed by him at Fourth Estate Ltd., Bommasandra Industrial Area, Hosur Road, Bengaluru - 560099. Editor: Sudarshan Channangihalli - responsible for selection of news under PRB Act. ©All Rights Reserved. Reproduction in whole or in part without written permission is prohibited. RNI No.71653/99 Vol.23 Issue No.242

## ಸ್ಟೇಟ್ ನ್ಯೂಸ್

### ಸಿಮೆಂಟ್ ಇಟ್ಟಿಗೆ ಬಿದ್ದು ಮಗು ಸಾವು

**ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ):** ತಾಲೂಕಿನಲ್ಲಿ ಶನಿವಾರ ರಾತ್ರಿ ಬಿರುಗಾಳಿ ಸಹಿತ ಆಲಿಕಲ್ಲು ಮಳೆಗೆ ದೇವನಹಳ್ಳಿ 9ನೇ ವಾರ್ಡ್‌ನಲ್ಲಿ ಮನೆಯಲ್ಲಿ ಮಲಗಿದ್ದ ಮಗುವಿನ ಮೇಲೆ ಸಿಮೆಂಟ್ ಇಟ್ಟಿಗೆ ಬಿದ್ದು ಮೃತಪಟ್ಟಿದೆ. ಪಟ್ಟಣದ ನಿವಾಸಿ ಜನಾರ್ದನ್ ಮತ್ತು ಶ್ವೇತಾ ದಂಪತಿಯ 8 ತಿಂಗಳ ಮಗು ಮೃತಪಟ್ಟಿದೆ. ಪಕ್ಕದ ಮನೆಯ ಮುಂಭಾಗ ಹಾಕಲಾಗಿದ್ದ ಶೀಟ್ ಗಾಳಿಗೆ ಹಾರಿದ್ದು, ಅದರ ಮೇಲಿಟ್ಟಿದ್ದ ಸಿಮೆಂಟ್ ಇಟ್ಟಿಗೆ ಜನಾರ್ದನ್ ಮನೆಯ ಸಿಮೆಂಟ್ ಶೀಟ್ ಮೇಲೆ ಅಪ್ಪಳಿಸಿ ನಂತರ ಮಗುವಿನ ತಲೆಯ ಮೇಲೆ ಬಿದ್ದಿದೆ. ಗಾಯಗೊಂಡ ಮಗುವನ್ನು ಪೋಷಕರು ಆಸ್ಪತ್ರೆಗೆ ಕೊಂಡೊಯ್ಯುವಾದರೂ ಅಷ್ಟರಲ್ಲಿ ಅಸುನೀಗಿತ್ತು.

**5 ಲಕ್ಷ ಪರಿಹಾರ:** ಶಾಸಕ ನಿಸರ್ಗ ನಾರಾಯಣಸ್ವಾಮಿ ಹಾಗೂ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಸ್ಥಳಕ್ಕೆ ಭೇಟಿ ನೀಡಿ, ಸರಕಾರದಿಂದ 5 ಲಕ್ಷ ರೂ.ಗಳ ಪರಿಹಾರದ ಚೆಕ್‌ನ್ನು ಪೋಷಕರಿಗೆ ಹಸ್ತಾಂತರಿಸಿದರು. ನಿರ್ಲಕ್ಷ್ಯದಿಂದ ಪುರಸಭೆ ವ್ಯಾಪ್ತಿಗೆ ಒಳಪಟ್ಟವು ವಸತಿ ರಹಿತರಿಗೆ ಆಶ್ರಯ ಯೋಜನೆಯಡಿ ನಿವೇಶನ ನೀಡುವಂತೆ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

### ಅಪಘಾತ, ಕರಡಿ ಸಾವು

**ವಿಜಯನಗರ (ಹೊಸಪೇಟೆ):** ತಾಲೂಕಿನ ಮರಿಯಮ್ಮನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯ ಗೊಲ್ಲರಹಳ್ಳಿ ಕ್ರಾಸ್ ಬಳಿ ಭಾನುವಾರ ಬೆಳಗ್ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ಕರಡಿಯೊಂದು ಸ್ಥಳದಲ್ಲೇ ಮೃತಪಟ್ಟಿದೆ. ಹೆದ್ದಾರಿ ದಾಟುವಾಗ ಅಪರಿಚಿತ ವಾಹನ ಕರಡಿಗೆ ಡಿಕ್ಕಿ ಹೊಡೆದಿದೆ. ಮರಣೋತ್ತರ ಪರೀಕ್ಷೆ ನಂತರ ಗುಂಡಾ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

### ಸಿಡಿಲಿಗೆ ಇಬ್ಬರು ಮಹಿಳೆಯರು ಬಲಿ

**ಯಲಬುರ್ಗಾ (ಕೊಪ್ಪಳ):** ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಸಿಡಿಲು ಬಡಿದು ಇಬ್ಬರು ಮಹಿಳೆಯರು ಮೃತಪಟ್ಟು, ಮೂವರು ಗಂಭೀರ ಗಾಯಗೊಂಡಿರುವ ಘಟನೆ ತಾಲೂಕಿನ ಚಿಕ್ಕಮ್ಯಾಗೇರಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ದೇವಮ್ಮ ಮುದೇನೂರ (55) ಹಾಗೂ ರೇಷ್ಮಾ ಚಲವಾದಿ (27) ಮೃತರು. ಇವರ ಜತೆಯಲ್ಲಿದ್ದ ಯಮನವ್ವ ಮುದೇನೂರ, ಅನ್ನಕ್ಕ ಚಲವಾದಿ, ರತ್ನವ್ವ ಸುಣಗಾರ ಅವರಿಗೆ ಗಾಯಗಳಾಗಿದ್ದು, ಯಲಬುರ್ಗಾ ಆಸ್ಪತ್ರೆಗೆ ದಾಖಲಿಸಲಾಗಿದೆ.

---

ಕೋರ್ಟ್‌ಗೆ ಸಲ್ಲಿಸಿರುವ ಆಕ್ಷೇಪಣಾ ಅರ್ಜಿಯಲ್ಲಿ 'ಪಿಎಸ್‌ಐ' ಹುದ್ದೆ ಮಾರಾಟ ದೃಢೀಕರಿಸಿದ ಸಿಐಡಿ

# 95 ಲಕ್ಷ ರೂ.ಗೆ ಎರಡು ಹುದ್ದೆ ಬಿಕರಿ

■ ಮಂಜುನಾಥ ಲಗುಮೇನಹಳ್ಳಿ ಬೆಂಗಳೂರು
manjunatha.s@timesgroup.com



ರಾಜ್ಯದಲ್ಲಿ ಸಂಚಲನ ಸೃಷ್ಟಿಸಿರುವ 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಹಗರಣದಲ್ಲಿ ಕೆಲವರಿಗೆ ಲಕ್ಷಗಟ್ಟಲೆ ಹಣಕ್ಕೆ ಹುದ್ದೆಗಳನ್ನು ಮಾರಾಟ ಮಾಡಲಾಗಿತ್ತು ಎಂಬ ಅಧಿಕೃತ ಮಾಹಿತಿ ಬಯಲಾಗಿದೆ.

ತಾತ್ಕಾಲಿಕ ಪಟ್ಟಿಯಲ್ಲಿ ಹುದ್ದೆ ಗಿಟ್ಟಿಸಿರುವ 22 ಮಂದಿಯ ಜಾತಕ ಜಾಲಾಡಿರುವ ಸಿಐಡಿ ತನಿಖಾಧಿಕಾರಿಗಳು, ಈಗಾಗಲೇ ಹಗರಣದಲ್ಲಿ ಬಂಧಿತರಾಗಿರುವ ಕೆಲ ಆರೋಪಿಗಳು ನೇಮಕಾತಿ ವಿಭಾಗದ ಸಿಬ್ಬಂದಿಗೆ ಹಣ ಕೊಟ್ಟಿರುವುದನ್ನು ಪತ್ತೆಹಚ್ಚಿದ್ದಾರೆ. ಲಕ್ಷಗಟ್ಟಲೆ ಹಣ ಪಡೆದಿದ್ದ ನೇಮಕಾತಿ ವಿಭಾಗದ ಹೆಡ್ ಕಾನ್‌ಸ್ಟೆಬಲ್ ಹರ್ಷ ಸೇರಿ ಹಲವರು ಒಎಂಆರ್ ತಿದ್ದುವ ಕೆಲಸ ಮಾಡಿದ್ದರು ಎಂಬುದನ್ನು ಬಯಲಿಗೆ ಎಳೆದಿದ್ದಾರೆ.

ಈ ಪೈಕಿ ಆರೋಪಿ ಎಚ್.ಯಶವಂತ್‌ಗೌಡ (29) ಹಾಗೂ ಬಿ.ಸಿ.ವೆಂಕಟೇಶ್‌ಗೌಡ ಇಬ್ಬರೂ ಮಧ್ಯವರ್ತಿಗಳ ಮೂಲಕ ನೇಮಕಾತಿ ವಿಭಾಗದ ಹೆಡ್‌ಕಾನ್‌ಸ್ಟೆಬಲ್ ಹರ್ಷನಿಗೆ 95 ಲಕ್ಷ ರೂ. ಹಣ ಸಂದಾಯ ಮಾಡಿದ್ದರು. ಅದರ ಫಲವಾಗಿ ಇಬ್ಬರ ಒಎಂಆರ್ ಶೀಟ್‌ಗಳನ್ನು ತಿದ್ದಲಾಗಿತ್ತು. ಪರಿಣಾಮ ಪಿಎಸ್‌ಐ ತಾತ್ಕಾಲಿಕ ಪಟ್ಟಿಯಲ್ಲಿ ಯಶವಂತ್‌ಗೌಡ 8ನೇ ರ‍್ಯಾಂಕ್ ಪಡೆದಿದ್ದರು. ವೆಂಕಟೇಶ್‌ಗೌಡ 43ನೇ ರ‍್ಯಾಂಕ್ ಪಡೆದು ಪಿಎಸ್‌ಐ ಹುದ್ದೆ ಗಿಟ್ಟಿಸಿದ್ದರು.




ಚಿಕ್ಕಬಳ್ಳಾಪುರ ಹೋಬಳಿಯ ಸಿಂಗನಹಳ್ಳಿ ಗ್ರಾಮದ ನಿವಾಸಿ ಯಶವಂತ್‌ಗೌಡ 2021ರ ಆಗಸ್ಟ್‌ನಿಂದ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಪಿಎಸ್‌ಐ ಆಗಿ ನೇಮಕಗೊಂಡು ಪ್ರೊಬೆಷನರಿ ಅವಧಿಯ ಸೇವೆಯಲ್ಲಿದ್ದ. ಆದರೆ, ಆತನಿಗೆ ಸಿವಿಲ್ ಪಿಎಸ್‌ಐ ಆಗಬೇಕೆಂಬ ಆಕಾಂಕ್ಷೆಯಿತ್ತು.

ಹಣ ಕೊಟ್ಟು ಪಿಎಸ್‌ಐ ಹುದ್ದೆ ಗಿಟ್ಟಿಸಿಕೊಳ್ಳುವ ಇರಾದೆ ಆತನಿಗಿತ್ತು. ಹೀಗಾಗಿ, ಡಿಜಿಪಿ ಕಚೇರಿಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದ ಮಂಜುನಾಥ್ ಮಧ್ಯಸ್ಥಿಕೆಯಲ್ಲಿ ಬರೋಬ್ಬರಿ 45 ಲಕ್ಷ ರೂ.ಗಳನ್ನು ಹೆಡ್‌ಕಾನ್‌ಸ್ಟೆಬಲ್ ಹರ್ಷನಿಗೆ ನೀಡಿದ್ದ ಎಂಬುದನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಪ್ರಕರಣದ 6ನೇ ಆರೋಪಿ ಎಂಜಿನಿಯರಿಂಗ್ ಪದವೀಧರ ಬಿ.ಸಿ.ವೆಂಕಟೇಶ್ ಗೌಡನಿಗೆ 'ಪಿಎಸ್‌ಐ' ಹುದ್ದೆ ಕೊಡಿಸುವ ದಲ್ಲಾಳಿಗಳಾಗಿ ಚನ್ನರಾಯಪಟ್ಟಣ ಪುರಸಭೆ ಮಾಜಿ ಅಧ್ಯಕ್ಷ ಸಿ.ಎನ್.ಶಶಿಧರ ಹಾಗೂ ಕೇಶವಮೂರ್ತಿ ಕೆಲಸ ಮಾಡಿದ್ದರು. ವೆಂಕಟೇಶ್‌ಗೌಡ ತನ್ನ ಒಎಂಆರ್ ತಿದ್ದಿ ಪಿಎಸ್‌ಐ ಹುದ್ದೆ ಪಡೆಯುವಂತೆ ಅನುಕೂಲ ಮಾಡಿಕೊಡಲು ಕೇಶವಮೂರ್ತಿಗೆ 50 ಲಕ್ಷ ರೂ. ನೀಡಿದ್ದ. ಅದೇ ಹಣವನ್ನು ಕೇಶವಮೂರ್ತಿ ಬಳಿ ಪಡೆದ ಶಶಿಧರ್, ಹೆಡ್ ಕಾನ್‌ಸ್ಟೆಬಲ್ ಹರ್ಷನಿಗೆ ತಲುಪಿಸಿದ್ದ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮದಲ್ಲಿ ಹಣದ ಹರಿವು ಹಾಗೂ ಒಎಂಆರ್ ತಿದ್ದುವಿಕೆ ಅಕ್ರಮ ಕುರಿತಾದ ತನಿಖಾ ಮಾಹಿತಿಯನ್ನು ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಆರೋಪಿಗಳಾದ ಯಶವಂತ್‌ಗೌಡ ಹಾಗೂ ಶಶಿಧರ್ ಅವರು ಜಾಮೀನು ಕೋರಿ ನ್ಯಾಯಾಲಯಕ್ಕೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು.

ಈ ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸಿರುವ ಸಿಐಡಿ ಅಧಿಕಾರಿಗಳು, ನೇಮಕಾತಿ ವಿಭಾಗದ ಹರ್ಷನಿಗೆ ಯಶವಂತ್‌ಗೌಡ ಹಾಗೂ ವೆಂಕಟೇಶ್ ಪರವಾಗಿ 95 ಲಕ್ಷ ರೂ.ಹಣ ಸಂದಾಯವಾಗಿರುವುದು ತನಿಖೆಯಲ್ಲಿ ದೃಢಪಟ್ಟಿರುವುದಾಗಿ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ಈ ಅಂಶವನ್ನು ಪರಿಗಣಿಸಿರುವ ನ್ಯಾಯಾಲಯ, ಆರೋಪಿಗಳ ಜಾಮೀನು ಅರ್ಜಿಗಳನ್ನು ವಜಾಗೊಳಿಸಿದೆ.

### ಮಮತೇಶ್‌ಗೌಡನಿಗೆ ಜಾಮೀನು ನಿರಾಕರಣೆ

ಪ್ರಕರಣದಲ್ಲಿ ಬಂಧಿತನಾಗಿರುವ ಹೆಡ್‌ಕಾನ್‌ಸ್ಟೆಬಲ್ ಮಮತೇಶ್‌ಗೌಡನ ಜಾಮೀನು ಅರ್ಜಿಯೂ ತಿರಸ್ಕೃತಗೊಂಡಿದೆ. ಆರೋಪಿ ಮಮತೇಶ್‌ಗೌಡ ಒಎಂಆರ್ ತಿದ್ದುವ ಅಕ್ರಮದಲ್ಲಿ ಶಾಮೀಲಾಗಿರುವುದಕ್ಕೆ ಸಾಕ್ಷ್ಯಾಧಾರಗಳು ದೊರೆತಿವೆ. ಪ್ರಕರಣದಲ್ಲಿ ಇನ್ನೂ ಹಲವು ಮಂದಿ ಮಧ್ಯವರ್ತಿಗಳು ಹಾಗೂ ಸರಕಾರಿ ಅಧಿಕಾರಿಗಳ ಬಂಧನ ಆಗಬೇಕಿದೆ. ಆರೋಪಿ ಜಾಮೀನು ಪಡೆದರೆ ರಾಜಕೀಯ ಪ್ರಭಾವ ಬಳಸಿ ತನಿಖೆಯ ಮೇಲೆ ಬೀಳುವ ಸಾಧ್ಯತೆಯಿದೆ. ಸಾಕ್ಷ್ಯಾಧಾರಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಹೀಗಾಗಿ, ಜಾಮೀನು ನೀಡಬಾರದು ಎಂದು ಸಿಐಡಿ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಈ ವಾದ ಪುರಸ್ಕರಿಸಿರುವ ಸಿಟಿ ಸಿವಿಲ್ ಕೋರ್ಟ್, ಮಮತೇಶ್‌ಗೌಡನ ಅರ್ಜಿ ವಜಾಗೊಳಿಸಿದೆ.

### ಒಎಂಆರ್ ಬಾಕ್ಸ್ ಅರೆಬರೆ ತುಂಬಿದ್ದ ಯಶವಂತ್!

ಪಿಎಸ್‌ಐ ಪರೀಕ್ಷೆಗೆ ಹಾಜರಾಗಿದ್ದ ಯಶವಂತ್‌ಗೌಡ 2ನೇ ಪ್ರಶ್ನೆಪತ್ರಿಕೆಯ 99 ಪ್ರಶ್ನೆಗಳಿಗೆ ಉತ್ತರಿಸಿದ್ದರು. ಆದರೆ, ಒಎಂಆರ್ ಶೀಟ್‌ನ ಉತ್ತರ ಬಾಕ್ಸ್‌ನಲ್ಲಿ ಕೆಲವು ಪ್ರಶ್ನೆಗಳ ಬಾಕ್ಸ್‌ಗಳಲ್ಲಿ ಅರ್ಧ ತುಂಬಿದ್ದರೆ, ಇನ್ನೂ ಕೆಲವು ಬಾಕ್ಸ್‌ಗಳಲ್ಲಿ ಭಾಗಶಃ ಮಾತ್ರ ತುಂಬಿರುವುದು ಒಎಂಆರ್ ಶೀಟ್‌ನ ಕಾರ್ಬನ್ ಪ್ರತಿಯಲ್ಲಿ ಕಂಡು ಬಂದಿತ್ತು. ಆದರೆ, ಆತನ ಅಸಲಿ ಒಎಂಆರ್ ಪರಿಶೀಲಿಸಿದಾಗ ವ್ಯತ್ಯಾಸ ಕಂಡು ಬಂದಿದ್ದು, ಎಫ್‌ಎಸ್‌ಎಲ್‌ಗೆ ಕಳುಹಿಸಿದಾಗ ಆತನ ಅಸಲಿ ಒಎಂಆರ್ ತಿದ್ದಿರುವುದು ದೃಢಪಟ್ಟಿತ್ತು ಎಂದು ಸಿಐಡಿ ತನಿಖಾ ಮೂಲಗಳು ತಿಳಿಸಿವೆ.






### ಸಿಲಿಂಡರ್ ಸ್ಫೋಟ, ಯುವಕರ ಸಾವು

**ಕೂಡ್ಲಿಗಿ (ವಿಜಯನಗರ):** ತಾಲೂಕಿನ ಗುಡೇಕೋಟೆ ಬಳಿಯ ಸಂಕ್ಲಾಪುರ ಕೊರಚರಹಟ್ಟಿ ಕ್ರಾಸ್ ಬಳಿ ಭಾನುವಾರ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಯುವಕರು ಮೃತಪಟ್ಟಿದ್ದಾರೆ. ಶ್ರೀಕಾಂತ್ (23), ಶಿವಣ್ಣ (28) ಮೃತಪಟ್ಟವರು. ಸಂಕ್ಲಾಪುರ ಗ್ರಾಮದ ಬೋರಣ್ಣ ತಂದೆ ಹೊಂಡಬೋರಣ್ಣ ಅವರ ಎಗ್ ರೈಸ್ ಅಂಗಡಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅವಘಡ ಸಂಭವಿಸಿದೆ.

---

### ಕರಾವಳಿಯಲ್ಲಿ ಸ್ಯಾಟಲೈಟ್ ಫೋನ್ ಸದ್ದು

**ಮಂಗಳೂರು:** ಕರಾವಳಿಯ ಮೂರು ಕಡೆ ಹಾಗೂ ಚಿಕ್ಕಮಗಳೂರಿನ ದುರ್ಗಾಶ್ರಣ್ಯದಲ್ಲಿ ಸುಮಾರು ಆರು ತಿಂಗಳ ಬಳಿಕ ನಿಷೇಧಿತ ಸ್ಯಾಟಲೈಟ್ ಫೋನ್‌ಗಳ ಸಿಗ್ನಲ್ ಮತ್ತೆ ಪತ್ತೆಯಾಗಿದೆ.

ಮೇ 23ರಿಂದ 29ರವರೆಗೆ ಮಂಗಳೂರಿನ ಎರಡು ಕಡೆ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಯ ದುರ್ಗಾರಣ್ಯದಲ್ಲಿ ಸ್ಯಾಟಲೈಟ್ ಫೋನ್ ಸದ್ದು ಮಾಡಿರುವುದನ್ನು ಕೇಂದ್ರ ಗುಪ್ತಚರ ಇಲಾಖೆ ಪತ್ತೆ ಮಾಡಿದೆ ಎಂದು ವರದಿಯಾಗಿದೆ.

ರಾಜ್ಯ ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ) ಸ್ಥಳಕ್ಕೆ ತೆರಳಿ ತನಿಖೆ ಕೈಗೊಂಡಿದೆ. 10 ದಿನಗಳ ಅವಧಿಯಲ್ಲಿ 4 ಕಡೆಗಳಿಂದ ಸ್ಯಾಟಲೈಟ್ ಫೋನ್ ಸಿಗ್ನಲ್ ಸಂಪರ್ಕಗೊಂಡಿರುವುದು ಪತ್ತೆಯಾಗಿದೆ. ನಿಷೇಧಿತ ಸ್ಯಾಟಲೈಟ್ ಫೋನ್ ಬಳಕೆ ಮಾಡಿರುವ ವ್ಯಕ್ತಿಗಳು ಯಾರು ಎಂಬುದು ನಿಗೂಢವಾಗಿದೆ. ಕರಾವಳಿ ಮತ್ತು ಮಲೆನಾಡಿನಲ್ಲಿ ಸಿಗ್ನಲ್ ಪತ್ತೆಯಾಗುತ್ತಿರುವುದು ಒಂದು ವರ್ಷದಲ್ಲಿ ಇದು ಮೂರನೇ ಬಾರಿ. ಆದರೂ ಈ ಕರೆಯ ಮೂಲ, ಏಕಾಗಿ ಕರೆ ಮಾಡುತ್ತಾರೆ? ಯಾರು ಕರೆ ಮಾಡುತ್ತಾರೆ? ಎಂಬುದು ಇದುವರೆಗೂ ಪತ್ತೆಯಾಗಿಲ್ಲ.

ಈ ಬಾರಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ-ಶಿರಸಿಯ ಮಧ್ಯೆ ಇರುವ ದುರ್ಗಾರಣ್ಯದಲ್ಲಿ, ಮಂಗಳೂರು ನಗರ ಹೊರಭಾಗದ ನಾಟೆಕಲ್, ಕುಳಾಯಿ ಹಾಗೂ ಚಿಕ್ಕಮಗಳೂರಿನ ಕಡೂರು-ಬೀರೂರು ನಡುವಿನ ಅರಣ್ಯದಲ್ಲಿ ಸಿಗ್ನಲ್ ಪತ್ತೆಯಾಗಿದೆ.

### ಜಾಮಿಯಾ ಮಸೀದಿಗೆ ಬಿಗಿ ಭದ್ರತೆ

■ ವಿಕ ಸುದ್ದಿಲೋಕ ಶ್ರೀರಂಗಪಟ್ಟಣ (ಮಂಡ್ಯ)

ಪಟ್ಟಣದ ಜಾಮಿಯಾ ಮಸೀದಿ ಸುತ್ತ ಬಂದೋಬಸ್ತ್ ಕಲ್ಪಿಸಲಾಗಿದ್ದು, ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ.

ಶ್ರೀ ಆಂಜನೇಯ ದೇವಾಲಯ ಕೆಡವಿ ಜಾಮಿಯಾ ಮಸೀದಿ ನಿರ್ಮಿಸಲಾಗಿದ್ದು, ಮದರಸಾವನ್ನಾಗಿ ಮಾಡಿಕೊಳ್ಳಲಾಗಿದೆ. ಅಲ್ಲಿ ಮತ್ತೆ ದೇಗುಲ ನಿರ್ಮಾಣ ಆಗಬೇಕೆಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ಕಾರ್ಯಕರ್ತರು ಹೋರಾಟ ಹಮ್ಮಿಕೊಂಡಿದ್ದ ಶ್ರೀರಂಗಪಟ್ಟಣ ಚಲೋ ಸ್ಥಗಿತಗೊಂಡರೂ 2ನೇ ದಿನ ಭಾನುವಾರವೂ ಮಸೀದಿಗೆ ಭದ್ರತೆ ಒದಗಿಸಲಾಗಿತ್ತು.

ಮಸೀದಿ ಒಳಗೆ ಯಾರು ಪ್ರವೇಶ ಮಾಡದಂತೆ ಬಾಗಿಲು ಹಾಕಲಾಗಿದೆ. ಸುತ್ತಲೂ ನಿರ್ಮಿಸಿದ್ದ ಕಬ್ಬಿಣದ ಬೇಲಿ ತೆರವುಗೊಳಿಸಿಲ್ಲ. ಸಿಪಿಐ, ಮೂವರು ಪಿಎಸ್‌ಐಗಳು, ಎಎಸ್‌ಐಗಳು, 2 ಕೆಎಸ್‌ಆರ್‌ಪಿ, 2 ಡಿಆರ್ ತುಕಡಿ, 50 ಮಂದಿ ಪೊಲೀಸರನ್ನು ನಿಯೋಜಿಸಲಾಗಿದೆ. ಇನ್ನೂ ಎರಡು ದಿನ ಇದೇ ರೀತಿಯ ಭದ್ರತೆ ಕಲ್ಪಿಸಲಾಗುತ್ತದೆ. ಪರಿಸ್ಥಿತಿ ಅರಿತು ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಶ್ರೀರಂಗಪಟ್ಟಣ ಚಲೋ ಹಿನ್ನೆಲೆ ಶುಕ್ರವಾರದಿಂದ ಭಾನುವಾರ ಬೆಳಗ್ಗೆವರೆಗೆ ನಿಷೇಧಾಜ್ಞೆ ಹೇರಲಾಗಿತ್ತು.



ಜಾಮಿಯಾ ಮಸೀದಿಯ ಬಾಗಿಲು ಮುಚ್ಚಿ ಪೊಲೀಸರನ್ನು ನಿಯೋಜಿಸಿರುವುದು.

### ಕುಕ್ಕೆಗೆ 60 ಸಾವಿರಕ್ಕೂ ಅಧಿಕ ಭಕ್ತರು



ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಾನುವಾರ ಆಶ್ಲೇಷ, ಷಷ್ಠಿ ಷಷ್ಠಿ ದಿನ ಕಂಡುಬಂದ ಜನಸಂದಣಿ.

■ ವಿಕ ಸುದ್ದಿಲೋಕ ಸುಬ್ರಹ್ಮಣ್ಯ (ದ.ಕ.)

ಭಾನುವಾರದ ರಜಾ ದಿನ ಹಾಗೂ ಆಶ್ಲೇಷ, ಷಷ್ಠಿ ಷಷ್ಠಿ ದಿನವಾಗಿದ್ದರಿಂದ ಶ್ರೀ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯಕ್ಕೆ 60 ಸಾವಿರಕ್ಕೂ ಅಧಿಕ ಭಕ್ತರು ಭೇಟಿ ನೀಡಿ ದೇವರ ದರ್ಶನ ಪಡೆದರು.

ವಿಶೇಷವಾಗಿ ಹೊರ ರಾಜ್ಯಗಳಿಂದ ಅಧಿಕ ಸಂಖ್ಯೆಯ ಭಕ್ತರು ಆಗಮಿಸಿ ಸೇವೆ ನೆರವೇರಿಸಿದರು. ಕ್ಷೇತ್ರದಲ್ಲಿ 2,594 ಆಶ್ಲೇಷ ಬಲಿ ಪೂಜೆ ನಡೆದಿದೆ. ಇವರ ರಶೀದಿಗಾಗಿ ಮುಂಜಾನೆ 4 ಗಂಟೆಯಿಂದಲೇ ಸರದಿ ಸಾಲು ಕಂಡು ಬಂತು. ಕುಕ್ಕೆ ರಥಬೀದಿಯುದ್ದಕ್ಕೂ ಭಕ್ತರ ಸಂದಣಿ ಉಂಟಾಯಿತು. ಪ್ರವೇಶ ದ್ವಾರ, ದೇವಾಲಯದ ಹೊರಾಂಗಣ ಸೇರಿ ಕ್ಷೇತ್ರದ ಹಲವೆಡೆ ನೂಕುನುಗ್ಗಲು ಉಂಟಾಗಿತ್ತು.

**ವಸತಿ ಇಲ್ಲದೆ ಪರದಾಟ:** ಶನಿವಾರ ಸಂಜೆಯಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರಲಾರಂಭಿಸಿದ್ದರು. ಹೀಗಾಗಿ, ಶನಿವಾರ ದೇವಳದ ಹಾಗೂ ಖಾಸಗಿ ವಸತಿಗೃಹಗಳು ಭರ್ತಿಯಾಗಿದ್ದವು. ಕೆಲವು ಭಕ್ತಾದಿಗಳಿಗೆ ವಸತಿ ವ್ಯವಸ್ಥೆ ಸಿಗದೆ ಆಗಮಿಸಿದ ತಮ್ಮ ವಾಹನಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಹಾಗೂ ರಥದ ಆಶ್ಲೇಷದಲ್ಲಿನ ಇಂಟರ್‌ಲಾಕ್‌ನಲ್ಲಿ ಮಲಗಿ ರಾತ್ರಿ ಕಳೆಯುವಂತಾಯಿತು.

**ನಾಗ ಕ್ಷೇತ್ರದಲ್ಲಿ ಭಕ್ತ ಜನಸಾಗರ**

**ಮಂಗಳೂರು:** ಷಷ್ಠಿ ಪ್ರಕಾರ ಭಾನುವಾರ ಷಷ್ಠಿ ಮತ್ತು ಆಶ್ಲೇಷಾ ನಕ್ಷತ್ರ ಒಂದೇ ದಿನ ಬಂದಿರುವ ಕಾರಣ ಅನಂತ ಪದ್ಮನಾಭ, ಸುಬ್ರಹ್ಮಣ್ಯ, ನಾಗ ಕ್ಷೇತ್ರದಲ್ಲಿ ಭಾರಿ ಭಕ್ತಸಾಗರ ನೆರೆದಿತ್ತು.

ಮಂಗಳೂರಿನ ಕುಡುಪು ಶ್ರೀ ಅನಂತಪದ್ಮನಾಭ ಕ್ಷೇತ್ರ, ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಕ್ಷೇತ್ರ, ಮೂಡುಬಿದಿರೆ ಶ್ರೀ ಅನಂತ ಪದ್ಮನಾಭ ಕ್ಷೇತ್ರ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿ ಬೆಳಗ್ಗಿನಿಂದಲೇ ಭಕ್ತರ ಸಂಖ್ಯೆ ಹೆಚ್ಚಿತ್ತು.


ADVERTORIAL


### ಆಯುರ್ವೇದದ ಮೂಲಕ ಪಾರ್ಶ್ವವಾಯು ರೋಗಿಗೆ ಉಪಶಮನ ದೊರೆತಿದೆ



Dr. Dassan's

www.drdassans.com ಮತ್ತು dr.dassans channel (Youtube) ...





### ದೇಶಾದ್ಯಂತ ಅಧಿಕಾರ ಹೋದರೂ, ಕೈಗೆ ಬುದ್ಧಿ ಬಂದಿಲ್ಲ ಎಂದ ಬೊಮ್ಮಾಯಿ

# ಆರೆಸ್ಸೆಸ್ ಟೀಕಿಸುತ್ತಲೇ ಕಾಂಗ್ರೆಸ್ ಅವನತಿ: ಸಿಎಂ

■ ವಿಕ ಸುದ್ದಿಲೋಕ ಹುಬ್ಬಳ್ಳಿ / ಬಾಗಲಕೋಟೆ

ರಾಜಕೀಯಕ್ಕಾಗಿ ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡುತ್ತಾ ಬಂದಿರುವ ಕಾಂಗ್ರೆಸ್ ಈಗಾಗಲೇ ದೇಶಾದ್ಯಂತ ಅಧಿಕಾರ ಕಳೆದುಕೊಂಡರೂ ಬುದ್ಧಿ ಬಂದಿಲ್ಲ ಎಂದು ಸಿಎಂ ಬಸವರಾಜ ಬೊಮ್ಮಾಯಿ ಕುಟುಕಿದರು.



ಹುಬ್ಬಳ್ಳಿ ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಕಾಂಗ್ರೆಸ್ ಅವನತಿ ಕಾಣುತ್ತಿದ್ದರೂ ಬುದ್ಧಿ ಕಲಿಯದ ಸಿದ್ದರಾಮಯ್ಯ ಅದನ್ನೇ ಮುಂದುವರಿಸಿದ್ದಾರೆ. ಬರುವ ದಿನಗಳಲ್ಲಿ ರಾಜ್ಯದಲ್ಲೂ ಕಾಂಗ್ರೆಸ್‌ಗೆ ಅದೇ ಗತಿ ಬರುವುದು ನಿಶ್ಚಿತ," ಎಂದು ಹೇಳಿದರು.

"ದೇಶಭಕ್ತಿ ಮೈಗೂಡಿಸಿಕೊಂಡಿರುವ ಆರ್‌ಎಸ್‌ಎಸ್ ಕಳೆದ 75 ವರ್ಷಗಳಿಂದ ಜನರ ಸೇವೆ ಮಾಡಿಕೊಂಡು ಬಂದಿದೆ. ..." ಎಂದು ಆರೋಪಿಸಿದರು.

**ಸಿದ್ದುಗೆ ಚಡ್ಡಿ ಕಳಿಸ್ತೇವೆ:** ...

## ಪರಿಷ್ಕೃತ ಪಠ್ಯ ಕಸದ ಬುಟ್ಟಿಗೆಸೆಯಿರಿ: ಸಿದ್ದು

**ಬೆಂಗಳೂರು:** ... ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

**ಧರ್ಮ ಕೃತಿಯಿದ್ದಕ್ಕೆ ನಿರ್ಲಕ್ಷ್ಯವೇ?:** ...



## ಚಡ್ಡಿ ಹೇಳಿಕೆ, ರಾಜ್ಯಕ್ಕೆ ಮುಜುಗರ

... ಎಂದು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ -ಬಿಜೆಪಿ ಪಕ್ಷದ ವಿರುದ್ಧ ಕಿಡಿಕಾರಿದರು.

**ದ್ವೇಷ ಮೂಡಿಸುವ ಕೆಲಸ:** ...



## ಪಠ್ಯದಲ್ಲಿ ಅಂಬೇಡ್ಕರ್ ನಿರ್ಲಕ್ಷ್ಯಕ್ಕೆ ಡಿಕೆಶಿ ಕಿಡಿ

**ಬೆಂಗಳೂರು:** ... ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ...



... - ಶ್ರೀ ಬಸವಜಯ ಮೃತ್ಯುಂಜಯ, ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠ




## ಪಿಯು ಉಪನ್ಯಾಸಕರಿಂದ ಹಿಂಬಾಕಿ ವಸೂಲಿಗೆ ಮುಂದಾದ ಇಲಾಖೆ

■ ದೇವರಾಜ್ ಕಡಕಪ್ಪರ ಬೆಂಗಳೂರು devarj.l@timesgroup.com

■ ... ಉಪನ್ಯಾಸಕರ ಆಗ್ರಹ

■ ಬಿ.ಇಡಿ ವೇತನ ಸೂಕ್ತ ರೀತಿಯಲ್ಲಿ ವೇತನ ನಿಗದಿಯಾಗಿಲ್ಲ ಎಂದ ಪಿಯು ಇಲಾಖೆ



ಸರಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೇತನ ಮತ್ತು ಬಡ್ತಿ ... ಮುಂದಾಗಿದ್ದು, 500ಕ್ಕೂ ಹೆಚ್ಚು ಉಪನ್ಯಾಸಕರು ಹಾಗೂ ಪ್ರಾಂಶುಪಾಲರನ್ನು ಆತಂಕಕ್ಕೀಡು ಮಾಡಿದೆ.

ರಾಜ್ಯದಲ್ಲಿರುವ 1,234 ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2013ರಲ್ಲಿ ನೇಮಕವಾಗಿ ಬಿ.ಇಡಿ ಪದವಿ ... 

... 2007ರಲ್ಲಿ ... 1,347 ಉಪನ್ಯಾಸಕರು ... 2013ರಲ್ಲೂ 991 ...


**ಉಪನ್ಯಾಸಕರ ಆಗ್ರಹ:** 2010ರಲ್ಲಿ ... 2013ರಲ್ಲಿ ...

- ಎ.ಎಚ್.ನಿಂಗೇಗೌಡ ಅಧ್ಯಕ್ಷ, ರಾಜ್ಯ ಸರಕಾರಿ ಪದವಿ ಪೂರ್ವ ಉಪನ್ಯಾಸಕರ ಸಂಘ

- ನೊಂದ ಉಪನ್ಯಾಸಕರು

## ಚಡ್ಡಿ ಸುಡುತ್ತೇನೆಂದವರ ಮನೆ ಸುಟ್ಟಿದೆ

**ಬೆಂಗಳೂರು:** ಚಡ್ಡಿ ಸುಡುತ್ತೇನೆ ಎಂದವರು ಮನೆಯನ್ನೇ ಸುಟ್ಟುಕೊಂಡಿದ್ದಾರೆ. ಆರ್‌ಎಸ್‌ಎಸ್ ಸಾಮರ್ಥ್ಯವೇನು ಎನ್ನುವುದು ಇಡೀ ಪ್ರಪಂಚಕ್ಕೆ ಗೊತ್ತಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಹೇಳಿದ್ದಾರೆ.



...

## ಬಸವಣ್ಣನ ಪಠ್ಯ ಪರಿಷ್ಕರಣೆ ಅಗತ್ಯ

**ಬೆಂಗಳೂರು:** ...



## ಭುವನೇಶ್ವರಿ ಪಠ್ಯ ಬದಲು ಸಿದ್ಧಾರೂಢ ಜಾತ್ರೆ

**ಬೆಂಗಳೂರು:** ...

**ಪಠ್ಯ ವಿವಾದಕ್ಕೆ ಮತ್ತೊಂದು ಸೇರ್ಪಡೆ**

**ಕೇಸರೀಕರಣ ಟೀಕೆ:** ...

## ಸಿಡಿಲು ಬಡಿದು ಯೋಧ ಸಾವು

**ಶಿರೂರ (ಬಾಗಲಕೋಟೆ):** ... 31ನೇ ಬೆಟಾಲಿಯನ್ ಯೋಧ ... (41) ... ಸಿಡಿಲು ಬಡಿದು ಮೃತಪಟ್ಟಿದ್ದಾರೆ. ...



**ಇಂದು ಪಾರ್ಥಿವ ಶರೀರ:** ... 2008ರಲ್ಲಿ ...

---


# TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232

**TO BOOK YOUR TIMES INTERACT ADS**
Stay safe. Stay home.
Call/mail us for contact-less ad booking. To book your Times Interact ads
Call 080-23338111 / 9986482217
Email: ebenezer.winston@timesgroup.com
All digital payment solutions available

ಉದ್ಯೋಗ RECRUITMENT

SITUATION VACANT

ADMINISTRATION

MANAGERS

Income Generation. Opportunity for Retired, VRS, Self Employed, Teachers, Homemakers Fixed Pay & Incentives. Location:- Rajajinagar, R R Nagar, Peenya, HSR. 7411088997 / 8971384788

MARKETING, ADVERTISING & SALES

GENERAL

URGENT requirement Tele Caller. Graduate/freshers female candidates with good communication. good salary+ incentive. Call: 9108285425

MEDICAL

MEDICAL

SEVAKSHETRA HOSPITAL, 27th Cross, BSK 2nd Stage, Bangalore -70. Invites applications for the post of : 1) MEDICAL OFFICER: MBBS, 2) HR-MANAGER: Graduate / MBA in HR (min 5 yrs exp with knowledge of HR functions, Labour law & Disciplinary procedure). Apply to the General Manager Telephone : 26714194 / 26718067. E-MAIL: cbrws_skh@yahoo.co.in Last Date for Receipt of Application 7 Days

OTHER VACANCIES

CALL CENTRES

REQ. TEAM LEADER, TELECALLER, & FIELD EXECUTIVE For Banking Loan collection (salary 20k). direct recruitment to company Call:- 9620206756, 9620200756.

GENERAL

VRS - Bank & Govt Emp, Businessmen, Real Estate & Post Office Agent. Call : 9742944810

MULTIPLE VACANCIES

PART TIME JOBS

GLOBAL International India's No.1 Registered Co. Part-Time Job, M & F daily Income 8,000 to 12,000 PF & ESI. Call : 9513045046 / 7022770604

RETIRED PERSONS

JOB Opportunity for Retired, Men, House wife & Graduates in Reputed Company. Age 40 to 75, Bangalorians only. Earn up to 40,000/- Contact - 9741401834

WORK FROM HOME

PLEASE-JOIN for "Retired Officers Seminar on 8th June For Active Life and Additional 12 Lakhs income free Registration call 9035060141/ 9886255733

WE Have Something Special For The 60+ People Those Who Don't Want To Simply Sit At Home. to Know That Please Contact 9880008225

SITUATION VACANT

ಪ್ರವಾಸ TRAVEL

TOURS & TRAVELS

personal

CHANGE OF NAME

I, Sunita Devi Betala / Sunita Devi / Sunita Devi Jain / Sunita W/O Birendra Betala and residing At 504 A Pride Pavillion Apts , 1 stage , 6th Phase , West of Chord Road Bangalore North -10 has change my name and will be Known as Sunitha Betala for all the purposes.

I, Ummareddy Vijayakumar Reddy, r/o S-10, PSR Pavilion, V. Nagenahalli Main Road, Hebbal, Bangalore, have changed the name of my son, Ummareddy Mithul Swaroop Reddy to U. Nihant Reddy vide affidavit dated 24-05-2022, sworn in the presence of VI ACM Magistrate, Bangalore.

I, Ummareddy Vijayakumar Reddy, r/o S-10, PSR Pavilion, V. Nagenahalli Main Road, Hebbal, Bangalore, have changed the name of my daughter, Ummareddy Pragna Samanvita to U. Nihara Reddy vide affidavit dated 24-05-2022, sworn in the presence of VI ACM Magistrate, Bangalore.

I, Surendra / Surendra Kumar / Surendra Kumar Jain / S.K.Jain S/o Champalal Betala residing At 57/2 Laxmi Road, Bangiappa Garden , Shanti Nagar , Bangalore - 27 has change my name and will be Known as Surendra Kumar Betala for all the purposes.

I, Venkatesh Sharma alias N M Venkatesh Sharma S/O, late. N K Muthuswamy R/O 2B, Kubera Sampath, 5/2, 18th Cross Road, Malleshwaram, Bangalore 560 055, Karnataka, have changed my name to VenSherman for all purposes, vide Affidavit dated 17/05/2022

I Manju Jain / Manju/ Manju Devi / Manjula / Manju Devi Jain W/o Narendra Kumar Betala residing At 6- Chowdappa Road, 1st Flr , Shanti Nagar , Bangalore - 27 has change my name and will be Known as Manjula Betala for all the purposes.

I, Anju Devi / Anju Jain / Anju / Anju Kumari W/o Surendra Kumar Betala residing At 57/2 Laxmi Road, Bangiappa Garden, Shanti Nagar , Bangalore - 27 has change my name and will be Known as Anju Devi Betala for all the purposes.

I, Narendra /Narendra Kumar / Narendra Kumar Jain / N.K.Jain S/o Champalal Betala , residing at 6 - Chowdappa Road, 1st Flr , Shanti Nagar , Bangalore - 27 has change my name and will be Known as Narendra Kumar Betala for all the purposes.

I, Hrishikesh Patil S/o Vijaykumar Patil, R/o B1 601, Ramky One North Appts., Doddaballapur Main Road, opp: BMSIT College, Avalahalli, Yelahanka, Bengaluru -560064 have changed my name to Hrishikesh V Patil for all purposes.

I, Abhilasha I B D/O Basavalingappa, W/O Manjunath. B.S R/o 210, Begur Road, Hongasandra, Begur, Bangalore, Karnataka- 560068. have changed my name and shall hereafter be Known as Abhilasha Manjunath

I, Lakshmi L W/o Kirankumar B R R/o SLV 10/37 4th Floor 3rd Main 11th Cross Srinivasa Nagar Bangalore-560085 have changed my name to Lakshmi Kiran for all purposes.

I, Santosh M S/o R Muni Reddy R/o Hno 401 Adventist Enclave 3rd Cross Grace Town Hennur Main Road have changed my name to Santosh M Reddy for all purposes.

I, Basant / Basant Kumar / Basant Kumar Jain / B.K.Jain S/o Champalal Betala and residing At 34, Nanjappa Road, Shanti Nagar , Bangalore - 27 has change my name and will be Known as Basant Kumar Betala for all the purposes.

I Puttaraj Gunahalu S/O. Basavaraj R/o No - 96, 1st Floor, Gayatri Layout, Hbcs Layout, Siddapaji Park, Indiranagar, Manjunathnagar, Bengaluru - 560079 have changed my name to Puttaraj Basavaraj Gonahalu

I, (Abdul Rahman) S/O (Syed Zarrar) born on (21 Aug 2003) residing at (522/1 Dharmana Garden Chamundi Nagar Banlore -32), have changed my name to (Syed Abdul Rahman) vide affidavit dated (02 Jun 2022) at (Bangalore)

I, Chakravarthy Iyengar, S/O. Sreekanth Athibele Rajarama, R/O. 153, Sulikunte, Bangarpet Taluk, KGF (Kolar) 563114, have changed name to Chakravarthy Iyengar Athibele Sreekanth vide affdvt dtd 03/06/22

I, Dinesh Ram Kamath S/O. Rama Alevoor Kamath R/o E601 Adarsh Rhythm 71 Panduranga Nagar, Bannerghatta Road, B'luru, 560076, have changed my name to Dinesh Rama Kamath for all purposes.

I, Birendra /Birendra Kumar / Birendra Kumar Jain / B.K.Jain / Birendra Kumar Betala S/o Champalal Betala and residing At 504 A Pride Pavillion Apts , 1 stage , 6th Phase , West of Chord Raod Bangalore North -10 has change my name and will be Known as Birendra Betala for all the purposes.

I, Arpita Gado D/o Abhay Arvind Gado R/o 406, Star (Block-17), SunCity Apartments, Sarjapur Outer Ring Road Junction, Bangalore - 560102, have changed my name to Arpita Abhay Gado for all purposes.

I Sharada Sathish Kumar R/a No. 347, 3rd Main, BSK 3rd stage Channammanakere Achukattu B'lore-560085. I have changed my name to SHARADA CHAPUR SUBRAMANYA SHASTRY Vide aff dt: 03/06/2022. Sworn before Notary : Devaraja E.

I, Veena G P Alias Veena G Paramashivachar D/O G R Paramashivachar, R/o NO 126, 3rd Cross 1 st Main Road, Kavika Layout Old, Bangalore, South, Bengaluru, Karnataka-560026, have changed my name and shall hereafter be Known as Veenaa Vishwakarma

GALLERIA

ಶಾಂತಿನಿಕೇತನ ಕಾಲೇಜ್ ... principal-degree@sel.org.in ... 08026484762/ 26484165 ... PUC, B.Com ... BBA

ಶಾಂತಿನಿಕೇತನ ಬಿ.ಎಡ್ ಕಾಲೇಜ್ ... MA ... M.Ed ... NET / SLET ... Biodata ... Mail ... principal-bed@shantiniketan.edu.in

ADMISSIONS OPEN 2022-2023
Govt. Recognised Diploma Courses
LABORATORY / RADIOLOGY OPHTHALMIC / OPERATION THEATER DIALYSIS TECHNICIAN COURSES
Eligibility & Duration: 3 years for SSLC & 2 years for PUC (Science)
SRI SAI INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
# 375,1st Main Road, Vidhanasowdha Layout, Laggere, Bengaluru-560058
Contact: 9844068838 / 9036181812

RAMAN POLYTECHNIC
# 12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 080-23488823, 23284817, 88530 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
CALIFORNIA PUBLIC SCHOOL
ICSE & State Syllabus. Nursery to X std | CONTACT: 9481385504

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

ಓದುಗರ ಗಮನಕ್ಕೆ
- ಜಾಹೀರಾತು ವ್ಯವಸ್ಥಾಪಕರು

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು / ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ಶ್ರದ್ಧಾಂಜಲಿ ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು 24x7 ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ - 99160 79232
narasinha.kulkarni@timesgroup.com

ಕಾಂಗ್ರೆಸ್ ಪಕ್ಷದ ವಿರುದ್ಧ ಕರ್ನಾಟಕದಲ್ಲಿ ಆಂದೋಲನ ಸ್ವರೂಪದ ಹೋರಾಟ ರೂಪಿಸಿದ ಬೊಮ್ಮಾಯಿ ಅವರು, ಜನತಾ ಪಕ್ಷವನ್ನು ಹಗಲಿರುಳು ಎನ್ನದೆ ಸಂಘಟಿಸಿದರು. ರಾಜ್ಯದ 11ನೇ ಮುಖ್ಯಮಂತ್ರಿಯಾಗಿ ಶ್ರಮಿಸಿದ್ದಲ್ಲದೆ, ಕೇಂದ್ರದಲ್ಲಿ ಸಚಿವರಾಗಿದ್ದಾಗ ಕೇಂದ್ರದ ಯೋಜನೆಗಳು ರಾಜ್ಯಕ್ಕೆ ಹರಿದು ಬಂದು ಅನೇಕ ಅಭಿವೃದ್ಧಿ ಕೆಲಸಗಳು ನಡೆದವು...

# ಎಸ್.ಆರ್. ಬೊಮ್ಮಾಯಿ ಸಜ್ಜನ, ಸೈದ್ಧಾಂತಿಕ ರಾಜಕಾರಣದ ಸಾಕ್ಷಿಪ್ರಜ್ಞೆ



1990ರಲ್ಲಿ ಬೊಮ್ಮಾಯಿಯವರು ಬಿಜೆಪಿಯ ಹಿರಿಯ ಧುರೀಣರಾದ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಅವರ ಜತೆ ಕುಶಲೋಪರಿ ನಡೆಸುತ್ತಿರುವುದು.

## ಸಾಹಿತಿಗಳು ಕಂಡಂತೆ ಎಸ್.ಆರ್. ಬೊಮ್ಮಾಯಿ

ರಾಜ್ಯದ ಸಾಂಸ್ಕೃತಿಕ ಹಾಗೂ ಸಾಹಿತ್ಯ ಲೋಕಕ್ಕೆ ಬೊಮ್ಮಾಯಿ ಅವರಿಂದ ನಡೆದ ಕಾಮಗಾರಿಗಳು ಶ್ಲಾಘನೆಗೆ ಅರ್ಹ. ಅವರ ನೀತಿ ನಿಲುವುಗಳು ಸದಾ ನಾಡಿನ ಪರ ಆಗಿರುತ್ತಿದ್ದವು.
- ಡಾ. ಸುಮತೀಂದ್ರ ನಾಡಿಗ, ಸಾಹಿತಿ

ಬೊಮ್ಮಾಯಿ ಅವರು ಅಪ್ಪಟ ಶರಣರು. ಅವರೆ ಎಂದೂ ಜಾತಿವಾದಿ ಅಲ್ಲ. ಈ ವೈಶಾಲ್ಯತೆಯಿಂದಾಗಿ ನಾವೆಲ್ಲ ಅವರಿಗೆ ಆಕರ್ಷಿತರಾದೆವು.
-ಡಾ. ಚಂದ್ರಶೇಖರ ಕಂಬಾರ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ

ಎಂಥ ತೊಂದರೆ ಬಂದರೂ ಎಸ್.ಆರ್. ಬೊಮ್ಮಾಯಿ ಅವರು ಖಿನ್ನರಾಗಿದ್ದನ್ನು ನೋಡಿಲ್ಲ. ಏಕೆಂದರೆ ಅವರು ತಾತ್ವಿಕವಾಗಿ ಯೋಚಿಸುತ್ತಿದ್ದರು.
-ಡಾ. ಯು.ಆರ್. ಅನಂತಮೂರ್ತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ

■ ಚಂದ್ರಶೇಖರ ಬೆಳಗೆರೆ

''ಕಾಂಗ್ರೆಸ್ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದೆ ಆಷ್ಟೇ. ಆದರೆ ಈಗ ನಾವು ಇಡೀ ಭಾರತದ ಬಡತನದ ವಿರುದ್ಧ ಹೋರಾಟ ನಡೆಸಬೇಕಾಗಿದೆ''!

- ಇದು ಕೋಲ್ಕತ್ತಾದ ಖ್ಯಾತ ಮಾನವತಾವಾದಿ ಚಿಂತಕ ಎಂ.ಎನ್. ರಾಯ್ ಅವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿನ ಉದ್ಗಾರ.

ಎಂ.ಎನ್. ರಾಯ್ ಯೌವನದಲ್ಲಿ ಕ್ರಾಂತಿಕಾರಿಯಾಗಿ ಮಾರ್ಕ್ಸ್ ತತ್ವಕ್ಕೆ ಮಾರುಹೋದವರು. ನಂತರ ಅಲ್ಲಿಂದ ಹೊರಬಂದು ಮಾನವೀಯ ಗುಣಗಳಿಗೆ ಪ್ರಾಧಾನ್ಯ ಇರುವ ರ್‍ಯಾಡಿಕಲ್ ಹ್ಯುಮನಿಸ್ಟ್ ಎಂಬ ಹೊಸ ಪಕ್ಷ ಕಟ್ಟಿದರು. ಎಂ.ಎನ್. ರಾಯ್ ಕರ್ನಾಟಕಕ್ಕೆ ಈಗಲೂ ಪ್ರಸ್ತುತ. ಏಕೆಂದರೆ ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಅವರು ತಮ್ಮ ರಾಜಕೀಯದ ಮೊದಲ ಮೆಟ್ಟಿಲುಗಳನ್ನು ಏರಿದ್ದು ಎಂ.ಎನ್. ರಾಯ್ ಅವರ ಚಿಂತನೆಗಳ ಮೂಲಕ.

ಜನಪರ ನೀತಿ ನಿಲುವುಗಳ ಮೂಲಕ ರಾಜ್ಯ ರಾಜಕಾರಣದಲ್ಲಿ ಪ್ರಬುದ್ಧ ವ್ಯಕ್ತಿಯಾಗಿ ನಿಲ್ಲುವ ಕರ್ನಾಟಕದ 11ನೇ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಅವರ 98 ನೇ ಜನ್ಮದಿನೋತ್ಸವ ಇಂದು.

ದೇಶದ, ರಾಜ್ಯದ ಸಮಸ್ಯೆಗಳ ಕುರಿತು ಅವರು ತೋರಿದ ದೃಷ್ಟಿಕೋನ ಎಂದಿಗೂ ಮಾದರಿ. ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಕಾರಡಗಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ ಸೋಮಪ್ಪ ರಾಯಪ್ಪ ಬೊಮ್ಮಾಯಿಯವರು, ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕರಾಗಿ ಸಾಧನೆಯ ಶಿಖರ ಏರಿದರು. ಅವರ ಬದುಕು ಕರ್ನಾಟಕದ ಆದರ್ಶ ಮತ್ತು ಸಜ್ಜನ ರಾಜಕಾರಣಕ್ಕೆ ಮಾದರಿಯಾಗಿದೆ.

**ಕೋಲ್ಕತ್ತಾ ಪಯಣ:** ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಪೊಲೀಸರ ಬಂಧನದಿಂದ ಪಾರಾಗಲು ಹುಬ್ಬಳ್ಳಿಯ ರೈಲು ಹತ್ತಿದ ಎಸ್.ಆರ್. ಬೊಮ್ಮಾಯಿ ಇಳಿದದ್ದು ಕೋಲ್ಕತ್ತಾದಲ್ಲಿ. ಅಲ್ಲಿ ಮಹಾನ್ ಮಾನವತಾವಾದಿ ಎಂ.ಎನ್. ರಾಯ್ ಅವರ ಸಿದ್ಧಾಂತಕ್ಕೆ ಸೋಮಪ್ಪ ಮಾರುಹೋದರು. ರೈತರು, ಬಡವರಿಗೆ ದುಡಿಮೆಯ ಮೂಲಕ ಸಮಾನತೆಯ ಅಭಿವೃದ್ಧಿಗೆ, ಮಾನವೀಯ ಕಳಕಳಿಗೆ ಪ್ರಾಧಾನ್ಯತೆ ನೀಡುತ್ತಿದ್ದ ಎಂ.ಎನ್. ರಾಯ್ ಅವರನ್ನು ನಂತರದ ದಿನಗಳಲ್ಲಿ ಅವರು ಬೆಳಗಾವಿಗೆ ಕರೆಸಿದರು.

ಕರ್ನಾಟಕದಲ್ಲಿ ಜನಪರ ಆಲೋಚನೆಗೆ ತಮ್ಮನ್ನು ತೊಡಗಿಸಿಕೊಂಡಿದ್ದ ಸೋಮಪ್ಪ ಬೊಮ್ಮಾಯಿ, ಎಂ.ಎನ್. ರಾಯ್ ಅವರ ರ್‍ಯಾಡಿಕಲ್ ಹ್ಯುಮನಿಸ್ಟ್

### ಎಸ್.ಆರ್. ಬೊಮ್ಮಾಯಿ 98ನೇ ಜನ್ಮದಿನೋತ್ಸವ



(RADICAL HUMANIST) ಎಂಬ ವಿಚಾರಧಾರೆಯ ಪಕ್ಷ ಹಾಗೂ ವಿಚಾರಕ್ಕೆ ಮಾರುಹೋದರು. ರಾಯ್ ಅವರನ್ನು ಬೆಳಗಾವಿಗೆ ಕರೆಸಿ, ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಹೋರಾಟದಲ್ಲಿ ಕಾಂಗ್ರೆಸ್ ಪಾತ್ರವನ್ನು ಪ್ರಬಲವಾಗಿ ಪ್ರಶ್ನಿಸಿದರು. ಭಾರತದ ಬಡತನದ ವಿರುದ್ಧ ಹೋರಾಡಬೇಕಾದ ನೀತಿ ನಿಲುವುಗಳನ್ನು ಅಂದಿನ ತಮ್ಮ ಭಾಷಣದಲ್ಲಿ ಯುವಕರಿಗೆ ಮನವರಿಕೆ ಮಾಡಿಕೊಟ್ಟರು. ಅಂದಿನ ಕಾಂಗ್ರೆಸ್ ಹೋರಾಟ ದೂರದೃಷ್ಟಿಯುಳ್ಳದ್ದ ದೋಷ ಎಂಬುದು ರಾಯ್ ಅವರ ನಿಲುವಾಗಿತ್ತು.

ವಿಕ ಸ್ಮರಣೆ

**ರಾಜ್ಯ ರಾಜಕಾರಣ ಪ್ರವೇಶ:** 1962ರಲ್ಲಿ ಕುಂದಗೋಳ ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರವಾಗಿ ಸ್ಪರ್ಧಿಸುವ ಮೂಲಕ ರಾಜ್ಯ ರಾಜಕಾರಣಕ್ಕೆ ಪ್ರವೇಶಿಸುವುದರೊಂದಿಗೆ 1988 ರಾಜ್ಯದ ಮುಖ್ಯಮಂತ್ರಿಯಾಗುವ ವರೆಗಿನ ಅವರ ರಾಜಕೀಯ ಪಯಣವೇ ಕರ್ನಾಟಕ ರಾಜಕಾರಣದ ಮೈಲುಗಲ್ಲುಗಳು ಎಂದರೆ ತಪ್ಪಾಗಲಾರದು. 1967ರಲ್ಲಿ ಕುಂದಗೋಳ ಕ್ಷೇತ್ರದ ಶಾಸಕರಾದ ಬೊಮ್ಮಾಯಿ ವಿಧಾನಸಭೆಯಲ್ಲಿ ಜನಪರ ಧ್ವನಿಯಾಗಿ ಮೊದಲ ಅವಕಾಶದಲ್ಲೇ ತಮ್ಮ ಇರುವಿಕೆ ಸಾಬೀತುಪಡಿಸಿದರು. ಪ್ರಬಲ ಪ್ರತಿಪಕ್ಷವಾಗಿ ಪ್ರತಿಧ್ವನಿಸಿದರು. 1972ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದ ಸಂದರ್ಭದಲ್ಲಿ ತುರ್ತುಪರಿಸ್ಥಿತಿಯಲ್ಲಿ ರಾಮಕೃಷ್ಣ ಹೆಗಡೆಯವರ ಬಂಧನವಾದಾಗ ಬೊಮ್ಮಾಯಿ ಅವರು ಪ್ರತಿಪಕ್ಷದ ನಾಯಕರಾಗಿ ಸದನವನ್ನು ಸಮರ್ಥವಾಗಿ ಮುನ್ನಡೆಸಿದರು. ಅಧಿಕಾರಕ್ಕಿಂತ ಜನಹಿತವೇ ಮೊದಲ ಆದ್ಯತೆಯಾಗಬೇಕು ಎಂಬುದನ್ನು ಬೊಮ್ಮಾಯಿ ಅವರು ಮನದಟ್ಟು ಮಾಡಿಸಿದರು. ಇಂದಿರಾಗಾಂಧಿ ಹೇರಿದ್ದ ತುರ್ತುಪರಿಸ್ಥಿತಿಯನ್ನು ಕಟುವಾಗಿ ಖಂಡಿಸಿದರು.

**ಹಗಲಿರುಳು ಶ್ರಮ:** ಕಾಂಗ್ರೆಸ್ ವಿರುದ್ಧ ಕರ್ನಾಟಕದಲ್ಲಿ ಆಂದೋಲನ ಸ್ವರೂಪದ ಹೋರಾಟ ರೂಪಿಸಿದ ಬೊಮ್ಮಾಯಿ, ಜನತಾಪಕ್ಷವನ್ನು ಹಗಲಿರುಳು ಎನ್ನದೆ ಸಂಘಟಿಸಿದರು. ಇದರ ಫಲವಾಗಿ 1978ರ ವಿಧಾನಸಭಾ ಚುನಾವಣೆಯಲ್ಲಿ ಜನತಾ ಪಕ್ಷದಿಂದ 59 ಜನ ಶಾಸಕರು ಆಯ್ಕೆಗೊಂಡರು. ಇದು ಕರ್ನಾಟಕದ ಕಾಂಗ್ರೆಸ್ಸೇತರ ರಾಜಕಾರಣಕ್ಕೆ ಹೊಸ ಮುನ್ನುಡಿ ಬರೆಯಿತು. ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗ ಅತಿರೇಕದ ಸ್ಥಿತಿ ತಲುಪಿದ ಕರ್ನಾಟಕ ಕಾಂಗ್ರೆಸ್ ವಿರುದ್ಧದ ಹೋರಾಟದಲ್ಲಿ ಮುಂಚೂಣಿ ನಾಯಕರಾಗಿ ಬೊಮ್ಮಾಯಿ ಹೊರಹೊಮ್ಮಿದರು. ನರಗುಂದ ನವಲಗುಂದ ರೈತ ಚಳುವಳಿಯಲ್ಲಿ ಬೊಮ್ಮಾಯಿ ಅವರು ರೈತರ ಪರ ಧ್ವನಿ ಎತ್ತಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು. 1983ರಲ್ಲಿ ರಾಜ್ಯ ರಾಜಕಾರಣದಲ್ಲಿ ಧ್ರುವೀಕರಣ ಆರಂಭಗೊಂಡಾಗ ಬೊಮ್ಮಾಯಿ ಕ್ರಾಂತಿರಂಗದ ಬಂಗಾರಪ್ಪ ಮತ್ತು ಇತರೆ ಗೆಳೆಯರನ್ನು ಕಾಂಗ್ರೆಸ್ ವಿರುದ್ಧ ಸಮರ ಸಾರಲು ಉತ್ತೇಜಿಸಿ ಯಶಸ್ವಿಯಾದರು. ರೈತಸಂಘ, ದಲಿತ ಸಂಘರ್ಷ ಸಮಿತಿ, ಕನ್ನಡಪರ ಸಂಘಟನೆಗಳು 1983 ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಎದ್ದುನಿಲ್ಲಲು ಬೊಮ್ಮಾಯಿ ಪ್ರಮುಖ ಕೊಂಡಿಯಾಗಿದ್ದರು.

**2ರೂ.ಗೆ ಅಕ್ಕಿ ಕೊಟ್ಟ ಮೊದಲಿಗ:** 1983ರಲ್ಲಿ ಜನತಾರಂಗ ಅಭೂತಪೂರ್ವ ಜಯ ಗಳಿಸಿತು. ರಾಮಕೃಷ್ಣ ಹೆಗಡೆ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾದರು. ಹೆಗಡೆ ಸಂಪುಟದಲ್ಲಿ ಎಸ್.ಆರ್. ಬೊಮ್ಮಾಯಿ ಕೈಗಾರಿಕಾ ಸಚಿವರಾದರು. ಅಂದು ಅವರ ದಕ್ಷ ಹಾಗೂ ಅಭಿವೃದ್ಧಿಯ ಆಡಳಿತ ಕರ್ನಾಟಕ ಕೈಗಾರಿಕಾ ಕ್ಷೇತ್ರಕ್ಕೆ ಮುನ್ನುಡಿ ಬರೆಯಿತು. ಹುಟ್ಟುಹಬ್ಬದಾಗಿ ಹೋರಾಟ ಪಾಠವನ್ನು ಹೊಂದಿದ್ದ ಬೊಮ್ಮಾಯಿ 1985ರ ಮಧ್ಯಂತರ ಚುನಾವಣೆಯಲ್ಲಿ ಬಡತನ ರೇಖೆಗಿಂತ ಕೆಳಗೆ ಇದ್ದವರಿಗೆ ಎರಡು ರೂಪಾಯಿಗೆ ಕೆಜಿ ಅಕ್ಕಿ, ಗೋಧಿ ಹಾಗೂ ರಿಯಾಯಿತಿ ದರದಲ್ಲಿ ಸೀರೆ ಮತ್ತು ಪಂಚೆ ನೀಡುವುದನ್ನು ರಾಜ್ಯದಲ್ಲಿ ಮೊದಲ ಬಾರಿಗೆ ಜಾರಿಗೆ ತಂದರು. 1985ರ ಚುನಾವಣೆಯಲ್ಲಿ ಜನತಾ ಪಕ್ಷ ಮತ್ತೊಮ್ಮೆ ಪೂರ್ಣ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿತು. ಈ ಸರ್ಕಾರದಲ್ಲಿ ಬೊಮ್ಮಾಯಿ, ಕಂದಾಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಭೂದಾಖಲೆಗಳನ್ನು ಸರಳೀಕರಣಗೊಳಿಸಿದ ಕೀರ್ತಿ ಬೊಮ್ಮಾಯಿ ಅವರದ್ದಾಗಿದೆ.

ನಂತರ ರಾಜ್ಯಸಭೆಯ ಸದಸ್ಯರಾಗಿದ್ದ ಬೊಮ್ಮಾಯಿ ಅವರು ರಾಷ್ಟ್ರದಲ್ಲಿ ಜನತಾದಳವನ್ನು ಸಂಘಟಿಸುವಲ್ಲಿ ಯಶಸ್ವಿಯಾಗಿದ್ದರು. ಕರ್ನಾಟಕ ರಾಜ್ಯ ರಾಜಕಾರಣದ ಪ್ರತ್ಯಕ್ಷ ಬೆಳವಣಿಗೆಯಿಂದಾಗಿ ಅಂದಿನ ಮುಖ್ಯಮಂತ್ರಿ ದೇವೇಗೌಡರು ದೇಶದ ಪ್ರಧಾನಿಯಾದಾಗ ಬೊಮ್ಮಾಯಿ, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾದರು. ಅಂದು ಅವರು ಕರ್ನಾಟಕಕ್ಕೆ ಅಪಾರ ಕೊಡುಗೆ ನೀಡಿ ಜನ ಮನ್ನಣೆ ಗಳಿಸಿದರು. ಕೇಂದ್ರದ ಯೋಜನೆಗಳು ರಾಜ್ಯಕ್ಕೆ ಹರಿದು ಬಂದು ಅನೇಕ ಅಭಿವೃದ್ಧಿ ಕೆಲಸಗಳು ನಡೆದವು.

ಕರ್ನಾಟಕ ಕಾಂಗ್ರೆಸ್ಸೇತರ ರಾಜಕಾರಣದ ವಿರುದ್ಧ ಹೋರಾಟ ನಡೆಸಿ ಯಶಸ್ಸು ಸಾಧಿಸಿದ ಸೋಮಪ್ಪ ರಾಯಪ್ಪ ಬೊಮ್ಮಾಯಿಯವರು ಇಂದಿನ ಸೈದ್ಧಾಂತಿಕ ರಾಜಕಾರಣಕ್ಕೆ ಸಾಕ್ಷಿ ಪ್ರಜ್ಞೆ.

(ಲೇಖಕರು ಹಿರಿಯ ಪತ್ರಕರ್ತರು)

## ಬಹುಮತ ಸಾಬೀತು ರಾಜಭವನದಲ್ಲಲ್ಲ!

ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಸನ್ನಿವೇಶ ಎದುರಾದಾಗ ಬೊಮ್ಮಾಯಿಯವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಆಗ ರಾಜ್ಯದಲ್ಲಿ ತೆರಿಗೆ ಸೋರಿಕೆ ತಪ್ಪಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದರು. ಜಿಲ್ಲೆಗಳ ಪುನರ್ ವಿಂಗಡಣೆಗೆ ದಿಟ್ಟ ಹೆಜ್ಜೆ ಇಟ್ಟರು. ನಷ್ಟದಲ್ಲಿದ್ದ ಸಾರ್ವಜನಿಕ ಉದ್ದಿಮೆಗಳಿಗೆ ಜೀವ ತುಂಬಿದರು. ಅಂದಿನ ರಾಜ್ಯಪಾಲರು ಕಾಂಗ್ರೆಸ್‌ನ ರಾಜಕೀಯ ಒತ್ತಡಕ್ಕೆ ಬಲಿಯಾಗಿ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸಿ ಪ್ರಜಾಪ್ರಭುತ್ವದ ಕಗ್ಗೊಲೆಗೆ ಕಾರಣರಾದರು. ಬೊಮ್ಮಾಯಿ ಅವರು ಅಧಿಕಾರ ಕಳೆದುಕೊಂಡರೂ ಪ್ರಜಾಪ್ರಭುತ್ವದ ಕಗ್ಗೊಲೆ ವಿರುದ್ಧವಾಗಿ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದರು. ಕಾನೂನು ಹೋರಾಟ ನಿಲ್ಲಿಸಲಿಲ್ಲ. ಅಂತಿಮವಾಗಿ 9 ಜನ



ನ್ಯಾಯಾಧೀಶರನ್ನು ಒಳಗೊಂಡ ಸಂವಿಧಾನ ಪೀಠ ಬೊಮ್ಮಾಯಿ ಅವರ ವಾದವನ್ನು ಎತ್ತಿಹಿಡಿಯಿತು. ''ಆಳುವ ಸರಕಾರದ ಬಹುಮತ ಪರೀಕ್ಷೆ ವಿಧಾನಸಭೆಯಲ್ಲಿ ನಡೆಯಬೇಕೇ ಹೊರತು ರಾಜಭವನದಲ್ಲಿ ಅಲ್ಲ'' ಎಂದು ಸರ್ವೋಚ್ಚ ನ್ಯಾಯಾಲಯ ಸಾರಿ ಹೇಳಿತು. ಇಂದಿಗೂ ಭಾರತೀಯ ಸಂವಿಧಾನ ವ್ಯವಸ್ಥೆಯಲ್ಲಿ ಈ ಪ್ರಕರಣ ಪ್ರಜಾಪ್ರಭುತ್ವದ ಜೀವನಾಡಿಯಾಗಿದೆ.

ಸಾರಿಗೆ ಇಲಾಖೆ

ವಾಹನ ನೋಂದಣಿ ಫಲಕಗಳ ಮೇಲೆ ಹೆಸರು, ಚಿಹ್ನೆಗಳನ್ನು ಹಾಕಿಸುವುದು ಅಪರಾಧ

ಸಾರ್ವಜನಿಕ ಪ್ರಕಟಣೆ

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನೀಡಿದ ನಿರ್ದೇಶನಗಳ ಮೇರೆಗೆ, ಸರ್ಕಾರದ ಎಲ್ಲಾ ಇಲಾಖೆಗಳು/ ನಿಗಮಗಳು / ಮಂಡಳಿಗಳು / ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ ಉಪಯೋಗಿಸುವ ಯಾವುದೇ ಖಾಸಗಿ ವಾಹನಗಳಲ್ಲಿ ಸ್ಥಳೀಯ ಸಂಸ್ಥೆಗಳ ಹೆಸರುಗಳನ್ನು, ಚಿಹ್ನೆ/ ಲಾಂಛನಗಳನ್ನು ವಾಹನಗಳ ನೋಂದಣಿ ಫಲಕಗಳ ಮೇಲೆ ಅನಧಿಕೃತವಾಗಿ ಅಳವಡಿಸಿಕೊಳ್ಳುವುದು ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 50 ಮತ್ತು 51ರಲ್ಲಿ ನಿಗದಿಪಡಿಸಿರುವ ಮಾನದಂಡಗಳಿಗೆ ಹಾಗೂ ಕೇಂದ್ರದ The Emblems of India (Prohibition of Improper Use) Act 2005 (50 of 2005) ಕಲಂ 3, 4 ಮತ್ತು 5 ರ ಉಲ್ಲಂಘನೆಯಾಗುತ್ತದೆ ಮತ್ತು ಇಂತಹ ನೋಂದಣಿ ಫಲಕಗಳನ್ನು ಕೂಡಲೇ ತೆರವುಗೊಳಿಸಬೇಕಾಗಿರುತ್ತದೆ.

ಸಾರಿಗೆ ಇಲಾಖೆಯಿಂದ ಸದರಿ ವಿಷಯದ ಕುರಿತು ಹಲವಾರು ಬಾರಿ ಪ್ರಕಟಣೆ ನೀಡಲಾಗಿದ್ದರೂ ಸಹ, ಈ ರೀತಿ ಅನಧಿಕೃತ ನೋಂದಣಿ ಫಲಕಗಳನ್ನು ಅಳವಡಿಸಿರುವ ವಾಹನಗಳು ರಸ್ತೆಯ ಮೇಲೆ ಸಂಚರಿಸುತ್ತಿರುವುದನ್ನು ಗಮನಿಸಿದ್ದು, ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣ ಸಿ.ಆರ್.ಎಲ್.ಪಿ. ನಂ.1850/2017ರಲ್ಲಿ ಮೇಲೆ ತಿಳಿಸಿರುವಂತೆ, ಸ್ಥಳೀಯ ಸಂಸ್ಥೆಗಳ ಹೆಸರುಗಳನ್ನು, ಚಿಹ್ನೆ / ಲಾಂಛನಗಳನ್ನು ಖಾಸಗಿ ವಾಹನಗಳ ನೋಂದಣಿ ಫಲಕಗಳ ಮೇಲೆ ಅಳವಡಿಸಿರುವುದನ್ನು ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ವಹಿಸಲು ಆದೇಶ ನೀಡಿರುತ್ತದೆ.

ಆದ್ದರಿಂದ, ಮೇಲೆ ತಿಳಿಸಿರುವಂತೆ, ಅನಧಿಕೃತ ನೋಂದಣಿ ಫಲಕಗಳನ್ನು ಕೂಡಲೇ ತೆರವುಗೊಳಿಸಲು ಮಂಡಳಿಗಳು / ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ಎಲ್ಲಾ ಖಾಸಗಿ ವಾಹನ ಮಾಲೀಕರಿಗೆ ತಿಳಿಸಲಾಗಿದೆ. ಅಲ್ಲದೆ, ಅನಧಿಕೃತ ನೋಂದಣಿ ಫಲಕಗಳನ್ನು ಅಳವಡಿಸಿಕೊಂಡಿರುವ ವಾಹನವು ಸಾರ್ವಜನಿಕ ಸ್ಥಳದಲ್ಲಿ ಕಂಡುಬಂದಲ್ಲಿ ಸಾರ್ವಜನಿಕರು ಅದರ ನೋಂದಣಿ ಫಲಕ, ಸ್ಥಳ (location) ಸಮೇತ ಭಾವಚಿತ್ರವನ್ನು ತೆಗೆದುಕೊಂಡು 94498 63459 Whatsapp ಸಂಖ್ಯೆಗೆ ರವಾನಿಸಿದಲ್ಲಿ ಅಂತಹ ವಾಹನ ಮಾಲೀಕರ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುವುದು.

ದಿನಾಂಕ: 04-06-2022

ಸಾರಿಗೆ ಇಲಾಖೆ TRANSPORT DEPARTMENT

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ
1 ನೇ ಮಹಡಿ, ಬಿಎಂಟಿಸಿ ಕಟ್ಟಡ, 'ಎ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು - 560 027
ವೆಬ್‌ಸೈಟ್: www.transport.kar.gov.in ಇ-ಮೇಲ್: transcom@nic.in
ದೂ. ಸಂ.: 080 22214900

ಸಂವಿಧಾನವನ್ನು ಪಾಲಿಸುವುದು, ಅದರ ಆಶಯಗಳನ್ನು ಗೌರವಿಸುವುದು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

# ತೆಂಗಿನಕಾಯಿ, ಕೊಬ್ಬರಿ ಬೆಲೆ ಕುಸಿತ

## ಹಳಿ ತಪ್ಪಿದ ನಾಫೆಡ್‌ನ ಕೊಬ್ಬರಿ ಸಂಗ್ರಹ

■ ಅಜಿತ್ ಸ್ವರ್ಗ ಪೆರ್ಲ
ajithswarga@gmail.com

ಕೇರಳದಲ್ಲಿ ತೆಂಗಿನಕಾಯಿ ಮತ್ತು ಕೊಬ್ಬರಿ ಬೆಲೆ ಮತ್ತಷ್ಟು ಕುಸಿದಿದೆ. ಕೇರಳ ರಾಜ್ಯದ ಬಹುತೇಕ ಆಯಿಲ್ ಮಿಲ್‌ಗಳಲ್ಲಿ ಕೊಬ್ಬರಿ ಸಂಗ್ರಹ ನಿಲ್ಲಿಸುವುದರೊಂದಿಗೆ ತೆಂಗಿನಕಾಯಿ ಮತ್ತು ಕೊಬ್ಬರಿ ಖರೀದಿಸಲು ಯಾರೂ ಮುಂದಾಗುತ್ತಿಲ್ಲ.

ನಾಫೆಡ್‌ನ ಕೊಬ್ಬರಿ ಸಂಗ್ರಹ, ಕೃಷಿ ಇಲಾಖೆಯ ಹಸಿ ತೆಂಗಿನಕಾಯಿ ಖರೀದಿ ಯೋಜನೆಯೂ ಹಳಿ ತಪ್ಪಿರುವುದು ತೆಂಗು ಬೆಳೆಗಾರರನ್ನು ಕಂಗೆಡಿಸಿದೆ.

ತಿಂಗಳ ಹಿಂದೆ ತೆಂಗಿನಕಾಯಿಯನ್ನು ಕೆಜಿಗೆ 28 ರೂ. ತನಕ ಖರೀದಿಸಲಾಗಿತ್ತು. ಪ್ರಸ್ತುತ 24 ರೂ.ಗೆ ಹಸಿ ತೆಂಗಿನಕಾಯಿ ಖರೀದಿಸಲಾಗುತ್ತಿದೆ. ಬೆಳೆಗಾರರಿಂದ 24 ರೂ.ಗೆ ಖರೀದಿಸಲಾಗುವ ತೆಂಗಿನಕಾಯಿಯನ್ನು ಅಂಗಡಿಗಳಲ್ಲಿ 30 ರೂ.ವರೆಗೆ ಮಾರಲಾಗುತ್ತಿದೆ.

ಕೇರಳ ಹಾಗೂ ಇತರ ರಾಜ್ಯಗಳಲ್ಲಿ ತೆಂಗಿನಕಾಯಿ ಉತ್ಪಾದನೆ ಹೆಚ್ಚಿದೆ. ಇದು ಕೇರಳ ರಾಜ್ಯದಲ್ಲಿ ತೆಂಗಿನಕಾಯಿ ಮಾರಾಟದ ಮೇಲೆ ಪರಿಣಾಮ ಬೀರಿದೆ. ಹಿಂದೆ ತಮಿಳುನಾಡಿನ ವ್ಯಾಪಾರಿಗಳು ಕೇರಳದಿಂದ ತೆಂಗಿನಕಾಯಿ ಖರೀದಿಸಿ ಬೃಹತ್ ಪ್ರಮಾಣದಲ್ಲಿ ದಾಸ್ತಾನಿಸುತ್ತಿದ್ದರು. ಈಗ ಅದೂ ನಿಂತಿದೆ. ಹೇರಳ ಪ್ರಮಾಣದಲ್ಲಿ ತೆಂಗಿನಕಾಯಿ ದಾಸ್ತಾನು ಇರುವ ಕಾರಣ ಕೇರಳದ ಗಿರಣಿ ಮಾಲೀಕರೂ ತೆಂಗಿನಕಾಯಿ ಖರೀದಿಸುತ್ತಿಲ್ಲ.

ಕೃಷಿ ಇಲಾಖೆ ಹಸಿ ತೆಂಗಿನಕಾಯಿಯನ್ನು ಪ್ರತಿ ಕೆಜಿಗೆ 32 ರೂ.ನಂತೆ ಹಾಗೂ ನಾಫೆಡ್ ಕೊಬ್ಬರಿಯನ್ನು ಪ್ರತಿ ಕೆಜಿಗೆ 105.90 ರೂ.ನಂತೆ ಖರೀದಿಸುತ್ತಿದೆ. ಕೇಂದ್ರ ಸರಕಾರದ ನಿರ್ದೇಶನಗಳನ್ನು ಪಾಲಿಸಲಾಗದೆ ಕೇರಫೆಡ್ ಕೊಬ್ಬರಿ ಸಂಗ್ರಹದಿಂದ ಹಿಂದೆ ಸರಿದಿದೆ. ಇದರಿಂದಾಗಿ ಮಾರ್ಕೆಟ್ ಫೆಡ್ ಮೂಲಕ ಕೊಬ್ಬರಿ ಸಂಗ್ರಹಿಸಲು ಕೃಷಿ ಇಲಾಖೆ ನಿರ್ಧರಿಸಿದೆ.

ಆದರೆ ಎರಡು ಸಂಸ್ಥೆಗಳು ಸಂಗ್ರಹಕ್ಕೆ ಮುಂದೆ ಬಂದರೂ ಕೇವಲ ಹೆಸರಿಗೆ ಮಾತ್ರ ಸೀಮಿತವಾಗಿದೆ. ಕೇಂದ್ರ ಸರಕಾರ ಮಾನದಂಡಗಳಲ್ಲಿ ರಿಯಾಯಿತಿ ನೀಡುವ ಮೂಲಕ ಹಸಿ ತೆಂಗಿನಕಾಯಿ ಸಂಗ್ರಹಕ್ಕೆ ಮುಂದಾಗುವುದರೊಂದಿಗೆ ಸಮಸ್ಯೆ ಬಗೆಹರಿಯಬಹುದು ಎಂಬ ನಿರೀಕ್ಷೆ ತೆಂಗು ಬೆಳೆಗಾರರದ್ದು.

### ಸಂಗ್ರಹ ಎಷ್ಟಿದೆ?



ತಿಂಗಳ ಹಿಂದೆ ಪ್ರತಿ ಕ್ವಿಂಟಾಲ್ ಕೊಬ್ಬರಿ 9,200 ರೂ.ಗೆ ಖರೀದಿಸಲಾಗಿತ್ತು. ಪ್ರಸ್ತುತ ಕ್ವಿಂಟಾಲ್ ಕೊಬ್ಬರಿ ದರ 8,700 ರೂ.ಗೆ ಕುಸಿದಿದೆ. ಕೇಂದ್ರ ಸರಕಾರದ ನಿರ್ದೇಶದಂತೆ ನಾಫೆಡ್ ಕಳೆದ 6 ತಿಂಗಳಲ್ಲಿ ಕೇರಳದಿಂದ 50 ಸಾವಿರ ಟನ್ ಕೊಬ್ಬರಿ ಖರೀದಿಸಬೇಕಿತ್ತು. ಆದರೆ ಕೊಬ್ಬರಿ ಸಂಗ್ರಹ ಆರಂಭವಾಗಿ ಎರಡೂವರೆ ತಿಂಗಳಲ್ಲಿ ಕೇವಲ 48 ಕ್ವಿಂಟಾಲ್ ಕೊಬ್ಬರಿ ಸಂಗ್ರಹವಾಗಿದೆ.



ಕರ್ನಾಟಕ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ರವರು ನೆರವೇರಿಸುವರು

ದಿನಾಂಕ : 6ನೇ ಜೂನ್ 2022, ಸೋಮವಾರ, ಸಂಜೆ 4.30 ಗಂಟೆಗೆ. ಸ್ಥಳ : ಕೆಂಪೇಗೌಡ ಬಸ್ ನಿಲ್ದಾಣ, ಪಂಚಶೀಲನಗರ, ಬೆಂಗಳೂರು

ನಾಗರಭಾವಿ ವಾರ್ಡ್‌ನ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ "ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ" ಉದ್ಘಾಟನೆ






ಕಾವೇರಿಪುರ ವಾರ್ಡ್‌ನ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ "ನಾಡಪ್ರಭು ಕೆಂಪೇಗೌಡ ಬಹುಪಯೋಗಿ ಕಟ್ಟಡ"ದ ಉದ್ಘಾಟನೆ





ಮೂಡಲ ಪಾಳ್ಯ ವಾರ್ಡ್‌ನ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ "ನೆಲಮಟ್ಟದ ಜಲಸಂಗ್ರಹಾಗಾರ"ದ ಉದ್ಘಾಟನೆ





ಜ್ಯೋತಿ ಬೆಳಗಿಸುವವರು
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್, ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಶಾಸಕರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ

ಘನ ಉಪಸ್ಥಿತಿ
ಶ್ರೀ ಆರ್. ಅಶೋಕ, ಮಾನ್ಯ ಕಂದಾಯ ಸಚಿವರು
ಶ್ರೀ ಬಿ. ಶ್ರೀರಾಮುಲು, ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡದ ಕಲ್ಯಾಣ ಸಚಿವರು
ಶ್ರೀ ವಿ. ಸುನಿಲ್ ಕುಮಾರ್, ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
ಶ್ರೀ ಬಿ.ಸಿ. ನಾಗೇಶ್, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು
ಶ್ರೀ ಮುನಿರತ್ನ, ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು
ಶ್ರೀ ತೇಜಸ್ವಿ ಸೂರ್ಯ, ಮಾನ್ಯ ಸಂಸದರು, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಡಾ|| ಸಿ.ಎನ್. ಅಶ್ವತ್ಥ ನಾರಾಯಣ, ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ಬಿ.ಎ. ಬಸವರಾಜ, ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು
ಶ್ರೀ ಕೆ. ಗೋಪಾಲಯ್ಯ, ಮಾನ್ಯ ಅಬಕಾರಿ ಸಚಿವರು
ಶ್ರೀ ಎನ್. ನಾಗರಾಜು (ಎಂ.ಟಿ.ಬಿ), ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್, ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ, ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಸತೀಶ್ ರೆಡ್ಡಿ, ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್, ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನ ಪರಿಷತ್)
ಶ್ರೀ ಕೆ.ಸಿ. ರಾಮಮೂರ್ತಿ, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜೈರಾಮ್ ರಮೇಶ್, ಮಾನ್ಯ ಸಂಸದರು (ರಾಜ್ಯಸಭೆ)
ಡಾ|| ಎಲ್. ಹನುಮಂತಯ್ಯ, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಪುಟ್ಟಣ್ಣ, ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಕೆ. ಗೋವಿಂದರಾಜ್, ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪಿ.ಆರ್. ರಮೇಶ್, ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಅ. ದೇವೇಗೌಡ, ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಹೆಚ್.ಎಂ. ರಮೇಶ ಗೌಡ, ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಮುನಿರಾಜು ಗೌಡ ಪಿ.ಎಂ (ತುಳಸಿ), ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ, ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ

ರಾಕೇಶ್ ಸಿಂಗ್, ಭಾ.ಆ.ಸೇ, ಆಡಳಿತಗಾರರು, ಬಿಬಿಎಂಪಿ
ತುಷಾರ್ ಗಿರಿ ನಾಥ್, ಭಾ.ಆ.ಸೇ, ಮುಖ್ಯ ಆಯುಕ್ತರು, ಬಿಬಿಎಂಪಿ
ಎನ್. ಜಯರಾಂ, ಭಾ.ಆ.ಸೇ, ಅಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.

"ದೇಶದ ಏಕತೆ, ಐಕ್ಯತೆ, ಸಮಗ್ರತೆ, ಸಹಿಷ್ಣುತೆ ಕಾಪಾಡುವುದು"
ಪ್ರತಿಯೊಬ್ಬ ಭಾರತೀಯರ ಸಂವಿಧಾನಾತ್ಮಕ ಮೂಲಭೂತ ಕರ್ತವ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು-560002

## ವಿಕ ವಂಡರ್ ಲ್ಯಾಂಡ್

### ಸತ್ತಿದ್ದವಳು ಕೋರ್ಟ್‌ನಲ್ಲಿ ಪ್ರತ್ಯಕ್ಷ!

**ಮುಜಾಫರ್‌ಪುರ:** ಪತ್ರಕರ್ತರೊಬ್ಬರ ಹತ್ಯೆ ಪ್ರಕರಣ ಸಂಬಂಧ ಪ್ರಮುಖ ಸಾಕ್ಷಿಯಾಗಿದ್ದ ಬದಾಮಿ ದೇವಿ ಅವರು ಮೃತಪಟ್ಟಿದ್ದಾರೆ ಎಂದು ಕೋರ್ಟ್‌ಗೆ ಸಿಬಿಐ ಮಾಹಿತಿ ನೀಡಿದ ಬೆನ್ನಿಗೇ ದೇವಿ ಅವರು ಕೋರ್ಟ್ ಮುಂದೆ ಹಾಜರಾಗಿ ಎಲ್ಲರನ್ನು ದಂಗುಬಡಿಸಿದ ಪ್ರಕರಣ ಉತ್ತರಪ್ರದೇಶದಲ್ಲಿ ನಡೆದಿದೆ. ಜಿಲ್ಲಾ ಕೋರ್ಟ್‌ಗೆ ಶನಿವಾರ ಹಾಜರಾದ ದೇವಿ ಅವರು, ನ್ಯಾಯಾಧೀಶರ ಎದುರು, ''ಸ್ವಾಮಿ ನಾನು ಬದುಕಿದ್ದೇನೆ. ಆದರೆ ಸಿಬಿಐ ಅಧಿಕಾರಿಗಳು ನನ್ನನ್ನು ಸತ್ತಿದ್ದೇನೆ ಎಂದು ಆಗಲೇ ಘೋಷಿಸಿಬಿಟ್ಟಿದ್ದಾರೆ. ಇದೊಂದು ಪೂರ್ವ ಯೋಜಿತ ಸಂಚು,'' ಎಂದು ಆಕೆಯು ತನ್ನ ಪಾನ್ ಹಾಗೂ ಮತದಾರರ ಚೀಟಿಯನ್ನು ಗುರುತಿನ ದೃಢೀಕರಣವಾಗಿ ಹಾಜರುಪಡಿಸಿದ್ದಾರೆ. ಕಳೆದ ಮೇ 24ರಂದೇ ಸಿಬಿಐ ಅಧಿಕಾರಿಗಳು ದೇವಿ ಅವರು ಮೃತಪಟ್ಟಿದ್ದಾರೆ ಎಂದು ವರದಿ ದಾಖಲಿಸಿ, ಕೋರ್ಟ್‌ಗೆ ಸಲ್ಲಿಸಿದ್ದರು. ಈ ಘಟನೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ನ್ಯಾಯಾಲಯವು, ಏಜೆನ್ಸಿಗೆ ಕ್ರಮವಾಗಿ ಸಿಬಿಐ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ನೀಡಿದೆ.

## ಬ್ರೀಫ್ ಕಾರ್ನರ್

### ಬಸ್ ಉರುಳಿ 22 ಯಾತ್ರಿಕರು ಸಾವು

**ಡೆಹ್ರಾಡೂನ್:** ಚಾರ್‌ಧಾಮ್ ಯಾತ್ರಿಕರಿದ್ದ ಬಸ್ ಉತ್ತರಾಖಂಡದ ದಾಮ್ಟಾ ಬಳಿ ಕಣಿವೆಗೆ ಉರುಳಿದ ಪರಿಣಾಮ 22 ಜನ ಭಾನುವಾರ ಮೃತಪಟ್ಟಿದ್ದಾರೆ. ಮಧ್ಯಪ್ರದೇಶದ ಪನ್ನಾ ಜಿಲ್ಲೆಯಿಂದ ಸುಮಾರು 30 ಭಕ್ತರು ಚಾರ್‌ಧಾಮ್ ಯಾತ್ರೆಯ ಭಾಗವಾಗಿ ಯಮುನೋತ್ರಿಗೆ ತೆರಳುತ್ತಿದ್ದರು. ಕಡಿದಾದ ರಸ್ತೆಯಲ್ಲಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಕಣಿವೆ ಉರುಳಿದೆ. ಎಲ್ಲಾ 22 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಸ್‌ಡಿಆರ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ. ದುರಂತದಲ್ಲಿ ಮಡಿದವರಿಗೆ ಉತ್ತರಾಖಂಡ ಸಿಎಂ ಪುಷ್ಕರ್ ಸಿಂಗ್ ಧಾಮಿ ಹಾಗೂ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಕಂಬನಿ ಮಿಡಿದಿದ್ದಾರೆ. ರಕ್ಷಣಾ ಕಾರ್ಯ ತ್ವರಿತಗೊಳಿಸುವಂತೆ ಪುಷ್ಕರ್ ಸಿಂಗ್ ಧಾಮಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

### ಬಾಂಗ್ಲಾದಲ್ಲಿ ಸ್ಫೋಟ, 49 ಸಾವು

**ಢಾಕಾ:** ಖಾಸಗಿ ಕಂಪನಿಯೊಂದರ ಕಂಟೇನರ್ ಡಿಪೋದಲ್ಲಿ ಸ್ಫೋಟ ಸಂಭವಿಸಿದ ಪರಿಣಾಮ 49 ಜನ ಮೃತಪಟ್ಟು 300ಕ್ಕೂ ಜನ ಗಾಯಗೊಂಡಿರುವ ಘಟನೆ ಬಾಂಗ್ಲಾದೇಶದ ಚಿತ್ತಗಾಂಗ್ ಜಿಲ್ಲೆಯಲ್ಲಿ ನಡೆದಿದೆ. ಚಿತ್ತಗಾಂಗ್ ಜಿಲ್ಲೆಯ ಸೀತಾಕುಂಡ್‌ನಲ್ಲಿರುವ ಬಿಎಂ ಕಂಟೇನರ್ ಡಿಪೋದಲ್ಲಿ ಶನಿವಾರ ರಾತ್ರಿ ಸ್ಫೋಟ ಸಂಭವಿಸಿದೆ. ಕಂಟೇನರ್‌ನಲ್ಲಿ ರಾಸಾಯನಿಕ ಇದ್ದ ಪರಿಣಾಮ, ಕೆಲವೇ ನಿಮಿಷದಲ್ಲಿ ಅಗ್ನಿಯು ಎಲ್ಲೆಡೆ ವ್ಯಾಪಿಸಿದೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಅಗ್ನಿ ಶಾಮಕ ದಳದ ಸಿಬ್ಬಂದಿ ಸುಮಾರು ಹೊತ್ತು ಕಾರ್ಯಾಚರಣೆ ನಡೆಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ದುರಂತದಲ್ಲಿ 49 ಜನ ಮೃತಪಟ್ಟಿದ್ದು ಗುರುತು ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಮೃತಳಗಾಗಿರುವವರಲ್ಲಿ 300ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಅವರಲ್ಲಿ ಗಂಭೀರವಾಗಿ ಗಾಯಗೊಂಡವರನ್ನು ಚಿತ್ತಗಾಂಗ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಇಶಾ ಫೌಂಡೇಶನ್ ಜಗ್ಗಿ ವಾಸುದೇವ್ ನೇತೃತ್ವದ 'ಮಣ್ಣು ಉಳಿಸಿ' ಅಭಿಯಾನ ದಿಲ್ಲಿ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ

# ಎಥೆನಾಲ್ ಮಿಶ್ರಣ, ಅವಧಿಗೆ ಮುನ್ನವೇ ಗುರಿ ಸಾಧನೆ

**ಹೊಸದಿಲ್ಲಿ:** ಜಾಗತಿಕ ಹವಾಮಾನ ಬದಲಾವಣೆ ತಡೆಯುವ ನಿಟ್ಟಿನಲ್ಲಿ ಕೈಗೊಂಡ ಭಾರತದ ಹಲವು ಉಪಕ್ರಮಗಳು ನಿರೀಕ್ಷೆಗೂ ಮೀರಿದ ಪ್ರಗತಿ ಸಾಧಿಸಿದ್ದು, ಈ ವಿಚಾರದಲ್ಲಿ ದೇಶವು ಮುಂಚೂಣಿಯಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವಾಹನಗಳಿಂದ ವಾಯು ಮಾಲಿನ್ಯ ತಡೆಯುವ ನಿಟ್ಟಿನಲ್ಲಿ ಪೆಟ್ರೋಲ್ ಜತೆ 10% ಎಥೆನಾಲ್ ಮಿಶ್ರಣ ಮಾಡುವ ಗುರಿಯನ್ನು ಭಾರತವು ನಿಗದಿತ ಗಡುವಿಗಿಂತ 5 ತಿಂಗಳು ಮೊದಲೇ ಸಾಧಿಸಿದೆ ಎಂದು ಘೋಷಿಸಿದ್ದಾರೆ.

ವಿಶ್ವ ಪರಿಸರ ದಿನದ ಅಂಗವಾಗಿ ದಿಲ್ಲಿಯಲ್ಲಿ ಇಶಾ ಫೌಂಡೇಶನ್ ಆಯೋಜಿಸಿದ್ದ 'ಮಣ್ಣು ಉಳಿಸಿ' ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪರಿಸರವನ್ನು ಉಳಿಸಲು ಸರಕಾರ ಕೈಗೊಂಡ ಹಲವು ಕ್ರಮಗಳು, ಯೋಜನೆಗಳ ಬಗ್ಗೆ ಪ್ರಧಾನಿ ವಿವರಿಸಿದರು. ''ಜಾಗತಿಕ ಹವಾಮಾನ ಬದಲಾವಣೆ ಮೇಲೆ ಭಾರತದ ಪ್ರಭಾವ ಅತ್ಯಲ್ಪವಾಗಿದ್ದರೂ ಭಾರತ ಹವಾಮಾನ ಬದಲಾವಣೆ ತಡೆಗೆ ಮೂರು ಕ್ರಮಗಳನ್ನು ಕೈಗೊಂಡಿದೆ. ಇವೆಲ್ಲವೂ ಬಹು ಆಯಾಮದ ಉಪಕ್ರಮಗಳಾಗಿವೆ,'' ಎಂದು ಹೇಳಿದರು.

**9 ವರ್ಷ ಮೊದಲೇ ಗುರಿ ಸಾಧನೆ:** ಸ್ಥಾಪಿತ ವಿದ್ಯುತ್ ಉತ್ಪಾದನೆಯಲ್ಲಿ ಶೇ. 40ರಷ್ಟನ್ನು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ತಯಾರಿಸುವ ಗುರಿಯನ್ನು ಭಾರತ ಹೊಂದಿತ್ತು. ಈ ಗುರಿಯನ್ನು ನಿಗದಿತ ಗಡುವಿಗಿಂತಲೂ 9 ವರ್ಷ ಮೊದಲೇ ಸಾಧಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

**ಹಸಿರು ಹೊದಿಕೆ ಹೆಚ್ಚಳ:** ಕಳೆದ ಎಂಟು ವರ್ಷಗಳಲ್ಲಿ ಭಾರತದ ಅರಣ್ಯ ಪ್ರದೇಶವು 20,000 ಚದರ ಕಿ.ಮೀ.ಗಳಷ್ಟು ಹೆಚ್ಚಳವಾಗಿದೆ. ವನ್ಯಜೀವಿಗಳ ಸಂಖ್ಯೆಯಲ್ಲೂ ದಾಖಲೆ ಏರಿಕೆಯಾಗಿದೆ ಎಂದು ತಿಳಿಸಿದರು.

**ಸೌರ ಶಕ್ತಿ ಸಾಮರ್ಥ್ಯ ವೃದ್ಧಿ:** ಭಾರತದ ಸೌರಶಕ್ತಿ ಸಾಮರ್ಥ್ಯವು 18 ಪಟ್ಟು ಹೆಚ್ಚಳವಾಗಿದೆ. 'ಜಲಜೀವನ್ ಮಿಷನ್', ಅಮೃತ್ ನಗರ ಅಭಿಯಾನ, ಸ್ಕ್ರ್ಯಾಪ್ ನೀತಿ ಇತ್ಯಾದಿ ಉಪಕ್ರಮಗಳು ಪರಿಸರ ಸಂರಕ್ಷಣೆ ವಿಚಾರದಲ್ಲಿ ಭಾರತ ಸರಕಾರದ ಬದ್ಧತೆಗೆ ಉದಾಹರಣೆಗಳು ಎಂದು ವಿವರಿಸಿದರು.

**ಮಹತ್ವಾಕಾಂಕ್ಷಿ ಯೋಜನೆಗಳ ನೆರವು:** ಕಳೆದ ಎಂಟು ವರ್ಷಗಳಲ್ಲಿ ಸರಕಾರದ ಹಲವು ಮಹತ್ವಾಕಾಂಕ್ಷೆಯ ಯೋಜನೆಗಳು ಪರಿಸರ ಸಂರಕ್ಷಣೆಗೆ ಮಹತ್ವದ ಕೊಡುಗೆ ಸಲ್ಲಿಸಿವೆ ಎಂದು ಪ್ರಧಾನಿಯವರು, ಇದಕ್ಕೆ ಸ್ವಚ್ಛ ಭಾರತ ಯೋಜನೆ, 'ಒಂದೇ ಭೂಮಿ, ಒಬ್ಬನೇ ಸೂರ್ಯ' ಮುಂತಾದ ಯೋಜನೆಗಳನ್ನು ಉದಾಹರಿಸಿದರು. ಕಸದಿಂದ ರಸ ಅಭಿಯಾನದಡಿ ಏಕ ಬಳಕೆ ಪ್ಲಾಸ್ಟಿಕ್ ತಯಾರಿಕೆ ಹಾಗೂ ಬಳಕೆ ನಿಯಂತ್ರಿಸುವ ಬಗ್ಗೆ ವಿವರಿಸಿದರು.

ನದಿಗಳ ಸಂರಕ್ಷಣೆ, ನೈಸರ್ಗಿಕ ಕೃಷಿಗೆ ಉತ್ತೇಜನ, ಜಲಮೂಲಗಳ ಬಳಕೆಗೆ ಉತ್ತೇಜನ ನೀಡಿರುವ ಸರಕಾರದ ಪರಿಸರ ಸ್ನೇಹಿ ಕ್ರಮಗಳ ಬಗ್ಗೆಯೂ ಅವರು ಮಾತನಾಡಿದರು.

**ಸದ್ಗುರು ಅಭಿಯಾನ:** ಇಶಾ ಫೌಂಡೇಷನ್ ಸಂಸ್ಥಾಪಕ ಸದ್ಗುರು ಅವರು ಜಾಗತಿಕ ಮಟ್ಟದಲ್ಲಿ 'ಮಣ್ಣು ಉಳಿಸಿ ಅಭಿಯಾನ' ಕೈಗೊಂಡಿದ್ದಾರೆ. ಹದಗೆಡುತ್ತಿರುವ ಮಣ್ಣಿನ ಆರೋಗ್ಯವನ್ನು ರಕ್ಷಿಸುವುದು, ಸಾರಯುಕ್ತ ಮಣ್ಣಿನ ಸಂರಕ್ಷಣೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಈ ಅಭಿಯಾನದ ಉದ್ದೇಶವಾಗಿದೆ. ಕಳೆದ ಮಾರ್ಚ್‌ನಲ್ಲಿ ಈ ಅಭಿಯಾನ ಆರಂಭವಾಗಿದ್ದು, ಇದರ ಭಾಗವಾಗಿ ಸದ್ಗುರು 27 ದೇಶಗಳ ಮೂಲಕ 100 ದಿನಗಳ ಮೋಟಾರ್ ಸೈಕಲ್ ಯಾತ್ರೆಯನ್ನು ಮಾಡಿದ್ದಾರೆ.



ದಿಲ್ಲಿಯ ವಿಜ್ಞಾನ ಭವನದಲ್ಲಿ ಭಾನುವಾರ ನಡೆದ 'ಮಣ್ಣು ರಕ್ಷಣೆ ಆಂದೋಲನ' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸದ್ಗುರು ಜಗ್ಗಿ ವಾಸುದೇವ್ ಪಾಲ್ಗೊಂಡರು.

### ರೈತರಿಗೆ ಭರ್ಜರಿ ಆದಾಯ

2014ರಲ್ಲಿ ಪೆಟ್ರೋಲ್ ಜತೆ ಎಥೆನಾಲ್ ಮಿಶ್ರಣದ ಪ್ರಮಾಣ ಶೇ.1.5ರಷ್ಟಿತ್ತು. ಈ ಪ್ರಮಾಣವನ್ನು ಶೇ. 10ಕ್ಕೆ ಹೆಚ್ಚಿಸಿದ ಮೂಲಕ ಭಾರತವು 27 ಲಕ್ಷ ಟನ್ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು ತಡೆದಿದೆ. ಅಲ್ಲದೆ, 41,000 ಕೋಟಿ ರೂ.ಗಳಷ್ಟು ವಿದೇಶಿ ವಿನಿಮಯ ಸಂಗ್ರಹ ಉಳಿತಾಯವಾಗಿದೆ. ಅಲ್ಲದೆ, ಭಾರತದ ಈ ಕ್ರಮದ ರೈತರಿಗೆ ಸುಮಾರು 40,000 ಕೋಟಿ ರೂ.ಗಳಷ್ಟು ಆದಾಯವನ್ನು ಗಳಿಸಿಕೊಟ್ಟಿದೆ,'' ಎಂದು ಮೋದಿ ಹೇಳಿದರು.

### ಶ್ರೀಮಂತ ದೇಶಗಳಿಗೆ ಚಾಟಿ

ಜಾಗತಿಕ ಹವಾಮಾನ ಬದಲಾವಣೆ, ಪರಿಸರ ಮಾಲಿನ್ಯಕ್ಕೆ ಅಭಿವೃದ್ಧಿ ಹೊಂದಿದ ದೇಶಗಳ 'ಕೊಡುಗೆಯೇ' ಅಧಿಕವಾಗಿದೆ. ಆದರೆ, ಆ ದೇಶಗಳು ಇದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳದೆ, ಅಭಿವೃದ್ಧಿಶೀಲ ದೇಶಗಳತ್ತ ಬೊಟ್ಟು ಮಾಡುತ್ತಿವೆ ಎಂದು ಪ್ರಧಾನಿ ಆರೋಪಿಸಿದರು. ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳು ಭೂಮಿಯ ಸಂಪನ್ಮೂಲಗಳನ್ನು ಅಗಾಧ ಮಟ್ಟದಲ್ಲಿ ಬಳಸುತ್ತಿರುವುದಲ್ಲದೆ, ಗರಿಷ್ಠ ಮಟ್ಟದಲ್ಲಿ ಇಂಗಾಲ ಮಾಲಿನ್ಯ ಉಂಟು ಮಾಡುತ್ತಿವೆ. ಜಾಗತಿಕ ಮಟ್ಟದಲ್ಲಿ ವ್ಯಕ್ತಿಯೊಬ್ಬ ಸರಾಸರಿ ಕಾರ್ಬನ್ ಫುಟ್‌ಪ್ರಿಂಟ್ 4 ಟನ್‌ಗಳಷ್ಟಿದೆ. ಆದರೆ, ಭಾರತದಲ್ಲಿ ಇದರ ಪ್ರಮಾಣ ಕೇವಲ 0.5 ಟನ್ ಆಷ್ಟೇ ಎಂದರು.

### ಮಣ್ಣು ರಕ್ಷಣೆಗೆ ಪಂಚ ತಂತ್ರ

2070ರ ವೇಳೆಗೆ 'ನೆಟ್ ಝೀರೋ' ಗುರಿ ಸಾಧನೆಯ ಸಂಕಲ್ಪ ವನ್ನು ಪ್ರಧಾನಿ ಪುನರುಚ್ಚರಿಸಿದರು. ಇದೇ ವೇಳೆ, ಮಣ್ಣು ಉಳಿಸಾಯುವಿಕೆ ಐದು ಅಂಶಗಳ ಬಗ್ಗೆ ಗಮನ ಹರಿಸುತ್ತಿರುವುದಾಗಿ ಅವರು ತಿಳಿಸಿದರು. ಮಣ್ಣನ್ನು ರಾಸಾಯನಿಕ ಮುಕ್ತಗೊಳಿಸುವುದು, ಮಣ್ಣಿನಲ್ಲಿರುವ ಜೀವಜಾಲಗಳ ರಕ್ಷಣೆ, ಮಣ್ಣಿನ ತೇವಾಂಶ ರಕ್ಷಣೆ, ಅಂತರ್ಜಲ ಕುಸಿಯದಂತೆ ಮಣ್ಣಿಗೆ ಆಗುವ ಹಾನಿಯನ್ನು ಸರಿಪಡಿಸುವುದು ಹಾಗೂ ಅರಣ್ಯ ನಾಶದಿಂದ ಮಣ್ಣಿನ ಸವಕಳಿ ತಪ್ಪಿಸುವುದು ಈ ಐದು ಅಂಶಗಳಲ್ಲಿ ಸೇರಿವೆ.

5ನೇ ಆರೋಪಿ ನಾಪತ್ತೆ | ಎಐಎಂಐಎಂ ಶಾಸಕನ ಪುತ್ರ ಶಾಮೀಲು ಶಂಕೆ

## ಸಾಮೂಹಿಕ ಅತ್ಯಾಚಾರ: 4ನೇ ಆರೋಪಿ ಸೆರೆ

**ಹೈದರಾಬಾದ್:** ನಗರದ ಜುಬಿಲಿ ಹಿಲ್ಸ್‌ನಲ್ಲಿ ನಡೆದ ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕನೇ ಆರೋಪಿಯನ್ನು ತೆಲಂಗಾಣ ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಈತನೂ ಅಪ್ರಾಪ್ತ ವಯಸ್ಸಿನವನಾಗಿದ್ದು, ಪೊಲೀಸರ ಕೂಡ ಪ್ರಕರಣ ಸಂಬಂಧ ಇಬ್ಬರು ಬಾಲ ಆರೋಪಿಗಳನ್ನು ಬಂಧಿಸಲಾಗಿತ್ತು. ಇದಲ್ಲದೇ ಜೂನ್ 3ರಂದು ಕೂಡ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಈ ಪೈಕಿ ಇಬ್ಬರು ಬಾಲಕರು ಸುಪ್ರಸಿದ್ಧ ಪಬ್ಲಿಕ್ ಹಾಗೂ ಹೈದರಾಬಾದಿನ ಪ್ರಭಾವಿ ರಾಜಕಾರಣಿಯ ಕುಟುಂಬದವರು ಎಂದು ಮಾಧ್ಯಮಗಳು ವರದಿ ಮಾಡಿವೆ.

''ಐದನೇ ಆರೋಪಿ ನಾಪತ್ತೆಯಾಗಿದ್ದು, ಆತನಿಗಾಗಿ ತೀವ್ರ ಶೋಧ ನಡೆಸುತ್ತಿದ್ದೇವೆ. ನಾಲ್ವರು ಬಂಧಿತರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದೇವೆ,'' ಎಂದು ಜುಬಿಲಿ ಹಿಲ್ಸ್ ಠಾಣೆಯ ಅಧಿಕಾರಿ ರಾಜಶೇಖರ್ ರೆಡ್ಡಿ ತಿಳಿಸಿದ್ದಾರೆ.

ಅತ್ಯಾಚಾರದ ಆರೋಪಿ ಗಳಾದ ಯುವಕರು ಪ್ರಭಾವಿ ಕುಟುಂಬಸ್ಥರು ಎಂದು ವರದಿಯಾಗುತ್ತಿವೆ. ಆದರೆ, ಅವರು ಸಂಸ್ಕೃತಿ, ಮಾನವೀಯ ಮೌಲ್ಯಗಳ ದರಿದ್ರತೆ ಇರುವ ಬಡ ಕುಟುಂಬಗಳಿಗೆ ಸೇರಿದವರು. ಸಂತ್ರಸ್ತೆಗೆ ನ್ಯಾಯ ಸಿಗಲಿ ಎಂದು ಆಶಿಸುವೆ.

**-ಆನಂದ್ ಮಹೀಂದ್ರಾ** ಉದ್ಯಮಿ

ಮತ್ತೊಂದೆಡೆ, ಬಿಜೆಪಿ ಶಾಸಕ ಎಂ. ರಘುನಂದನ್ ರಾವ್ ಅವರು ಸುದ್ದಿಗೋಷ್ಠಿ ನಡೆಸಿ, ಹಲವು ಫೋಟೋಗಳನ್ನು ಬಿಡುಗಡೆ ಮಾಡಿದ್ದಾರೆ. ''ಆರೋಪಿ ಯುವತಿಯೊಬ್ಬಳನ್ನು ಯುವಕನೊಬ್ಬ ಪೀಡಿಸುತ್ತಿರುವ ದೃಶ್ಯವಿದ್ದು, ಯುವಕ ನನ್ನು ಎಐಎಂಐಎಂ ಪಕ್ಷದ ಶಾಸಕನ ಪುತ್ರ ಎಂದು ಗುರುತಿಸಿದ್ದಾರೆ. ಆದಾಗ್ಯೂ ಆತನ ಒತ್ತಡದಿಂದ ಎಐಎಂಐಎಂ ಪಕ್ಷದ ಪ್ರಭಾವಿ ಶಾಸಕರ ಪುತ್ರನಾಗಿರುವ ಕಾರಣ, ಆತ ಶಾಮೀಲಾಗಿರುವ ಪ್ರಕರಣವನ್ನು ತಿರುಚಲು ಯತ್ನಿಸಲಾಗುತ್ತಿದೆ. ಶಾಸಕರ ಪುತ್ರ ದುಬೈಗೆ ಪರಾರಿಯಾಗಿರುವ ಸಾಧ್ಯತೆಯಿದೆ ಎಂದು ಶಂಕೆ ರಾವ್ ಆರೋಪಿಸಿದ್ದಾರೆ. ಈ ನಡುವೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣೆ ಆಯೋಗವು ಹೈದರಾಬಾದ್ ಪೊಲೀಸರಿಂದ ಅತ್ಯಾಚಾರ ಪ್ರಕರಣ ಸಂಬಂಧ ವಿಸ್ತೃತ ವರದಿಯನ್ನು ಕೇಳಿದೆ.

**ಸಿಬಿಐ ತನಿಖೆಗಾಗಿ ಪತ್ರ:** ''ಐದ್ರಾದ ನಡುವೆ ಬಿಜೆಪಿ ರಾಜ್ಯಾಧ್ಯಕ್ಷ ಬಂಡಿ ಸಂಜಯ್ ಕುಮಾರ್ ಅವರು ತೆಲಂಗಾಣ ಸಿಎಂ ಕೆ. ಚಂದ್ರಶೇಖರ್ ರಾವ್ ಅವರಿಗೆ ಪತ್ರ ಬರೆದು, ಅತ್ಯಾಚಾರ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸಿದ್ದಾರೆ. ಕೂಡಲೇ ಸರ್ವಪಕ್ಷಗಳ ಸಭೆ ಕರೆದು, ರಾಜ್ಯದ ಕಾನೂನು ಸ್ಥಿತಿಗತಿಯ ಬಗ್ಗೆ ಸಿಎಂ ಕೆಸಿಆರ್ ಮಾಹಿತಿ ನೀಡಬೇಕು. ಮಾದಕವಸ್ತುಗಳ ಜಾಲ ವಿಸ್ತರಿಸುತ್ತಿರುವ ಆರೋಪಗಳಿಗೂ ಸಮಜಾಯಿಷಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಪಾಕ್ ರಕ್ಷಣಾ ಬಜೆಟ್

## ₹83 ಶತಕೋಟಿಗೆ ಹೆಚ್ಚಳ

**ಇಸ್ಲಾಮಾಬಾದ್:** ಸಾಲದ ಮುಗ್ಗಟ್ಟು, ಆರ್ಥಿಕ ಬಿಕ್ಕಟ್ಟಿನಿಂದ ಕಂಗಾಲಾಗಿರುವ ಪಾಕಿಸ್ತಾನದಲ್ಲಿ ಮುಂಬರುವ ಹಣಕಾಸು ವರ್ಷಕ್ಕೆ ಸೇನೆ ಪಡೆಗೆ ಹೆಚ್ಚುವರಿಯಾಗಿ 83 ಶತಕೋಟಿ ರೂ. ನೀಡಲು ಅಲ್ಲಿನ ಸರಕಾರ ನಿರ್ಧರಿಸಿದೆ.


ವಾರ್ಷಿಕ ಬಜೆಟ್‌ನಲ್ಲಿ ಒಟ್ಟಾರೆಯಾಗಿ ದೇಶದ ರಕ್ಷಣಾ ವಲಯಕ್ಕಾಗಿಯೇ 1400 ಶತಕೋಟಿ ರೂ. ಮೀಸಲಿರಿಸಲು ತೀರ್ಮಾನಿಸಲಾಗಿದೆ ಎಂದು ಪಾಕ್ ಮಾಧ್ಯಮಗಳು ವರದಿ ಮಾಡಿವೆ. ಕಳೆದ ವರ್ಷದ ಹೋಲಿಕೆಯಲ್ಲಿ ಶೇ.6ರಷ್ಟು ಹೆಚ್ಚುವರಿ ಹಣವನ್ನು ರಕ್ಷಣಾ ಪಡೆಗಳ ಬಲವರ್ಧನೆಗೆ ಮೀಸಲಿರಿಸಲಾಗುತ್ತಿದೆ. ಈ ಪೈಕಿ ಹೆಚ್ಚಿನ ಅಂಶವು ಸಶಸ್ತ್ರ ಪಡೆಗಳ ದಿನನಿತ್ಯದ ನಿರ್ವಹಣೆ, ಸಂಬಳ, ತರಬೇತಿ, ವೇತನ ಹಾಗೂ ಇತರ ಭತ್ಯೆಗಳಿಗಾಗಿಯೇ ವೆಚ್ಚ ಮಾಡಲಾಗುತ್ತದೆ. ಈ ಮೂಲಕ ಪಾಕಿಸ್ತಾನದಲ್ಲಿ ಮೂರು ದಶಕಕ್ಕೂ ಹೆಚ್ಚು ಅವಧಿಗೆ ಆಡಳಿತ ನಡೆಸಿರುವ ಸೇನೆಯು ತನ್ನ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಪಾಕ್‌ನಲ್ಲಿ ಪ್ರತಿ ಲೀಟರ್‌ಗೆ ಡಾರ್ಸಲ್ 26.5 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ. ಮತ್ತೊಂದೆಡೆ, ಪಾಕ್‌ನಲ್ಲಿ ಹಣದುಬ್ಬರವು 11.3% ತಲುಪಿದ್ದು, ಆರ್ಥಿಕ ದಿವಾಳಿತನದ ಆತಂಕದಲ್ಲಿದೆ.

## ವಲಸೆ ಕಾರ್ಮಿಕರ ಸೈಕಲ್‌ಗಳ ಹರಾಜಿನಿಂದ ₹21 ಲಕ್ಷ ಸಂಗ್ರಹ

**ಲಖನೌ:** ಕೊರೊನಾ ನಿಯಂತ್ರಣಕ್ಕೆ 2020ರ ಮಾರ್ಚ್‌ನಲ್ಲಿ ಮೊದಲ ಬಾರಿಗೆ ದೇಶಾದ್ಯಂತ ಲಾಕ್‌ಡೌನ್ ಹೇರಿದ್ದ ವೇಳೆ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಲು ಪರದಾಡಿದ್ದರು. ಸಿಕ್ಕ ಸಿಕ್ಕ ವಾಹನಗಳಲ್ಲಿ ಕೆಲವರು ಊರು ಸೇರಿದ್ದರೆ, ಇನ್ನೂ ಒಂದಷ್ಟು ಕಾರ್ಮಿಕರು ಊರು ತಲುಪಲು ಸೈಕಲ್‌ಗಳನ್ನು ಬಳಸಿಕೊಂಡು, ಅವುಗಳನ್ನು ಎಲ್ಲೆಂದರಲ್ಲಿ ಹಾಗೆಯೇ ಬಿಟ್ಟು ಹೋಗಿದ್ದರು. ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಹೀಗೆ ವಲಸೆ ಕಾರ್ಮಿಕರು ಬಿಟ್ಟು ಹೋಗಿದ್ದ ಸೈಕಲ್‌ಗಳನ್ನು ಸ್ಥಳೀಯ ಆಡಳಿತ ಹರಾಜು ಹಾಕಿ 21.2 ಲಕ್ಷ ರೂ. ಸಂಗ್ರಹಿಸಿದೆ.

ಉತ್ತರ ಪ್ರದೇಶ ಮತ್ತು ಬಿಹಾರದ ವಲಸೆ ಕಾರ್ಮಿಕರು ಹರಿಯಾಣ, ಪಂಜಾಬ್, ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಜೀವನ ಅರಸಿ ವಲಸೆ ಹೋಗಿದ್ದರು. ಲಾಕ್‌ಡೌನ್ ಘೋಷಣೆಯಾದ ಕ್ಷಣದಿಂದಲೇ ಅಂತಾರಾಜ್ಯಗಳಿಂದ ಸೈಕಲ್ ಏರಿ ತಮ್ಮೂರು ತಲುಪಿದ್ದರು. ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶ, ಉತ್ತರಾಖಂಡದಿಂದ ಬಂದವರು ಸಹರಾನ್‌ಪುರದ ಗೇಟ್ ಬಳಿ ನಿಂತಿದೆ. ಇಲ್ಲಿಂದ ಬಂದ ಕಾರ್ಮಿಕರನ್ನು ಯುಪಿ ಸರಕಾರ, ಬಸ್‌ಗಳ ಮೂಲಕ ಊರಿಗೆ ಕಳುಹಿಸುವ ಕೆಲಸವನ್ನು ಮಾಡಿತ್ತು.

''25 ಸಾವಿರ ಕಾರ್ಮಿಕರು ಸಹರಾನ್‌ಪುರದಲ್ಲಿ ಸೈಕಲ್‌ಗಳನ್ನು ಬಿಟ್ಟು ತಮ್ಮ ಊರುಗಳಿಗೆ ತೆರಳಿದ್ದರು. 14,600 ಕಾರ್ಮಿಕರು ತಮ್ಮ ಸೈಕಲ್ ತೆಗೆದುಕೊಂಡು ಹೋಗಿದ್ದರು. ಆದರೆ ವಾರಸುದಾರರಿಲ್ಲದೆ ತುಕ್ಕು ಹಿಡಿದಿದ್ದ 5,400 ಸೈಕಲ್‌ಗಳನ್ನು ಹರಾಜು ಹಾಕಲಾಗಿದೆ,'' ಎಂದು ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಕಿನ್ಸುಕ್ ಶ್ರೀವಾಸ್ತವ್ ತಿಳಿಸಿದ್ದಾರೆ.



ಉತ್ತರಾಖಂಡಗೆ ಸಹರಾನ್‌ಪುರ ಗೇಟ್ ಬಳಿ ಬಿಟ್ಟು ಹೋಗಿದ್ದ ಸೈಕಲ್‌ಗಳು.

## ಅಮೆರಿಕದಲ್ಲಿ ಮತ್ತೆ ಗುಂಡಿನ ದಾಳಿ, 3 ಸಾವು

**ಫಿಲಿಡೆಲ್ಫಿಯಾ:** ನಾಗರಿಕರ ಮೇಲಿನ ಗುಂಡಿನ ದಾಳಿ ಪ್ರಕರಣಗಳು ದಿನೇದಿನೆ ಹೆಚ್ಚುತ್ತಿರುವ ನಡುವೆಯೇ ಅಮೆರಿಕದಲ್ಲಿ ಶನಿವಾರ ರಾತ್ರಿ ಮತ್ತೊಂದು ದಾಳಿ ನಡೆದಿದೆ. ಫಿಲಿಡೆಲ್ಫಿಯಾ ನಗರದ ಸೌತ್ ಸ್ಟ್ರೀಟ್‌ನಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದ ವೇಳೆಯೇ ರಸ್ತೆಯಲ್ಲಿ ವಾರಾಂತ್ಯದ ಮೋಜು ಮಸ್ತಿ ಮುಳುಗಿದ್ದ ಜನರ ಮೇಲೆ ಕೆಲವರು ಏಕಾಏಕಿಯಾಗಿ ಗುಂಡಿನ ಮಳೆ ಸುರಿಸಿದ್ದಾರೆ. ಇದ್ದರು ಪುರುಷರು ಹಾಗೂ ಒಬ್ಬ ಮಹಿಳೆ ಸೇರಿದಂತೆ ಒಟ್ಟು ಮೂವರು ಮೃತಪಟ್ಟಿದ್ದು, 11ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿ ಡಿ.ಎಫ್. ಪೇಸ್ ತಿಳಿಸಿದ್ದಾರೆ. ದಾಳಿಕೋರರ ಪೈಕಿ ಒಬ್ಬನಿಗೆ ಪೊಲೀಸರು ಗುಂಡಿಕ್ಕಿದ್ದಾರೆ, ಎಲ್ಲರೂ ಪರಾರಿಯಾಗಿದ್ದಾರೆ. ಇದುವರೆಗೂ ಯಾವುದೇ ಬಂಧನವಾಗಿಲ್ಲ. ಆದರೆ, ದಾಳಿಕೋರರು ಬಳಸಿದ ಎರಡು ಹ್ಯಾಂಡ್‌ಗನ್‌ಗಳನ್ನು ವಶಕ್ಕೆ ಪಡೆಯಲಾಗಿದೆ.



ಫಿಲಿಡೆಲ್ಫಿಯಾದಲ್ಲಿ ದಾಳಿಗೊಳಗಾದ ಸ್ಥಳ ಪರಿಶೀಲನೆ ನಡೆಸಿದ ಪೊಲೀಸರು.

ಜನಾಕ್ರೋಶ ರ‍್ಯಾಲಿಯಲ್ಲಿ ಕೇಜ್ರಿವಾಲ್ ಅಭಿಮತ

## ಕಾಶ್ಮೀರ ನಿಭಾಯಿಸಲು ಬಿಜೆಪಿಗೆ ಸಾಧ್ಯವಾಗದು

**ಹೊಸದಿಲ್ಲಿ:** ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ದಿಷ್ಟ ಹತ್ಯೆ ನಡೆಯುತ್ತಿದ್ದು, ಪಾಕಿಸ್ತಾನ ಎಂಬ ಉಗ್ರರ ಆಶ್ರಯತಾಣ ಬೆದರು ಕಲಿಸಬೇಕು. ರಾಷ್ಟ್ರದ ಭಾವನೆ ಇಲ್ಲಿದೆ, ''ಇದುವರೆಗೂ'' ಪರಿವರ್ತನೆಯಾಗಿಲ್ಲ, ಹತ್ಯೆಗಳು ಆತಂಕ ಹುಟ್ಟಿಸಿದೆ ಎಂದು ಎಎಪಿ ಸಂಚಾಲಕ ಕೇಜ್ರಿವಾಲ್ ಪಂಡಿತರ ಒಕ್ಕಲೆಬ್ಬಿಸುವಿಕೆಯ ಸಂಬಂಧದ ವಿಷಯವಾಗಿ ಮಾತನಾಡಿದರು. ಕಣಿವೆಯಲ್ಲಿ ಸ್ಥಿತಿ ನಿರ್ಮಾಣವಾಗಿದೆ. ಕೇಂದ್ರದ ಮೋದಿ ಸರಕಾರ ಕಾಶ್ಮೀರ ನಿಭಾಯಿಸುವಲ್ಲಿ ಬಿಜೆಪಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆಮ್ ಆದ್ಮಿ ಪಾರ್ಟಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಆರೋಪಿಸಿದ್ದಾರೆ.



**ಶಾ ಭೇಟಿ, ಕಾರ್ಯತಂತ್ರದ ಚರ್ಚೆ:** ಶಿವಭಕ್ತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಕಾಶ್ಮೀರದಲ್ಲಿ ಹಿಂದೂಗಳನ್ನು ಗುರಿಯಾಗಿಸಿ ನಡೆಯುತ್ತಿರುವ ಹತ್ಯೆಗಳ ಕುರಿತು ಹಾಗೂ ಅದರ ತಡೆಗೆ ಕೇಂದ್ರ ರೂಪಿಸಬೇಕಾದ ಕಾರ್ಯತಂತ್ರದ ಬಗ್ಗೆ ಚರ್ಚೆ ನಡೆಸಿದರು. 1990ರಲ್ಲಿ ಜಂತರ್ ಮಂತರ್‌ನಲ್ಲಿ ಭಾನುವಾರ ನಡೆದ ಆಪ್‌ನ 'ಜನ ಆಕ್ರೋಶ ರ‍್ಯಾಲಿ' ಉದ್ದೇಶಿಸಿ ಮಾತನಾಡಿದ ಅವರು, ''ಬಿಜೆಪಿಗೆ ಕೇವಲ ರಾಜಕಾರಣ ಮಾತ್ರವೇ ತಿಳಿದಿದೆ. ಕಣಿವೆ ನಿರ್ವಹಣೆ ಗೊತ್ತಿಲ್ಲ ಎನ್ನುವುದು ಸಾಬೀತಾಗಿದೆ. ಪಾಕಿಸ್ತಾನ ಕೂಡ ತನ್ನ ಕುತ್ಸಿತ ಕೃತ್ಯಗಳನ್ನು ಬಿಡ ಬೇಕು. ಕಾಶ್ಮೀರದಲ್ಲಿ ಹಿಂದೆ ಕೂಡ ಸಾಕಷ್ಟು ದಾಳಿಗಳು ನಡೆದಿವೆ. ಮುಂದೆಯೂ ನಮ್ಮದೇ ಆಗಿರಲಿದೆ. ಒಂದು ವೇಳೆ ಭಾರತೀಯರ ಆಡಳಿತವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದ್ದಾಗಲೂ ಹತ್ಯೆ ಹೆಚ್ಚಳವಾಗಿದೆ. ಪಿಎಂ ಪ್ಯಾಕೇಜ್ ಯೋಜನೆ ಅಡಿಯಲ್ಲಿ 4,500 ಕಾಶ್ಮೀರಿ ಪಂಡಿತರಿಗೆ ಕಣಿವೆಯಲ್ಲಿ ನೌಕರಿ ನೀಡಲಾಯಿತು. ಆದರೆ, ಕಾಶ್ಮೀರದಿಂದ ಹೊರಗೆ ಕೆಲಸ ಮಾಡಲು ಎಲ್ಲ ಒತ್ತಡ ಮಾಡುತ್ತಿರುವ ಬಳಿಕ, ಇದು ರಕ್ಷಣೆಯಿಲ್ಲದಂತಾಗಿದೆ ಆದ ಮಾತಾಗಿ ಹೊರಹಾಕಿದ್ದಾರೆ.

ಉದ್ಯೋಗಕ್ಕೆ ಕಠಿಣ ಷರತ್ತು


### ಸಿಬ್ಬಂದಿ ಅಸಮಾಧಾನ


**ಬೆಂಗಳೂರು:** ಕಂಪನಿ ತೊರೆದ ಆರು ತಿಂಗಳ ಒಳಗಾಗಿ ಉದ್ಯೋಗಿಗಳು ಪ್ರತಿಸ್ಪರ್ಧಿ ಕಂಪನಿಗಳನ್ನು ಮತ್ತು ವೆಂಡರ್ ಸಂಸ್ಥೆಗಳನ್ನು ಸೇರುವಂತಿಲ್ಲ ಎಂಬ ಷರತ್ತನ್ನು ಉದ್ಯೋಗಿಗಳಿಗೆ ನೇಮಕಾತಿ ಪತ್ರದಲ್ಲೇ ನಿಗದಿಪಡಿಸುವ ಐಟಿ ದಿಗ್ಗಜ ಇನ್ಫೋಸಿಸ್ ಕಂಪನಿ ನಡೆ ವಿರುದ್ಧ ಉದ್ಯೋಗಿಗಳಿಂದ ಅಸಮಾಧಾನ ವ್ಯಕ್ತವಾಗಿದೆ.

ಕಂಪನಿಯ ಜಾಬ್ ಆಫರ್ ಲೆಟರ್‌ಗಳಲ್ಲಿ ಉಲ್ಲೇಖಿಸುತ್ತಿರುವ ಸ್ಪರ್ಧಾತ್ಮಕವಲ್ಲದ ಒಪ್ಪಂದ ಷರತ್ತನ್ನು ತೆಗೆದುಹಾಕುವಂತೆ ಒತ್ತಾಯಿಸಿ ಪುಣೆ ಮೂಲದ ನಾಸೆಂಟ್ ಇನ್ಫರ್ಮೇಷನ್ ಟೆಕ್ನಾಲಜಿ ಎಂಪ್ಲಾಯೀಸ್ ಸೆನೆಟ್ ಕಾರ್ಮಿಕ ಸಂಘವು ಒತ್ತಾಯಿಸಿದೆ. ಜಾಬ್ ಆಫರ್ ಲೆಟರ್‌ಗಳಲ್ಲಿ ಈ ಷರತ್ತು ವಿಧಿಸದಂತೆ ಐಟಿ ಕಂಪನಿಗಳಿಗೆ ಸೂಚಿಸಬೇಕು ಎಂದು ಸಂಘವು ಕೇಂದ್ರ ಕಾರ್ಮಿಕ ಸಚಿವಾಲಯದ ಮೊರೆ ಹೋಗಿದೆ. ಇದೇ ವಿಚಾರವಾಗಿ ಕಾರ್ಮಿಕ ಸಚಿವಾಲಯವು ಏಪ್ರಿಲ್ 28ರಂದು ದಿಲ್ಲಿಯಲ್ಲಿ ಚರ್ಚೆ ನಡೆಸಿತ್ತು. ಇನ್ಫೋಸಿಸ್ ಕಂಪನಿಯ, ಬ್ಯುಸಿನೆಸ್ ಗೌಪ್ಯತೆಗಳನ್ನು ಕಾಪಾಡುವ ಉದ್ದೇಶದಿಂದ ಆಫರ್ ಲೆಟರ್‌ನಲ್ಲಿ ಈ ಷರತ್ತು ವಿಧಿಸಲಾಗುತ್ತಿದೆ. ಐಟಿ ಕಂಪನಿಗಳಲ್ಲಿ ಇದು ಸಾಮಾನ್ಯ ಎಂದು ಸ್ಪಷ್ಟನೆ ನೀಡಿದೆ.

ವಿಶ್ವದಲ್ಲೇ ಅತ್ಯಂತ ಪ್ರತಿಷ್ಠಿತ ತಂತ್ರಜ್ಞಾನ ಕಂಪನಿ ಎಂಬ ಹೆಗ್ಗಳಿಕೆಯ 'ಆ್ಯಪಲ್' ತನ್ನ ಅತ್ಯಂತ ಸಣ್ಣ ಉತ್ಪನ್ನ 'ಐಪ್ಯಾಡ್' ಮಾರಾಟದಿಂದ ಗಳಿಸುವ ಆದಾಯವು ಭಾರತದ ಬೃಹತ್ ಐಟಿ ಕಂಪನಿಗಳ ಒಟ್ಟಾರೆ ಆದಾಯಕ್ಕಿಂತಲೂ ಅಧಿಕ ಎಂದು ತಿಳಿದುಬಂದಿದೆ. ಕಳೆದ ಜನವರಿ-ಮಾರ್ಚ್ ತ್ರೈಮಾಸಿಕ ವರದಿಯಲ್ಲಿ ಐಪ್ಯಾಡ್ ದೊರಕಿಸಿ ಕೊಟ್ಟಿರುವ ಆದಾಯವು ಭಾರತದ ಐಟಿ ದಿಗ್ಗಜರನ್ನು ಹಿಂದಿಕ್ಕಿರುವುದು ಬೆಳಕಿಗೆ ಬಂದಿದೆ

# ಭಾರತದ ಐಟಿಗಿಂತ ಐಪ್ಯಾಡ್ ದೊಡ್ಡದು!




ಡಿಜಿಟಲ್ ಮಹಾಪರಿವರ್ತನೆ ಕಡೆಗೆ ವಿಶ್ವವು ಮುಖ ಮಾಡುತ್ತಿರುವ ಪರ್ವದಲ್ಲಿ ದೇಶದ ಐಟಿ ದಿಗ್ಗಜ ಕಂಪನಿಗಳು ದೇಶದ ಅಭಿವೃದ್ಧಿಗೆ ಪೂರಕ ಕೊಡುಗೆಯಲ್ಲಿ ಮಹತ್ತರ ಪಾತ್ರವಹಿಸುವುದನ್ನು ಭಾರತ ಎದುರು ನೋಡುತ್ತಿದೆ.

ಮೂಲ: ಫೋರ್ಬ್ಸ್ ಗ್ಲೋಬಲ್ 2000-22

ಕರ್ನಾಟಕ ಸರ್ಕಾರ
ಅಟಲ್ ಭೂಜಲ್ ಯೋಜನೆ
ಯೋಜನಾ ನಿರ್ವಹಣಾ ಘಟಕ, ನಂ.1/1, 3ನೇ ಮಹಡಿ, ಕೆ.ಎಸ್.ಎಫ್.ಸಿ. ಭವನ, ತಿಮ್ಮಯ್ಯ ರಸ್ತೆ, ಬೆಂಗಳೂರು-560052.
ಅಧಿಸೂಚನೆ ಸಂಖ್ಯೆ: Atal Jal/PROC/18/2022-23/Call-2 ದಿನಾಂಕ: 06.06.2022
ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿಯ ಟೆಂಡರ್ ಅಧಿಸೂಚನೆ
Providing vehicles on Monthly basis with drivers to SPMU Office
ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ, ಅಟಲ್ ಭೂಜಲ ಯೋಜನೆ, ಬೆಂಗಳೂರು ರವರು ಅರ್ಹ ನೋಂದಾಯಿತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.
ಟೆಂಡರ್ ದಾಖಲಾತಿಯನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಇ-ಪೋರ್ಟಲ್‌ನಲ್ಲಿ ಸಂಪೂರ್ಣ ಮಾಹಿತಿಯನ್ನು ದಿನಾಂಕ: 06.06.2022 ಪೂರ್ವಾಹ್ನ 11.30 ಘಂಟೆಯ ನಂತರ ಡೌನ್‌ಲೋಡ್ ಮಾಡಬಹುದಾಗಿದೆ. ಆನ್‌ಲೈನ್ ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.06.2022 ಅಪರಾಹ್ನ 17:30.
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ 10.00 ರಿಂದ 5.30 ಭೇಟಿ ನೀಡಬಹುದು.
ಸಹಿ/-
ಟೆಂಡರ್ ಆಹ್ವಾನಿಸುವ ಅಧಿಕಾರಿ, SPMU, ಅಟಲ್ ಭೂಜಲ್ ಯೋಜನೆ, ಬೆಂಗಳೂರು.

ತಂದೆ ಮಾಡಿದ್ದ ಸಾಲ ತೀರಿಸುವಂತೆ ತಬ್ಬಲಿ ಮಗುವಿನ ಮೇಲೆ ಒತ್ತಡ

## ಕೋವಿಡ್ ಅನಾಥ ಮಕ್ಕಳಿಗೆ ಸಾಲದ ನೋಟಿಸ್

**ಭೋಪಾಲ್:** ದೇಶದಲ್ಲಿ ಮತ್ತೆ ನಿಧಾನಗತಿಯಲ್ಲಿ ಕೊರೊನಾ ಸಂಖ್ಯೆ ಹೆಚ್ಚಳವಾಗುತ್ತಿರುವ ಮಧ್ಯೆಯೇ ಕೋವಿಡ್‌ನಿಂದ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಸಾಲ ಮರುಪಾವತಿಸುವಂತೆ ಹಣಕಾಸು ಸಂಸ್ಥೆಗಳಿಂದ ನೋಟಿಸ್ ಬರುತ್ತಿದೆ.

ಕೋವಿಡ್ ಮೊದಲ ಹಾಗೂ ಎರಡನೇ ಅಲೆಯ ವೇಳೆ ಸಾವಿರಾರು ಜನ ಮೃತಪಟ್ಟಿದ್ದರಿಂದ ಅದೆಷ್ಟೋ ಮಕ್ಕಳು ತಂದೆ-ತಾಯಿ ಕಳೆದುಕೊಂಡು ಅನಾಥರಾಗಿದ್ದರು. ಕೆಲವು ಮಕ್ಕಳಿಗೆ ಎನ್‌ಜಿಒಗಳು ಆಸರೆಯಾಗಿದ್ದರೆ, ಇನ್ನೂ ಕೆಲವು ಮಕ್ಕಳು ಸಂಬಂಧಿಕರ ಪೋಷಣೆಯಲ್ಲಿ ಜೀವನ ಸಾಗಿಸುತ್ತಿವೆ. ತಂದೆ-ತಾಯಿ ಸಾಲ ತೆಗೆದುಕೊಂಡಿದ್ದರಿಂದ ಅಪ್ರಾಪ್ತ ವಯಸ್ಸಿನ ಮಕ್ಕಳಿಗೂ ಸಾಲ ಮರುಪಾವತಿಸುವಂತೆ ನೋಟಿಸ್‌ಗಳು ಬರುತ್ತಿವೆ. ಮಧ್ಯಪ್ರದೇಶದ ಭೋಪಾಲ್‌ನಲ್ಲಿ ವನಿಶಾ ಪಾಠಕ್ 17 ವರ್ಷದ ಅಪ್ರಾಪ್ತೆಗೆ ಜೀವ ವಿಮೆ ಕಂಪನಿಯೊಂದರಿಂದ ಇಂತಹ ನೋಟಿಸ್ ಬಂದಿರುವುದು ತಡವಾಗಿ ಬೆಳಕಿಗೆ ಬಂದಿದೆ.

ವನಿಶಾ ಪಾಠಕ್ ಅವರ ತಂದೆ ಜಿತೇಂದ್ರ ಪಾಠಕ್ ಜೀವ ವಿಮೆ ಕಂಪನಿಯ ಏಜೆಂಟ್ ಆಗಿದ್ದು, ಅವರು ಭಾರಿ ಮೊತ್ತದ ಸಾಲ ಪಡೆದು ಕೊಂಡಿದ್ದರು. 29 ಲಕ್ಷ ರೂ. ಸಾಲ ಮರುಪಾವತಿಸುವಂತೆ ವನಿಶಾಗೆ ಕಳೆದ ಫೆಬ್ರವರಿ 2ರಂದು ನೋಟಿಸ್ ಬಂದಿದ್ದು, ಅವರು ಸಂಬಂಧಿಕರಾದ ಪ್ರೊ.ಅಶೋಕ್ ಶರ್ಮಾ ಅವರ ಜತೆ ತಮ್ಮ ಸಂಕಷ್ಟವನ್ನು ಮಾಧ್ಯಮಗಳ ಮುಂದೆ ಹೇಳಿಕೊಂಡಾಗ ಪ್ರಕರಣ ಬೆಳಕಿಗೆ ಬಂದಿದೆ.



ಪ್ರತಿಭಾವಂತ ವನಿಶಾಗೆ ಈಗ 17 ವರ್ಷ. ''ನನಗೆ ಈಗ ತಮ್ಮನನ್ನು ನೋಡಿಕೊಳ್ಳುವ ಜವಾಬ್ದಾರಿ ಇದೆ. ನಾನು ಹಾಗೂ ತಮ್ಮನಿಗೆ ಇನ್ನೂ 18 ವರ್ಷ ತುಂಬದ ಕಾರಣ ತಂದೆ ಮಾಡಿಟ್ಟಿರುವ ಪಾಲಿಸಿಗಳಿಂದ ಬರುವ ಹಣ ಹಾಗೂ ಬಡ್ಡಿ ಹಣ ಕೈಸೇರಿಲ್ಲ. ತಿಂಗಳ ಹಣ ಹಾಗೂ ಜೀವನ ಹಿಂತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ನೋಟಿಸ್ ಬಂದರೆ ಏನು ಮಾಡುವುದು,'' ಎಂದು ವನಿಶಾ ಅಲವತ್ತುಕೊಂಡಿದ್ದಾರೆ. ಈ ಸಂಬಂಧ ಜೀವ ವಿಮೆ ಕಂಪನಿಗೆ ಹಲವು ಬಾರಿ ಪತ್ರ ಬರೆದಿದ್ದರೂ ಅಲ್ಲಿಂದ ಸೂಕ್ತ ಪ್ರತಿಕ್ರಿಯೆ ಬಂದಿಲ್ಲ ಎಂದು ಅರೋಪಿಸಿದ್ದಾರೆ.

ಈ ಮಧ್ಯೆ ವಿಮಾ ಕಂಪನಿ ಅಧಿಕಾರಿಗಳು ವನಿಶಾಗೆ 18 ವರ್ಷ ತುಂಬುವವರೆಗೂ ಯಾವುದೇ ನೋಟಿಸ್ ಕಳುಹಿಸುವುದಿಲ್ಲ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೋವಿಡ್‌ನಿಂದ ಅನಾಥರಾದ ಮಕ್ಕಳ ನೆರವಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವು ಆರ್ಥಿಕ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಸಾಲ ಮರುಪಾವತಿಯ ಭೀತಿ ಮಾತ್ರ ತಪ್ಪುತ್ತಿಲ್ಲ ಎನ್ನಲಾಗುತ್ತಿದೆ.


ವನಿಶಾ 10ನೇ ತರಗತಿಯಲ್ಲಿ 99.8% ಸ್ಕೋರ್ ಮಾಡಿರುವ

## ದೇಶದಲ್ಲಿ ಸಕ್ರಿಯ ಕೇಸ್‌ಗಳ ಏರಿಕೆ

**ಹೊಸದಿಲ್ಲಿ:** ಭಾನುವಾರ ಬೆಳಗ್ಗೆ 8 ಗಂಟೆಗೆ ಅಂತ್ಯಗೊಂಡ ಕಳೆದ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 4,270 ಕೊರೊನಾ ಪ್ರಕರಣಗಳು ವರದಿಯಾಗಿವೆ. 15 ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಮಹಾರಾಷ್ಟ್ರ, ಆಂಧ್ರ ಪ್ರದೇಶ, ಒಡಿಶಾ ಸೇರಿ ಕೆಲವು ರಾಜ್ಯಗಳ ಸೋಂಕಿತರಲ್ಲಿ ಒಮಿಕ್ರಾನ್ ರೂಪಾಂತರಿ ಬಿಎ.4 ಹಾಗೂ ಬಿಎ.5 ಉಪತಳಿ ಪ್ರಕರಣಗಳು ಪತ್ತೆಯಾದ ಬೆನ್ನಲ್ಲೇ ಪ್ರಕರಣಗಳ ಸಂಖ್ಯೆ ದಿಢೀರ್ ಏರಿಕೆಯಾಗಿದೆ. ಕಳೆದ 24 ಗಂಟೆಗಳ ಅವಧಿಯಲ್ಲಿ ಸಕ್ರಿಯ ಕೇಸ್‌ಗಳ ಸಂಖ್ಯೆ 1,636 ಹೆಚ್ಚಳಗೊಂಡಿದ್ದು, ಒಟ್ಟು ಸಕ್ರಿಯ ಸೋಂಕಿತರ ಸಂಖ್ಯೆ 24,052 ತಲುಪಿದೆ. ಸಾವಿನ ಸಂಖ್ಯೆ 5,24,692ಕ್ಕೆ ಏರಿಕೆಯಾಗಿದೆ.

### ಫಡ್ನವಿಸ್, ಶಾರೂಕ್‌ಗೆ ಸೋಂಕು

ಮಹಾರಾಷ್ಟ್ರದಲ್ಲಿ ಕೊರೊನಾ ಮತ್ತೆ ದಿಢೀರ್ ಏರಿಕೆಯಾಗುತ್ತಿದೆ. ಮಾಸ್ಕ್ ಧಾರಣೆ, ಸಾಮಾಜಿಕ ಅಂತರ ಪಾಲನೆ ಸೇರಿ ಕೊರೊನಾ ನಿಯಂತ್ರಣ ವಿಧಿ ಕ್ರಮಗಳು ಮತ್ತೆ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುವ ಸುಳಿವನ್ನು ಸರಕಾರ ನೀಡಿದೆ. ಈ ಮಧ್ಯೆ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಬಾಲಿವುಡ್ ನಟ ಶಾರೂಕ್ ಖಾನ್, ಕಾರ್ತಿಕ್ ಆರ್ಯನ್, ಆದಿತ್ಯ ರಾಯ್ ಕಪೂರ್, ನಟಿ ಕತ್ರಿನಾ ಕೈಫ್ ಸೇರಿದಂತೆ ಹಲವರಿಗೆ ಕೊರೊನಾ ಸೋಂಕು ತಗುಲಿದೆ. ಬಾಲಿವುಡ್ ಸೆಲೆಬ್ರಿಟಿಗಳು ಮೇ 25ರಂದು ನಡೆದ ಚಿತ್ರ ನಿರ್ಮಾಪಕ ಕರಣ್ ಜೋಹರ್ ಅವರ 50ನೇ ಜನ್ಮದಿನದ ಪಾರ್ಟಿಯಲ್ಲಿ ಭಾಗಿಯಾಗಿದ್ದರು.






## ಸ್ಟೇಟ್ ನ್ಯೂಸ್

### 3ನೇ ಶನಿವಾರ ವಿದ್ಯುತ್ ಅದಾಲತ್

**ಬೆಂಗಳೂರು:** ಪ್ರತಿ ತಿಂಗಳ 3ನೇ ಶನಿವಾರ ವಿದ್ಯುತ್ ಅದಾಲತ್ ನಡೆಸಬೇಕು ಎಂದು ಇಂಧನ ಸಚಿವ ಸುನಿಲ್ ಕುಮಾರ್ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ. ''ಪ್ರತಿ ತಿಂಗಳ 3ನೇ ಶನಿವಾರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸೇರಿದಂತೆ ಎಲ್ಲ ಅಧಿಕಾರಿಗಳು ತಾಲೂಕಿನ ಕೊನೇ ಹಳ್ಳಿವರೆಗೆ ಭೇಟಿ ನೀಡಬೇಕು. ವಿದ್ಯುತ್ ಅದಾಲತ್ ನಡೆಸಿ ಸಮಸ್ಯೆಗಳಿಗೆ ಪರಿಹಾರ ನೀಡಬೇಕು,'' ಎಂದು ಆದೇಶಿಸಿದ್ದಾರೆ.



''ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳ ಬಗ್ಗೆ ಅರಿತು ಶೀಘ್ರ ಪರಿಹಾರ ಕಂಡುಕೊಳ್ಳಲು ಆಂದೋಲನ ರೀತಿಯ ಕಾರ್ಯಕ್ರಮ ರೂಪಿಸಬೇಕು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಮಟ್ಟದ ಅಧಿಕಾರಿಗಳಿಂದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ವರೆಗಿನ ಅಧಿಕಾರಿಗಳು ತಾಲೂಕಿನ ಕೊನೇ ಹಳ್ಳಿವರೆಗೆ ಹೋಗಿ ಸಮಸ್ಯೆ ಆಲಿಸಿ, ಪರಿಹಾರ ನೀಡಬೇಕು. ಎಲ್ಲರೂ ಒಂದೇ ಹಳ್ಳಿಗೆ ಭೇಟಿ ನೀಡದೆ, ಬೇರೆ ಹಳ್ಳಿಗಳಿಗೆ ಭೇಟಿ ನೀಡಬೇಕು. ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಪ್ರತಿ 3ನೇ ಸೋಮವಾರ ತಪ್ಪದೇ ಭಿಪ್ಪ್ಲೃಪ್ಲಿಪ್ಲಿಧೀಜಿಚಾಚ್ಲೃಟೀಚಿ ಇ-ಮೇಲ್ ಮೂಲಕ ಸರಕಾರಕ್ಕೆ ವರದಿ ಕಳುಹಿಸಬೇಕು,'' ಎಂದು ಸೂಚಿಸಿದ್ದಾರೆ.

### ಡಾಂಬರು ಇಬ್ಬರ ಕಣ್ಣುಗಳಿಗೆ ಹಾನಿ

**ಕೊರಟಗೆರೆ:** ರಸ್ತೆ ಕಾಮಗಾರಿ ವೇಳೆ ಡಾಂಬರು ಸಿಡಿದು ಮಹಿಳೆ ಹಾಗೂ ಯುವತಿಯೊಬ್ಬರ ಕಣ್ಣಿಗೆ ಗಾಯವಾದ ಘಟನೆ ಭಾನುವಾರ ನಡೆದಿದೆ. ಪಟ್ಟಣದ ಎಸ್‌ಬಿಐ ಬ್ಯಾಂಕಿನ ಮುಖ್ಯ ರಸ್ತೆಯಲ್ಲಿ ಟ್ರ್ಯಾಕ್ಟರ್‌ನಿಂದ ಡಾಂಬರು ಕೆಳಗೆ ಇಳಿಸುವಾಗ ದುರ್ಘಟನೆ ನಡೆದಿದೆ. ಗೊರವನಹಳ್ಳಿ ಗ್ರಾಮದ ಲಕ್ಷ್ಮಮ್ಮ ಮತ್ತು ಲಕ್ಷ್ಮಿ ಗಾಯಗೊಂಡವರು. ಇನ್ನೂ ನಾಲ್ಕು ಜನರ ಮೇಲೆ ಡಾಂಬರು ಬಿದ್ದು ಸಣ್ಣ ಪ್ರಮಾಣದಲ್ಲಿ ಗಾಯಗಳಾಗಿವೆ. ಕಣ್ಣಿಗೆ ಗಾಯಗೊಂಡ ಇಬ್ಬರಿಗೆ ಕೊರಟಗೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿಗೆ ರವಾನಿಸಲಾಗಿದೆ. ಟ್ರ್ಯಾಕ್ಟರ್‌ನಲ್ಲಿನ ಡಾಂಬರನ್ನು ಬಿಸಿ ಮಾಡುವುದಕ್ಕಾಗಿ ಕೆಳಗೆ ಇಳಿಸುತ್ತಿದ್ದ ವೇಳೆ ಗುತ್ತಿಗೆದಾರ ಮುಂಜಾಗ್ರತಾ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ ಅದು ಉರುಳಿ ಬಿದ್ದಿದೆ. ಸ್ಥಳಕ್ಕೆ ತಹಸೀಲ್ದಾರ್ ನಾಹೀದಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲೈಂಗಿಕ ಅಲ್ಪಸಂಖ್ಯಾತರಿಗೂ ಅವಕಾಶ | 21ರಂದು ಸಮಾಜದ ವಿವಿಧ ಸ್ತರದ ಜನರಿಂದ ಯೋಗಾಸನ ಪ್ರದರ್ಶನಕ್ಕೆ ವ್ಯವಸ್ಥೆ

# ದಿವ್ಯಾಂಗರಿಗೂ ಮೋದಿ ಜತೆ ಯೋಗ ಸುಯೋಗ

■ ನಾಗರಾಜ್ ನವೀಮನೆ ಮೈಸೂರು
nagaraj.navimane@timesgroup.com

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ 'ಸಾಂಸ್ಕೃತಿಕ ನಗರಿ' ಮೈಸೂರಿನಲ್ಲಿ ಜೂ.21ರಂದು ನಡೆಯುವ ಯೋಗ ದಿನಾಚರಣೆಯಲ್ಲಿ ಈ ಬಾರಿ ಯೋಗಪಟುಗಳ ಜತೆ ಸಮಾಜದ ನಾನಾ ಸ್ತರದ ಜನರೂ ಭಾಗವಹಿಸಲಿದ್ದಾರೆ. ದಿವ್ಯಾಂಗರು (ವಿಶೇಷ ಚೇತನರು), ಲೈಂಗಿಕ ಅಲ್ಪಸಂಖ್ಯಾತರು, ಪೌರಕಾರ್ಮಿಕರು ಹಾಗೂ ಆಟೊ ಚಾಲಕರು ಮೋದಿ ಅವರೊಂದಿಗೆ ಯೋಗಾಸನ ಪ್ರದರ್ಶನ ಮಾಡಲಿದ್ದಾರೆ.

ವಿವಿಧ ವರ್ಗಗಳ ಜನರಿಗೆ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಕೇಂದ್ರ ಆಯುಷ್ ಇಲಾಖೆ ಅವಕಾಶ ಮಾಡಿಕೊಟ್ಟಿದೆ. ಇದಕ್ಕಾಗಿ ತರಬೇತಿಯನ್ನು ಜಿಲ್ಲಾ ಆಯುಷ್ ಇಲಾಖೆ ಹಾಗೂ ಯೋಗ ಫೆಡರೇಷನ್ ಆಫ್ ಮೈಸೂರು ನೀಡಲು ತೀರ್ಮಾನಿಸಿದೆ. ಜೂ.10ರಿಂದ ಪೌರಕಾರ್ಮಿಕರು, ತೃತೀಯಲಿಂಗಿಗಳು ಹಾಗೂ ವಿಶೇಷಚೇತನರು ತಾವು ಇದ್ದ ಸ್ಥಳದಲ್ಲೇ ಯೋಗ ತರಬೇತಿ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಆ ಮೂಲಕ ಎಲ್ಲರನ್ನೂ ಒಳಗೊಳ್ಳಬೇಕೆಂಬ ಮೋದಿ ಅವರ ಆಶಯ ಸಾಕಾರಗೊಳ್ಳಲಿದೆ.


### 10 ದಿನದ ತರಬೇತಿ

ಬಹುತೇಕರಿಗೆ ಮೋದಿ ಜತೆ ಯೋಗಾಭ್ಯಾಸ ಮಾಡಬೇಕೆಂಬ ಆಸೆ ಇರುತ್ತದೆ. ಪ್ರಧಾನಿ ನೀಡುವ ಯೋಗ ಸಂದೇಶವನ್ನು ಪ್ರತ್ಯಕ್ಷವಾಗಿ ಕಾಣಬೇಕೆಂಬ ಹಂಬಲವಿರುತ್ತದೆ. ಇದನ್ನು ಮನಗಂಡು ಸಮಾಜದ ವಿವಿಧ ಸ್ತರಗಳ ಜನರಿಗೆ ತರಬೇತಿ ನೀಡಲು ಜಿಲ್ಲಾಡಳಿತ ನಿರ್ಧರಿಸಿದೆ. ಇದಕ್ಕಾಗಿ ನೋಂದಣಿ ಪ್ರಕ್ರಿಯೆ ಇನ್ನೆರಡು ದಿನದಲ್ಲಿ ಶುರುವಾಗಲಿದೆ. ವಿಶೇಷಚೇತನರು, ತೃತೀಯಲಿಂಗಿಗಳು, ಪೌರ ಕಾರ್ಮಿಕರು ಎಲ್ಲಾ ಜಾಗಕ್ಕೂ ಬರಲು ಸಾಧ್ಯವಿಲ್ಲ. ಹಾಗಾಗಿ ಆಸಕ್ತರು ವಾಸಿಸುವ ಜಾಗದ ಆಸುಪಾಸಿನಲ್ಲೇ ಇರುವ ಪಾರ್ಕ್, ಶಾಲೆಗಳಲ್ಲಿ ತರಬೇತಿ ನೀಡಲು ಯೋಗ ಫೆಡರೇಷನ್ ಸಜ್ಜಾಗಿದೆ.

''ಯೋಗ ಎಂದರೆ ಸಾಮರಸ್ಯ, ಒಗ್ಗಟ್ಟು, ಯೋಗದ ಮುಂದೆ ಯಾರೂ ದೊಡ್ಡವರಿಲ್ಲ, ಯಾರೂ ಚಿಕ್ಕವರಿಲ್ಲ. ಹಾಗಾಗಿ ಎಲ್ಲರನ್ನೂ ಒಂದುಗೂಡಿಸಿ ಯೋಗ ದಿನಾಚರಣೆ ಮಾಡಬೇಕೆಂಬುದು ಕೇಂದ್ರ ಆಯುಷ್ ಇಲಾಖೆ ಉದ್ದೇಶ. ಮೋದಿ ಅವರೊಂದಿಗೆ ಯೋಗ ಮಾಡಬೇಕಾದರೆ ತರಬೇತಿ ಮುಖ್ಯ. ಹಾಗಾಗಿ ಆಯುಷ್ ಇಲಾಖೆ ಗುರುತಿಸುವ ಸಮಾಜದ ವಿವಿಧ ವರ್ಗದ ಜನರಿಗೆ ತರಬೇತಿ ನೀಡಲು ನಾವು ಸಿದ್ಧರಿದ್ದೇವೆ. ಎಲ್ಲಾ ಸ್ತರದ 1 ಸಾವಿರ ಜನ ಯೋಗ ದಿನದ ಪ್ರಮುಖ ಆಕರ್ಷಣೆ ಆಗಲಿದ್ದಾರೆ,'' ಎಂದು ಯೋಗ ಫೆಡರೇಷನ್ ಆಫ್ ಮೈಸೂರಿನ ಅಧ್ಯಕ್ಷ ಶ್ರೀಹರಿ ವಿಜಯ ಕರ್ನಾಟಕಕ್ಕೆ ತಿಳಿಸಿದ್ದಾರೆ.

### 1200 ತರಬೇತುದಾರರು

ಶಾಲಾ ಮಕ್ಕಳಿಂದ ಹಿಡಿದು ಕಾಲೇಜು ವಿದ್ಯಾರ್ಥಿಗಳು, ರೈಲ್ವೆ, ಸಿಐಎಸ್‌ಎಫ್, ಡಿಎಆರ್, ಕೆಎಸ್‌ಆರ್‌ಪಿ, ಬಿಇಎಂಎಲ್, ಇನ್ಫೋಸಿಸ್, ಸರಕಾರಿ ಅಧಿಕಾರಿಗಳು, ವೈದ್ಯರ ಸಂಘ, ವಕೀಲರ ಸಂಘ, ಎಂಜಿನಿಯರ್‌ಗಳಿಗೂ ಅಭ್ಯಾಸ ನೀಡಲು ಜಿಲ್ಲಾ ಆಯುಷ್ ಇಲಾಖೆ ಚಿಂತನೆ ನಡೆಸಿದೆ. ಸುಮಾರು 1200 ತರಬೇತುದಾರರು ಯೋಗ ತರಬೇತಿ ನೀಡಲಿದ್ದಾರೆ.



ಮೈಸೂರು ಅರಮನೆ ಆವರಣದಲ್ಲಿ ಸಾವಿರಾರು ಯೋಗಾಸಕ್ತರಿಂದ ಭಾನುವಾರ ಯೋಗ ತಾಲೀಮು ಕಾರ್ಯಕ್ರಮ ನಡೆಯಿತು.

> ನರೇಂದ್ರ ಮೋದಿ ಅವರು ಭಾಗವಹಿಸುವ ಯೋಗ ದಿನಾಚರಣೆಯಲ್ಲಿ ವಿಶೇಷಚೇತನರು, ಲೈಂಗಿಕ ಅಲ್ಪಸಂಖ್ಯಾತರು, ಪೌರಕಾರ್ಮಿಕರು, ಆಟೋ ಚಾಲಕರೂ ಯೋಗ ಪ್ರದರ್ಶನ ನೀಡಲಿದ್ದಾರೆ. ಸಮಾಜದ ಎಲ್ಲಾ ವರ್ಗದ ಜನರನ್ನು ಯೋಗದಿನದಂದು ಒಂದುಗೂಡಿಸಬೇಕೆಂಬ ಆಶಯದೊಂದಿಗೆ ಕೇಂದ್ರ ಆಯುಷ್ ಇಲಾಖೆ ಈ ಕ್ರಮ ಕೈಗೊಂಡಿದೆ.
>
> **- ಎಸ್.ಎ. ರಾಮದಾಸ್** ಶಾಸಕ

> ಬೆಳಗಿನ ಜಾವ ಯೋಗ ಕಾರ್ಯಕ್ರಮ ಇರುವುದರಿಂದ ಸುಮಾರು ಮೂರು ಗಂಟೆ ಅರಮನೆ ಒಳಗೆ ಇರಬೇಕು. ಹಾಗಾಗಿ, ಆಸಕ್ತ ಹಾಗೂ ಯೋಗದ ಬಗ್ಗೆ ತಿಳುವಳಿಕೆ ಇರುವ ವಿವಿಧ ಸ್ತರದ ಜನರನ್ನು ಆಯ್ಕೆ ಮಾಡಲು ತೀರ್ಮಾನಿಸಿದ್ದೇವೆ.
>
> **- ಡಾ.ಬಿ.ಎಸ್. ಸೀತಾಲಕ್ಷ್ಮಿ** ಜಿಲ್ಲಾ ಅಧಿಕಾರಿ, ಆಯುಷ್ ಇಲಾಖೆ

## ಯೋಗ ದಿನದ ಸಂಖ್ಯಾಬಲ 12ರ ಬಳಿಕ ನಿರ್ಧಾರ

**ಮೈಸೂರು:** ಜೂನ್ 21ರ ವಿಶ್ವ ಯೋಗ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುವ ಹಿನ್ನೆಲೆ ಅರಮನೆ ಆವರಣದಲ್ಲಿ ಸಾವಿರಾರು ಯೋಗಾಸಕ್ತರಿಂದ ಯೋಗ ತಾಲೀಮು ಕಾರ್ಯಕ್ರಮಕ್ಕೆ ಸಚಿವ ಎಸ್.ಟಿ. ಸೋಮಶೇಖರ್ ಚಾಲನೆ ನೀಡಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ''ಪ್ರಧಾನಿ ಮೈಸೂರಿಗೆ ಆಗಮಿಸುತ್ತಿರುವುದರಿಂದ ಜೂನ್ 5 ಮತ್ತು 12ರಂದು ಯೋಗ ತಾಲೀಮು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಯೋಗದಲ್ಲಿ ಪಾಲ್ಗೊಳ್ಳಲು ಎಷ್ಟು ಮಂದಿಗೆ ಅವಕಾಶ ನೀಡಬೇಕು ಎಂಬುದರ ಬಗ್ಗೆ ಜೂನ್ 12ರ ನಂತರ ತೀರ್ಮಾನ ಮಾಡಲಾಗುವುದು,'' ಎಂದರು.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಡಾ.ಭಾಷ್ಯಂ ಸ್ವಾಮೀಜಿ, ಸಚಿವ ಎಸ್.ಟಿ.ಸೋಮಶೇಖರ್ ಯೋಗ ತಾಲೀಮು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

''ಸರಕಾರಿ, ಖಾಸಗಿ, ವಿಶೇಷಚೇತನರು ಸೇರಿದಂತೆ ಯೋಗ ಮಾಡುವ ಎಲ್ಲರಿಗೂ ಅವಕಾಶ ನೀಡಲಾಗುವುದು. ಕಾರ್ಯಕ್ರಮಕ್ಕೆ ನೋಂದಣಿ ಆರಂಭವಾಗಿಲ್ಲ, ನೋಂದಣಿ ಸಂಬಂಧ ನಿರ್ದೇಶಕರನ್ನು ನೇಮಿಸಲಾಗಿದೆ. ಮುಖ್ಯಮಂತ್ರಿಗಳು ಜೂನ್ 8ಕ್ಕೆ ಮೈಸೂರಿಗೆ ಆಗಮಿಸುತ್ತಿದ್ದಾರೆ. ಅಂದು ಕಾರ್ಯಕ್ರಮದ ರೂಪರೇಷೆ ಅಂತಿಮವಾಗಲಿದೆ,'' ಎಂದು ಹೇಳಿದರು.

''ರಾಜ್ಯ ಸರಕಾರ ನೌಕರರು 12 ಸಾವಿರ, ಕೇಂದ್ರ ಸರಕಾರದಿಂದ ಮೂರು ಸಾವಿರ ಸೇರಿ ಒಟ್ಟು 15 ಸಾವಿರ ನೋಂದಣಿ ಆಗಲಿದೆ ಎಂಬ ಮಾಹಿತಿ ಇದೆ. ಆದರೆ, ಸದ್ಯಕ್ಕೆ ಯಾವುದೂ ಅಂತಿಮವಾಗಿಲ್ಲ. ಮುಖ್ಯಮಂತ್ರಿಗಳು ಜೂ.8ಕ್ಕೆ ಬರಲಿದ್ದು ಅಂದು ಸ್ಪಷ್ಟ ಚಿತ್ರಣ ಸಿಗಲಿದೆ,'' ಎಂದು ಮಾಹಿತಿ ನೀಡಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಡಾ.ಭಾಷ್ಯಂ ಸ್ವಾಮೀಜಿ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಮೇಯರ್ ಸುನಂದಾ ಪಾಲನೇತ್ರ, ಶ್ರೀಹರಿ ದ್ವಾರಕಾನಾಥ್, ಯೋಗ ಫೆಡರೇಷನ್‌ನ ಮುಖ್ಯಸ್ಥರು ಭಾಗವಹಿಸಿದ್ದರು.

## ಸಂವಿಧಾನವೇ ಬಿಜೆಪಿ ಧರ್ಮ

» ಮೊದಲ ಪುಟದಿಂದ

ಶಿಸ್ತು ಕ್ರಮದ ಬೆನ್ನಲ್ಲೇ ನೂಪುರ್ ಶರ್ಮಾ ತಮ್ಮ ಹೇಳಿಕೆ ಹಿಂಪಡೆದಿರುವುದಾಗಿ ಘೋಷಿಸಿದ್ದಾರೆ. ''ಹಿಂದೂ ಧರ್ಮ ಹಾಗೂ ದೇವರುಗಳನ್ನು ನಿರಂತರವಾಗಿ ಅವಮಾನಿಸುವುದನ್ನು ಸಹಿಸಿಕೊಳ್ಳಲಾಗುವುದಿಲ್ಲ, ಟಿವಿ ಚರ್ಚೆ ಕಾರ್ಯಕ್ರಮದಲ್ಲಿ ಇದಕ್ಕೆ ಪ್ರತಿಯಾಗಿ ನೀಡಿದ ಹೇಳಿಕೆ ಅದಾಗಿತ್ತು. ಯಾವುದೇ ಧರ್ಮವನ್ನು ಅವಹೇಳನ ಮಾಡುವ ಉದ್ದೇಶ ನನ್ನದಾಗಿರಲಿಲ್ಲ, ನನ್ನ ಹೇಳಿಕೆ ಹಿಂಪಡೆಯುತ್ತೇನೆ ಮತ್ತು ಯಾವುದೇ ಧರ್ಮದವರಿಗೆ ನೋವಾಗಿದ್ದರೆ ಬೇಷರತ್ ಆಗಿ ಕ್ಷಮೆಯಾಚಿಸುತ್ತೇನೆ,'' ಎಂದಿದ್ದಾರೆ.

**ಎಸ್‌ಐಟಿ ರಚನೆ, ಬಂಧಿತರ ಸಂಖ್ಯೆ 29ಕ್ಕೆ ಏರಿಕೆ**

ಕಾನ್ಪುರ ಕೋಮುಗಲಭೆಗೆ ಸಂಬಂಧಿಸಿದಂತೆ ಉತ್ತರ ಪ್ರದೇಶ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ. ಈ ಮಧ್ಯೆ ಘಟನೆ ಸಂಬಂಧ ಭಾನುವಾರ ಮತ್ತೆ ನಾಲ್ವರನ್ನು ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ 29ಕ್ಕೆ ಏರಿದೆ. ಸ್ಥಳೀಯ ನ್ಯಾಯಾಲಯ ಅವರನ್ನು 14 ದಿನಗಳ ನ್ಯಾಯಾಂಗ ವಶಕ್ಕೆ ಒಪ್ಪಿಸಿದೆ. ಗಲಭೆಯ ಮಾಸ್ಟರ್‌ಮೈಂಡ್ ಎನ್ನಲಾಗುತ್ತಿರುವ ಮೌಲಾನಾ ಮೊಹಮ್ಮದ್ ಜುಹಾರ್ ಅಲಿ ಫ್ಯಾನ್ಸ್ ಅಸೋಸಿಯೇಷನ್ ಮುಖ್ಯಸ್ಥ ಜಫರ್ ಹಯಾತ್‌ನನ್ನು ಶನಿವಾರವೇ ಬಂಧಿಸಲಾಗಿದೆ.

**ಎಫ್‌ಐಆರ್ ದಾಖಲು:** ಅಬ್ದುಲ್ ಗಫೂರ್ ಪಠಾಣ್ ಎಂಬುವರು ನೀಡಿದ ದೂರಿನ ಮೇರೆಗೆ ನೂಪುರ್ ಶರ್ಮಾ ವಿರುದ್ಧ ಪುಣೆಯ ಕೊಂಡ್ವಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಮುಂಬಯಿನಲ್ಲಿ ಅವರ ವಿರುದ್ಧ ರಾಜಾ ಅಕಾಡೆಮಿ ಸಂಸ್ಥೆ ನಗರ ಪೊಲೀಸ್ ಕಮಿಷನರ್ ಅವರಿಗೆ ದೂರು ಕೊಟ್ಟಿದೆ.

## 7 ಸಾವಿರ ಶಾಲಾ ಕೊಠಡಿ ನಿರ್ಮಾಣ: ನಾಗೇಶ್

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ 7 ಸಾವಿರ ಶಾಲಾ ೬- ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ ಶಿಥ್ಸ್-ಕೊಠಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಶಿಥಿಲಗೊಂಡಿರುವ ಕೊಠಡಿಗಳನ್ನು ಆದ್ಯತೆ ಮೇರೆಗೆ ದುರಸ್ತಿ, ಮರು ನಿರ್ಮಾಣ ಕೈಗೊಳ್ಳಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ. ಸಿ. ನಾಗೇಶ್ ತಿಳಿಸಿದರು.

'ಪಿ. ಸೋಮಣ್ಣ ಪ್ರತಿಷ್ಠಾನ'ದ ವತಿಯಿಂದ ವಿಜಯ ನಗರದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ವಿಶ್ವ ಪರಿಸರ ದಿನ' ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿ ಅವರು ಮಾತನಾಡಿದರು.

''ರಾಜ್ಯದ ಸರಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಳ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಸುಧಾರಣೆಗೆ ಶಿಕ್ಷಣ ಇಲಾಖೆ ಒತ್ತು ನೀಡುತ್ತಿದೆ. 15 ಸಾವಿರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ಸೇವೆ ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಹೀಗಾಗಿ, ಈ ವರ್ಷ ಶಿಕ್ಷಕರ ಕೊರತೆ ಎದುರಾಗುವುದಿಲ್ಲ'' ಎಂದು ಸಚಿವರು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಅ. ದೇವೇಗೌಡ ಹಾಗೂ ವಿ. ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.



ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.

### ಈ ವರ್ಷದಿಂದಲೇ ಅಂಗನವಾಡಿಗಳಲ್ಲಿ ಎನ್‌ಇಪಿ

''ಈ ಶೈಕ್ಷಣಿಕ ವರ್ಷದಿಂದಲೇ ಅಂಗನವಾಡಿಗಳಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ-2020' ಪಠ್ಯಕ್ರಮ ಆಧಾರದ ಶಿಕ್ಷಣ ನೀಡುವ ಗುರಿ ಹೊಂದಲಾಗಿದೆ. ಹಂತಹಂತವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ-2020' ಅನುಷ್ಠಾನಗೊಳಿಸಲಾಗುತ್ತದೆ. ಅದಕ್ಕಾಗಿ ಕೈಗೊಂಡಿರುವ ಸಿದ್ಧತೆಗಳಿಗೆ ಕೇಂದ್ರ ಶಿಕ್ಷಣ ಇಲಾಖೆಯಿಂದ ಮೆಚ್ಚುಗೆ ವ್ಯಕ್ತವಾಗಿದೆ. ರಾಜ್ಯದಲ್ಲಿ ಎನ್‌ಇಪಿ ಅನುಷ್ಠಾನಕ್ಕಾಗಿ ಪೊಸಿಷನ್ ಪೇಪರ್‌ಗಳನ್ನು ಸಿದ್ಧಪಡಿಸಿ, ಕೇಂದ್ರ ಶಿಕ್ಷಣ ಇಲಾಖೆಗೆ ಸಲ್ಲಿಸಲಾಗಿದೆ,'' ಎಂದು ಬಿ.ಸಿ. ನಾಗೇಶ್ ಹೇಳಿದರು.

## ಎಲ್ಲಿ ಹೋದರು 27 ಸಾವಿರ ಮಕ್ಕಳು?

» ಮೊದಲ ಪುಟದಿಂದ

ಪ್ರಸಕ್ತ ಸಾಲಿನಲ್ಲಿ ಶಾಲೆಗಳು ಪೂರ್ಣ ಪ್ರಮಾಣದಲ್ಲಿ ಆರಂಭಗೊಂಡಿದ್ದು, ಶೈಕ್ಷಣಿಕ ಚಟುವಟಿಕೆಗಳು ಗರಿಗೆದರಿವೆ. ಶಾಲೆಗಳತ್ತ ವಿದ್ಯಾರ್ಥಿಗಳು ಉತ್ಸಾಹದಿಂದ ಹೆಜ್ಜೆಹಾಕುತ್ತಿದ್ದಾರೆ. ರಾಜ್ಯದ ನಾನಾ ಜಿಲ್ಲೆಗಳಲ್ಲಿ ಶಾಲೆಗಳಿಂದ ದೂರ ಉಳಿದ 6-16 ವರ್ಷದೊಳಗಿನ ಮಕ್ಕಳ ಸಂಖ್ಯೆ ಹೆಚ್ಚಿರುವುದು ಇಲಾಖೆಯ ಅಧಿಕಾರಿಗಳಿಗೆ ತಲೆನೋವು ತಂದಿದೆ.

**19416 ಮಕ್ಕಳ ಪತ್ತೆ:** ಶಾಲೆಯಿಂದ ದೂರ ಉಳಿದ ಒಟ್ಟು 46,592 ಮಕ್ಕಳಲ್ಲಿ ಈಗಾಗಲೇ 19,416 ಮಕ್ಕಳನ್ನು ಪತ್ತೆ ಹಚ್ಚಲಾಗಿದೆ. ಇದರಲ್ಲಿ 1045 ಮಕ್ಕಳು ವಲಸೆ ತೆರಳಿದ್ದು, 38 ಪ್ರಕರಣಗಳಲ್ಲಿ ಬಾಲ್ಯವಿವಾಹವಾಗಿದೆ. 1245 ಮಕ್ಕಳು ಕುಟುಂಬ ನಿರ್ವಹಣೆಯಲ್ಲಿ ತೊಡಗಿದ್ದು, 380 ಅನಾರೋಗ್ಯ ಪೀಡಿತರಾಗಿದ್ದಾರೆ. 2213 ಮಕ್ಕಳನ್ನು ಪೋಷಕರೇ ಶಾಲೆಗಳಿಗೆ ಕಳುಹಿಸಲು ಆಸಕ್ತಿ ತೋರದಿರುವುದು, 53 ಮಕ್ಕಳು ನಾನಾ ಕಾರಣಗಳಿಂದ ಮೃತಪಟ್ಟಿದ್ದಾರೆ. 14,154 ಮಕ್ಕಳನ್ನು ಶಾಲೆಗೆ ಪುನಃ ಕರೆತರಲಾಗಿದೆ. ಇವೆಲ್ಲವನ್ನು ಹೊರತುಪಡಿಸಿ 27,176 ಮಕ್ಕಳ ಪತ್ತೆಗಾಗಿ ಶಿಕ್ಷಣ ಇಲಾಖೆ ಮುಂದಾಗಿದೆ. ಶಿಕ್ಷಕರು ಮನೆ ಮನೆಗೆ ಭೇಟಿ ನೀಡುವುದು, ಮಕ್ಕಳಿಂದ 'ಪ್ರಭಾತ್ ಪೇರಿ' ನಡೆಸಿ ಜಾಗೃತಿ ಮುಂತಾದ ಕ್ರಮ ಕೈಗೊಳ್ಳಲಾಗಿದೆ. ಶಾಲೆಯಿಂದ ದೂರ ಉಳಿದ ಮಕ್ಕಳನ್ನು ಶಾಲೆಯಿಂದ ಪತ್ತೆಹಚ್ಚಿ ಕರೆತರಲು ಶಿಕ್ಷಕರು ಹರಸಾಹಸ ನಡೆಸಿದ್ದಾರೆ.

**ಸೌಲಭ್ಯವಿದ್ದರೂ ಬಾರದ ಮಕ್ಕಳು:** ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದೊಂದಿಗೆ ನಾನಾ ಸೌಲಭ್ಯ ಕಲ್ಪಿಸಲಾಗಿದೆ. ಬಿಸಿಯೂಟ, ಅಪೌಷ್ಟಿಕ ನಿವಾರಣೆಗೆ ಮೊಟ್ಟೆ, ಬಾಳೆಹಣ್ಣು, ಉಚಿತ ಪುಸ್ತಕ, ಸಮವಸ್ತ್ರ ಸೇರಿ ನಾನಾ ಸೌಕರ್ಯ ಒದಗಿಸಲಾಗುತ್ತಿದೆ. ಆದರೂ ಶಾಲೆಗಳಿಂದ ದೂರ ಉಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದು ಆತಂಕ ಮೂಡಿಸಿದೆ. ಬಡತನ, ಬಾಲ್ಯದಲ್ಲೇ ಕುಟುಂಬ ನಿರ್ವಹಣೆ ಜವಾಬ್ದಾರಿ ಸೇರಿ ಇತರ ಕಾರಣಗಳು ಮಕ್ಕಳಿಗೆ ಶಿಕ್ಷಣದ ಮೇಲಿನ ಆಸಕ್ತಿ ಕುಗ್ಗಿಸಿವೆ. ವಿಶೇಷವಾಗಿ ಕಳೆದ ಎರಡು ವರ್ಷಗಳಿಂದ ಕೊರೊನಾ ಸೋಂಕಿನಿಂದ ಶೈಕ್ಷಣಿಕ ಚಟುವಟಿಕೆಗಳು ನಡೆಯದ ಹಿನ್ನೆಲೆ ಮಕ್ಕಳ ಮನಸ್ಥಿತಿಯಲ್ಲಿ ಗಂಭೀರ ಬದಲಾವಣೆಯಾಗಿರುವುದೂ ಹಲವು ಮಕ್ಕಳು, ಶಾಲೆಗಳಿಂದ ದೂರ ಉಳಿಯುವಂತಾಗಿದೆ.

> ಶಿಕ್ಷಣ ಇಲಾಖೆಯು ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸಿ, ಮಕ್ಕಳನ್ನು ಮರಳಿ ಶಾಲೆಗೆ ಕರೆತರಬೇಕು. ಶಾಲಾಡಳಿತ ಪ್ರಾಧಿಕಾರ ನಿರ್ವಹಿಸುವ ಅಧಿಕಾರಿಗಳು ಕಾಳಜಿ ಮತ್ತು ಶ್ರಮ ವಹಿಸುವ ಅಗತ್ಯ ಹೆಚ್ಚಿದೆ. ಬಾಲ ಕಾರ್ಮಿಕ ನೀತಿಗಳು ಸಹ ಕಠಿಣವಾಗಬೇಕಿದೆ.
>
> **-ನಾಗಸಿಂಹ ಜಿ.ರಾವ್**
> ಸಂಚಾಲಕ, ಮಕ್ಕಳ ಹಕ್ಕುಗಳ ಟ್ರಸ್ಟ್



| ಶಾಲೆ ವಂಚಿತರು: ಎಲ್ಲಿ, | ಎಷ್ಟು? |
|---|---|
| 1. ಬಬಿಎಂಪಿ ವ್ಯಾಪ್ತಿ | 8, 260 |
| 2. ಬೀದರ್ | 3,043 |
| 3. ಕಲಬುರಗಿ | 2,660 |
| 4. ರಾಯಚೂರು | 2,389 |
| 5. ಧಾರವಾಡ | 2,125 |
| 6. ಚಿತ್ರದುರ್ಗ | 2,084 |
| 7. ಯಾದಗಿರಿ | 2,016 |
| 8. ಆನಂದ ಬಳ್ಳಾರಿ | 1,821 |
| 9. ಬೆಳಗಾವಿ | 1,793 |
| 10. ಶಿವಮೊಗ್ಗ | 1,705 |
| 11. ವಿಜಯಪುರ | 1,648 |
| 12. ಕೊಪ್ಪಳ | 1,598 |
| 13. ಹಾವೇರಿ | 1,419 |
| 14. ದಾವಣಗೆರೆ | 1,219 |
| 15. ತುಮಕೂರು | 1,201 |
| 16. ಬಾಗಲಕೋಟೆ | 1,184 |
| 17. ಮೈಸೂರು | 1,131 |
| 18. ಮಂಡ್ಯ | 1,097 |
| 19. ಉತ್ತರಕನ್ನಡ | 1,024 |
| 20. ಹಾಸನ | 956 |
| 21. ಚಿಕ್ಕಮಗಳೂರು | 797 |
| 22. ಚಾಮರಾಜನಗರ | 753 |
| 23. ಗದಗ | 743 |
| 24. ರಾಮನಗರ | 679 |
| 25. ಬೆಂಗಳೂರು | 624 |
| 26. ಬೆಂಗಳೂರು ಗ್ರಾಮೀಣ | 597 |
| 27. ಚಿಕ್ಕಬಳ್ಳಾಪುರ | 496 |
| 28. ಕೋಲಾರ | 450 |
| 29. ಕೊಡಗು | 437 |
| 30. ದಕ್ಷಿಣ ಕನ್ನಡ | 375 |
| 31. ಉಡುಪಿ | 277 |



ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದ ಅಖಿಲ ಭಾರತ ಆಹ್ವಾನಿತ ಪುರುಷರ ಹೊನಲು ಬೆಳಕಿನ ಖೊಖೊ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ನವಿ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ವಿರುದ್ಧ ಗೆಲುವು ಸಾಧಿಸಿ ಪ್ರಶಸ್ತಿ ಪಡೆದ ವೆಸ್ಟರ್ನ್ ರೈಲ್ವೆ ತಂಡದ ಸದಸ್ಯರ ಸಂಭ್ರಮ.

## ವೆಸ್ಟರ್ನ್ ರೈಲ್ವೆ ಚಾಂಪಿಯನ್

**ಅಖಿಲ ಭಾರತ ಆಹ್ವಾನಿತ ಪುರುಷರ ಹೊನಲು ಬೆಳಕಿನ ಖೊಖೊ ಪಂದ್ಯಾವಳಿ**

**ನವಿ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ರನ್ನರ್‌ಅಪ್**

■ ವಿಕ ಸುದ್ದಿಲೋಕ ಪಾಂಡವಪುರ (ಮಂಡ್ಯ)

ಕ್ಯಾತನಹಳ್ಳಿ ಗ್ರಾಮದಲ್ಲಿ ರೈತ ನಾಯಕ ದಿ.ಕೆ.ಎಸ್.ಪುಟ್ಟಣ್ಣಯ್ಯನವರ ಸ್ಮರಣಾರ್ಥವಾಗಿ ನಡೆದ ಅಖಿಲ ಭಾರತ ಆಹ್ವಾನಿತ ಪುರುಷರ ಹೊನಲು ಬೆಳಕಿನ ಖೊಖೊ ಪಂದ್ಯಾವಳಿಯಲ್ಲಿ ವೆಸ್ಟರ್ನ್ ರೈಲ್ವೆ ತಂಡ ಚಾಂಪಿಯನ್‌ಪಟ್ಟ ಗಳಿಸಿದೆ. ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ನವಿ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ತಂಡವನ್ನು 16-12 ಅಂಕಗಳಿಂದ ಸೋಲಿಸಿದ ವೆಸ್ಟರ್ನ್ ರೈಲ್ವೆ ತಂಡ ಒಂದು ಲಕ್ಷ ರೂ. ಬಹುಮಾನ ತನ್ನದಾಗಿಸಿಕೊಂಡಿತು.

ಭಾರತೀಯ ಖೊಖೊ ಫೆಡರೇಷನ್, ಕರ್ನಾಟಕ ರಾಜ್ಯ ಖೊಖೊ ಅಸೋಸಿಯೇಷನ್, ಮಂಡ್ಯ ಜಿಲ್ಲಾ ಖೊಖೊ ಸಂಸ್ಥೆ ಕ್ಯಾತನಹಳ್ಳಿ ಕ್ರೀಡಾ ಒಕ್ಕೂಟ ಕ್ಯಾತನಹಳ್ಳಿ ಗ್ರಾಮದ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ನಾಲ್ಕು ದಿನಗಳ ಕಾಲ ಖೊಖೊ ಪಂದ್ಯಾವಳಿಯ ನಡೆಯಿತು. ರನ್ನರ್‌ಅಪ್ ನವಿ ಮುಂಬಯಿ ತಂಡ 50 ಸಾವಿರ ರೂ. ಹಾಗೂ ಟ್ರೋಫಿ ಪಡೆದುಕೊಂಡಿತು. ಪಂದ್ಯದಲ್ಲಿ ತಂಡದ ವೆಸ್ಟರ್ನ್ ರೈಲ್ವೆ ತಂಡದ ಆಟಗಾರ ಮಹೇಶ್‌ಶಿಂಧೆ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.

ಸೆಂಟ್ರಲ್ ರೈಲ್ವೆ ಮುಂಬೈ ತಂಡದ ವಿರುದ್ಧ 20-14 ಅಂಕಗಳಿಂದ ಜಯ ಸಾಧಿಸಿದ ಮಹಾರಾಷ್ಟ್ರ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ತಂಡ ಮೂರನೇ ಸ್ಥಾನ ಪಡೆದು 30 ಸಾವಿರ ರೂ. ಬಹುಮಾನ ಪಡೆಯಿತು. ಸೆಂಟ್ರಲ್ ರೈಲ್ವೆ ಮುಂಬೈ ತಂಡ 20 ಸಾವಿರ ರೂ. ಬಹುಮಾನ ಪಡೆಯಿತು.

## ಐಫಾ ವೇದಿಕೆಯಲ್ಲಿ ಐಶ್ವರ್ಯಾ ರೈ, ಸುನೀಲ್ ಶೆಟ್ಟಿ ತುಳುವಿನಲ್ಲಿ ಮಾತು

**ಮಂಗಳೂರು:** ಅಬುಧಾಬಿಯಲ್ಲಿ ನಡೆದ ಐಫಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಲಿವುಡ್ ನಟಿ ಐಶ್ವರ್ಯಾ ರೈ ಹಾಗೂ ನಟ ಸುನೀಲ್ ಶೆಟ್ಟಿ ತಮ್ಮ ಮಾತೃಭಾಷೆ ತುಳುವಿನಲ್ಲಿ ಮಾತನಾಡುವ ಮೂಲಕ ಗಮನ ಸೆಳೆದಿದ್ದಾರೆ.

ಹೊಸ ಪ್ರತಿಭೆಗಳನ್ನು ಗುರುತಿಸಲು 2000ರಲ್ಲಿ ಐಫಾ ಪ್ರಶಸ್ತಿ ಆರಂಭಿಸಲಾಗಿತ್ತು. ನಿರಂತರವಾಗಿ ವಿದೇಶಿ ನೆಲದಲ್ಲಿಯೇ ಈ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಯುತ್ತಿದ್ದು, ಈ ಬಾರಿಯ ಐಫಾ ಅವಾರ್ಡ್ ಅಬುಧಾಬಿಯಲ್ಲಿ ನಡೆಯಿತು.

ಮಾಧ್ಯಮಗಳ ಜತೆ ಮಾತನಾಡಿ ನಡೆಸುವಾಗ ಬಾಲಿವುಡ್ ನಟಿ ಐಶ್ವರ್ಯಾ ರೈ ಅವರು ತುಳುವಿನಲ್ಲಿ ''ಸಮಸ್ಕಾರ ಸೌಖ್ಯ,'' (ನಮಸ್ಕಾರ, ಎಲ್ಲರೂ ಆರಾಮಾ ಇದ್ದೀರಲ್ಲ) ಎಂದು ಉದ್ಗರಿಸಿದರೆ, ಬಾಲಿವುಡ್ ನಟ ಸುನೀಲ್ ಶೆಟ್ಟಿ, ''ಮಸ್ತ್ ಮೋಕೆ ಮಾತೆರೆಗಲಾ,'' (ಎಲ್ಲರಿಗೂ ನನ್ನ ಪ್ರೀತಿ) ಎಂದು ಮಾತನಾಡಿದ್ದಾರೆ. ಈ ರೀತಿ ತುಳುವಿನಲ್ಲಿ ಮಾತನಾಡಲು ಹಠ ಹಿಡಿದವರು ಮಂಗಳೂರು ಮೂಲದ ಆರ್‌ಜೆ ಎರಾಲ್.

ಐಫಾ ಪ್ರಶಸ್ತಿ ಪ್ರದಾನ ಸಮಾರಂಭ ಎಂದರೆ ಅದೊಂದು ರೀತಿಯಲ್ಲಿ ಹಾಲಿವುಡ್ ಮಟ್ಟದ ಕಾರ್ಯಕ್ರಮ. ಇಲ್ಲಿ ಭಾರತದ ಮಾಧ್ಯಮದವರು ಮಾತ್ರವಲ್ಲ, ದೇಶ ವಿದೇಶದ ಮಾಧ್ಯಮದವರು ಹಾಜರಿರುತ್ತಾರೆ.


ಹಿಂದಿ, ಇಂಗ್ಲಿಷ್ ಬಿಟ್ಟರೆ ಉಳಿದ ಭಾಷೆಗಳಲ್ಲಿ ಮಾತನಾಡುವ ಗೋಜಿಗೆ ಹೋಗೋದಿಲ್ಲ. ಆದರೆ ಇವರು ತುಳುವಿನಲ್ಲಿ ಮಾತನಾಡುವ ಧೈರ್ಯ ಮಾಡಿದ್ದಾರೆ ಎಂದು ಅವರು ಮಾಹಿತಿ ಹಂಚಿಕೊಂಡಿದ್ದಾರೆ.






## ರೈತ ಸೌಲಭ್ಯಕ್ಕೆ ಫ್ರೂಟ್ಸ್ ಪೋರ್ಟಲ್ ಕಡ್ಡಾಯ

ಬೆಳೆ ಸಾಲ ಪಡೆಯುವ ಸಮಯ ಇದು. ಈ ಸಲ ಬೆಳೆ ಸಾಲ ಪಡೆಯಲು ''ಫ್ರೂಟ್ಸ್''ನಲ್ಲಿ ನೋಂದಣಿ ಮಾಡಿಕೊಂಡಿರುವುದು ಕಡ್ಡಾಯವಾಗಿದೆ. ಫ್ರೂಟ್ಸ್ ಎಂದರೆ ಫಾರ್ಮರ್ ರಿಜಿಸ್ಟ್ರೇಶನ್ ಆ್ಯಂಡ್ ಯುನಿಫೈಡ್ ಬೆನಿಫಿಶಿಯರಿ ಇನ್ಫರ್ಮೇಷನ್ ಸಿಸ್ಟಮ್. ಇದು ಕೃಷಿ ಇಲಾಖೆಗೆ ಸಂಬಂಧಿಸಿದ, ಕೃಷಿಕರ ಮಾಹಿತಿಗಳನ್ನು ಒಂದೇ ಸೂರಿನಡಿ ಹಿಡಿದಿಟ್ಟುಕೊಳ್ಳುವ ಪೋರ್ಟಲ್. ಇದರ ಮೂಲಕ ಕೃಷಿಕರು ಹಲವು ಪ್ರಯೋಜನ ಪಡೆಯಬಹುದಾಗಿದೆ. ರಾಜ್ಯ ಸರಕಾರದ ಆದೇಶದಂತೆ ಈ ವೆಬ್‌ಪೋರ್ಟಲ್‌ನಲ್ಲಿ ಎಲ್ಲ ತರಹದ ವಾಣಿಜ್ಯ ಬೆಳೆ ಆಹಾರ ಬೆಳೆಯನ್ನು ಒಳಗೊಂಡ ಎಲ್ಲ ವರ್ಗದ ಕೃಷಿಕರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವುದು ಕಡ್ಡಾಯ.







ಮಾಹಿತಿ: ಸ್ವಾತಿ ಬಾಳೆಹಿತ್ತಲು, ಕೊಪ್ಪಳ

### ಏನಿದು 'ಫ್ರೂಟ್ಸ್' ನಂಬರ್?

ಕೃಷಿಕ ತಮ್ಮ ಕೃಷಿ ಜಮೀನಿನ ಮಾಹಿತಿಯನ್ನು ಈ ಪೋರ್ಟಲ್‌ನಲ್ಲಿ ನೋಂದಾಯಿಸಿದಾಗ ಆತನಿಗೆ ಎಫ್‌ಐಡಿ (ಫಾರ್ಮರ್ ಐಡೆಂಟಿಟಿ) ನಂಬರ್ ದೊರೆಯುತ್ತದೆ. ಹೇಗೆ ಒಬ್ಬ ವ್ಯಕ್ತಿಗೆ ಆಧಾರ್ ಗುರುತಿನ ಚೀಟಿಯಾಗಿದೆಯೋ ಅಂತೆಯೇ ಕೃಷಿಕನಿಗೆ ಎಫ್‌ಐಡಿ ಗುರುತಿನ ಚೀಟಿ ಇದ್ದಂತೆ. ಇದು ಕೃಷಿಕನ ಜಾಗದ ವಿವರ ಹಾಗೂ ತಾನು ಬೆಳೆದ ಬೆಳೆಗಳ ವಿವರವನ್ನು ಒಳಗೊಂಡ ವೆಬ್ ಪೋರ್ಟಲ್ ಆಗಿದೆ. ಸರಕಾರದಿಂದ ದೊರೆಯುವ ಕೃಷಿ ಸೌಲಭ್ಯ ಪಡೆದುಕೊಳ್ಳಲು ಕೃಷಿಕ ಇಲ್ಲಿ ಮಾಹಿತಿ ನೋಂದಾಯಿಸಿಕೊಳ್ಳಬೇಕಿದೆ.

### ನೋಂದಣಿ ಹೇಗೆ?

ಸಮೀಪದ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಪಶುಸಂಗೋಪನಾ ಇಲಾಖೆ, ಕಂದಾಯ ಇಲಾಖೆಗಳ ಪೈಕಿ ಯಾವುದಾದರೂ ಒಂದು ಇಲಾಖೆಗೆ ಭೇಟಿ ನೀಡಿ ಕೃಷಿಕನ ಆರ್‌ಟಿಸಿ, ಆಧಾರ್ ಕಾರ್ಡ್, ರಾಷ್ಟ್ರೀಕೃತ ಬ್ಯಾಂಕ್‌ನ ಪಾಸ್‌ಬುಕ್ ಪ್ರತಿ, ಪಾಸ್‌ಪೋರ್ಟ್ ಅಳತೆಯ ಫೋಟೋ, ಮೊಬೈಲ್ ನಂಬರ್ ನೀಡಿದರೆ 24 ಗಂಟೆಯೊಳಗೆ ನಿಮ್ಮ ಹೆಸರು ಪೋರ್ಟಲ್‌ನಲ್ಲಿ ಸೇರ್ಪಡೆಗೊಳ್ಳುತ್ತದೆ.

### ಏಕೆ ನೋಂದಾಯಿಸಬೇಕು?

ಸರಕಾರದ ಆದೇಶದಂತೆ ಈ ಪೋರ್ಟಲ್‌ನಲ್ಲಿ ಕೃಷಿಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳದೇ ಇದ್ದರೆ ಆತನಿಗೆ ಬೆಳೆ ಸಾಲ, ಬೆಳೆ ವಿಮೆ, ಕೃಷಿಕನ ಮಕ್ಕಳಿಗೆ ಸಿಗುವ ವಿದ್ಯಾನಿಧಿ, ಕೃಷಿಗೆ ಪೂರಕವಾದ ಇತರೆ ಸೌಲಭ್ಯಗಳು ದೊರೆಯುವುದಿಲ್ಲ. ಈಗಾಗಲೇ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಘೋಷಿಸಿದಂತೆ ರೈತಶಕ್ತಿ ಯೋಜನೆಯಡಿ ಪ್ರತಿಯೊಬ್ಬ ಕೃಷಿಕನಿಗೂ 1 ಎಕರೆಗೆ 250 ರೂ.ನಂತೆ ಗರಿಷ್ಠ 5 ಎಕರೆಗೆ 1,250 ರೂ. ಇಂಧನ ವೆಚ್ಚ ಕೃಷಿಕನ ಖಾತೆಗೆ ನೇರ ಜಮೆಗೊಳ್ಳಲಿದೆ. ಎಲ್ಲ ದಾಖಲೆಗಳಿದ್ದರೂ ''ಫ್ರೂಟ್'' ಪೋರ್ಟಲ್‌ನಲ್ಲಿ ಹೆಸರು ನಮೂದಿಸಿದ್ದರೆ ಕೃಷಿಕ ಸರಕಾರದಿಂದ ಪಡೆಯುವ ಎಲ್ಲ ಸೌಲಭ್ಯಗಳಿಂದ ವಂಚಿತನಾಗುತ್ತಾನೆ.

## ಸೊರಗಿವೆ ವಸತಿ ಶಾಲೆಗಳು

» ಮೊದಲ ಪುಟದಿಂದ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ವ್ಯಾಪ್ತಿಯಡಿ ಮೊರಾರ್ಜಿ ದೇಸಾಯಿ, ಇಂದಿರಾ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ ಪದವಿ ಪೂರ್ವ ಕಾಲೇಜು, ಇಂದಿರಾ ಗಾಂಧಿ ವಸತಿ ಶಾಲೆ, ಹುತಾತ್ಮ ವಸತಿ ಶಾಲೆ, ಮಸ್ತಿ ವೆಂಕಟೇಶ ಅಯ್ಯಂಗಾರ್ ವಸತಿ ಶಾಲೆ, ಎಸ್‌ಸಿ/ಎಸ್‌ಟಿ ಪ್ರತಿಭಾವಂತ ವಿದ್ಯಾರ್ಥಿಗಳ ವಸತಿ ಶಾಲೆ, ಏಕಲವ್ಯ ಮಾದರಿ ವಸತಿ ಶಾಲಾ/ ಕಾಲೇಜು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಸೇರಿದಂತೆ ರಾಜ್ಯದಲ್ಲಿ ಒಟ್ಟು 826 ವಸತಿ ಶಾಲೆಗಳಿವೆ. ಈ ಪೈಕಿ 546ಕ್ಕೆ ಸ್ವಂತ ಕಟ್ಟಡವಿದ್ದು, 280 ವಸತಿ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಕಟ್ಟಡಗಳು ಮಾತ್ರವಲ್ಲದೆ, ಸ್ವಂತ ಕಟ್ಟಡಗಳಲ್ಲಿನ ವಸತಿ ಶಾಲೆಗಳಲ್ಲೂ ಮೂಲಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ.

**ಅನುದಾನ ನಿರೀಕ್ಷೆ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ನಿವೇಶನ ಲಭ್ಯವಿರುವ 103 ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಾಣಕ್ಕೆಂದು ಸರಕಾರಕ್ಕೆ ಒಟ್ಟು 3281.63 ಕೋಟಿ ಅನುದಾನಕ್ಕೆ ಪ್ರಸ್ತಾವನೆ ನೀಡಲಾಗಿದೆ. ಈ ಪೈಕಿ ಪರಿಶಿಷ್ಟ ಜಾತಿಯ 58 ವಸತಿ ಶಾಲೆ ನಿರ್ಮಾಣಕ್ಕೆ 1947.08 ಕೋಟಿ, ಪರಿಶಿಷ್ಟ ಪಂಗಡದ 17 ವಸತಿ ಶಾಲೆ ನಿರ್ಮಾಣಕ್ಕೆ 571.50 ಕೋಟಿ, ಹಿಂದುಳಿದ ವರ್ಗಗಳ 28 ವಸತಿ ಶಾಲೆ ನಿರ್ಮಾಣಕ್ಕೆ 763.05 ಕೋಟಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರಕಾರ ಶೇ.50ರಷ್ಟು ಅನುದಾನ ಬಿಡುಗಡೆ ಮಾಡಿದರೂ ಸಾಕಷ್ಟು ಕಡೆ ಕಟ್ಟಡ ನಿರ್ಮಾಣ ಪ್ರಕ್ರಿಯೆ ಆರಂಭವಾಗಲಿದೆ ಎಂದು ಕ್ರೈಸ್‌ನ ಅಧಿಕಾರಿಗಳು ತಿಳಿಸಿದ್ದಾರೆ.

> ರಾಜ್ಯಾದ್ಯಂತ ವಸತಿ ಶಾಲೆಗಳಲ್ಲಿನ ಮೂಲಸೌಕರ್ಯ ನಿರ್ವಹಣೆಗೆ ಜಿಲ್ಲಾವಾರು ಅನುದಾನ ಬಳಕೆಗೆ 90 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಹೀಗಾಗಿ, ಶೀಘ್ರದಲ್ಲೇ ವಸತಿ ಶಾಲೆಗಳಲ್ಲಿನ ಮೂಲಸೌಕರ್ಯ ಸ್ಥಿತಿ ಬದಲಾಗಲಿದೆ.
>
> **- ರಮೇಶ್ ದೇಸಾಯಿ**
> ಕಾರ್ಯನಿರ್ವಾಹಕ ನಿರ್ದೇಶಕ, ಕ್ರೈಸ್

**ವಿದ್ಯಾರ್ಥಿ ನಿಲಯಗಳ ಜಾಗರಣೆ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಮೆಟ್ರಿಕ್ ಪೂರ್ವ (6ರಿಂದ 12ನೇ ತರಗತಿವರೆಗೆ) 1,301 ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸುತ್ತಿದೆ. ಇವುಗಳಲ್ಲಿ 1463 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗಿದ್ದು 105 ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ 870 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯ ಸ್ನಾನಗೃಹ, ಶೌಚಾಲಯ, ಸ್ನಾನಗೃಹದಂತಹ ಎಲ್ಲ ಮೂಲ ಸೌಕರ್ಯಗಳಿವೆಯೆಂದು ಇಲಾಖೆ ತನ್ನ ವೆಬ್‌ಸೈಟ್‌ನಲ್ಲಿ ಹೇಳಿಕೊಂಡಿದೆ. ಆದರೆ, ಕಳೆದ ಆರ್ಥಿಕ ವರ್ಷದಿಂದಲೂ ಪರಿಸ್ಥಿತಿ ಹೀಗೆ ಉಳಿದಿದ್ದು, ವಿದ್ಯಾರ್ಥಿ ನಿಲಯಗಳಲ್ಲಿ ಕೊಠಡಿಗಳಲ್ಲಿ ಓವರ್‌ಲೋಡ್ ಸಮಸ್ಯೆ ಇದೆ. ಮೂಲಸೌಕರ್ಯ ಸಮಸ್ಯೆ ವಸತಿ ಶಾಲೆಗಳಂತೆ ಇಲ್ಲಿಯೂ ಇದ್ದು, ಹಲ್ಲರು ಸ್ನಾನ, ಶೌಚಗಳಿಲ್ಲದೆ ಚಳಿ, ಸೊಳ್ಳೆ ಕಾಟಕ್ಕೆ ರಾತ್ರಿಯಿಡೀ ಜಾಗರಣೆ ಕೂರುವ ಸ್ಥಿತಿಯಿದೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

## ನಿತ್ಯ ದರ್ಶಿ


ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ಭವಿಷ್ಯ, ವಾಸ್ತು, ಜಾತಕ, ಶುಭ ಮುಹೂರ್ತ, ಉದ್ಯೋಗ, ವಿವಾಹ, ಹಣಕಾಸು ಮತ್ತು ಆರೋಗ್ಯದ ಕುರಿತು, ಇತರ ಸಮಸ್ಯೆಗಳಿಗೆ ಪರಿಹಾರ ತಿಳಿದುಕೊಳ್ಳಲು 9513737373 ಈ ನಂಬರ್‌ಗೆ ಕರೆ ಅಥವಾ ವಾಟ್ಸ್ ಮೆಸೇಜ್ ಮಾಡಿ.



# ಕತ್ತು ನೋವಿಗೆ ಇದೆ ಸರಳ ಪರಿಹಾರ

ಇಂದಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿ ಕಂಡುಬರುವ ಸಮಸ್ಯೆ ಅಂದರೆ ಕತ್ತುನೋವು. ಇದು ಬಹಳಷ್ಟು ಜನರಲ್ಲಿ ಅತಿ ಚಿಕ್ಕ ವಯಸ್ಸಿನಲ್ಲೇ ಕಂಡು ಬರುತ್ತದೆ. ಕತ್ತಿನಲ್ಲಿ ವಿಪರೀತ ನೋವು, ಅಲುಗಾಡಿಸುವುದಕ್ಕೂ ಕಷ್ಟವಾಗುವುದು, ಎರಡೂ ಭುಜ ಮತ್ತು ಕೈಗಳಲ್ಲಿ ಜೋಮು ಹಿಡಿಯುವುದು ಮತ್ತು ಸೆಳೆತ, ಉರಿ ಮುಂತಾದ ಲಕ್ಷಣಗಳು ದೀರ್ಘ ಅವಧಿಯಲ್ಲಿ ಕಂಡುಬಂದಾಗ ಕತ್ತಿನ ನೋವಿನ ಸಮಸ್ಯೆ ಎಂದು ಪರಿಗಣಿಸಿ ಚಿಕಿತ್ಸೆ ನೀಡುವುದು ಬಹಳ ಅಗತ್ಯ ಎನ್ನುತ್ತಾರೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ತಜ್ಞರು.





ಡಾ. ಶ್ರೀಕಾಂತ್ ಮೋರ್ಲಾವರ್
ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ

ಸಾಮಾನ್ಯವಾಗಿ ಕತ್ತುನೋವು ಮಧ್ಯ ವಯಸ್ಕರಲ್ಲಿ ಅಂದರೆ 30ರಿಂದ 40 ವರ್ಷ ವಯಸ್ಸಿನವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಕೆಲವೊಮ್ಮೆ ಕತ್ತು ನೋವಿನ ಜೊತೆಗೆ ಬೆನ್ನುನೋವು ಸಹ ಕಾಣಿಸುತ್ತದೆ. ಈ ಸಮಸ್ಯೆಯು ಪುರುಷ ಮತ್ತು ಸ್ತ್ರೀ ಇಬ್ಬರಲ್ಲೂ ಸಮಾನ ರೀತಿಯಲ್ಲಿ ಕಂಡು ಬರುತ್ತದೆ.

### ಕಾರಣಗಳು

**ಸರ್ವೈಕಲ್ ಸ್ಪಾಂಡಿಲೋಸಿಸ್:** ಅತಿ ಹೆಚ್ಚು ಜನರಲ್ಲಿ ಕತ್ತು ನೋವಿಗೆ ಇದೇ ಪ್ರಮುಖ ಕಾರಣ. ಕತ್ತಿನ ಮೂಳೆಗಳ ಮಧ್ಯೆ ಇರುವ ಸರ್ವೈಕಲ್ ಡಿಸ್ಕ್‌ನಲ್ಲಿ ವಯಸ್ಸಾದ ನಂತರ ಸವೆತದಿಂದ ಕ್ರಮೇಣವಾಗಿ ನೋವು ಕಾಣಿಸಿಕೊಳ್ಳುತ್ತದೆ.

**ಡಿಸ್ ಸರಿಯುವುದು (ಡಿಸ್ಕ್ ಬಲ್ಜ್):** ಕತ್ತಿನ ಭಾಗದಲ್ಲಿ ಸುಮಾರು ಏಳು ಸರ್ವೈಕಲ್ ವರ್ಟಿಬ್ರಾ ಕಾಣಬಹುದು. ಅವುಗಳಲ್ಲಿ ಮುಖ್ಯವಾದ ಭಾಗದಲ್ಲಿ ಇರುವ ಡಿಸ್ಕ್ ಸರಿಯುವುದರಿಂದ ನರಗಳಿಗೆ ಒತ್ತಡ ಉಂಟಾಗಿ ಕತ್ತು ನೋವು ಬರುತ್ತದೆ. ನೋವಿನ ತೀವ್ರತೆ ಕ್ರಮೇಣ ಹೆಚ್ಚುತ್ತಾ ಹೋಗಿ ಕೈಗಳಲ್ಲಿ ಜೋಮು ಮತ್ತು ಸೆಳೆತ ಉಂಟಾಗುತ್ತದೆ. ಕೆಲವೊಮ್ಮೆ ಬೆರಳುಗಳಿಗೆ ಚುಚ್ಚಿದ ರೀತಿಯಲ್ಲಿ ನೋವು ಕಾಣುತ್ತದೆ.

**ಆನುವಂಶೀಯತೆ:** ಕೆಲವು ಜನರಲ್ಲಿ ಆನುವಂಶೀಯತೆ ಕೂಡ ಪ್ರಮುಖ ಕಾರಣವಾಗಬಹುದು. ಇದಕ್ಕೆ ಆ್ಯಂಕಿಲೋಸಿಂಗ್ ಸ್ಪಾಂಡಿಲೈಟಿಸ್ ಎಂದು ಹೆಸರಿಟ್ಟು ಚಿಕಿತ್ಸೆ ನೀಡಲಾಗುವುದು.

**ದೈಹಿಕ ಮತ್ತು ಮಾನಸಿಕ ಒತ್ತಡ:** ಅತಿಹೆಚ್ಚು ಭಾರವಾದ ವಸ್ತುಗಳನ್ನು ಎತ್ತುವುದು, ತಳ್ಳುವುದು ಮತ್ತು ಸರಿಯಾದ ಭಂಗಿಯಲ್ಲಿ ಕುಳಿತುಕೊಳ್ಳದಿರುವುದು ಕತ್ತು ನೋವಿಗೆ ಕಾರಣವಾಗಬಹುದು. ರುಮ್ಯಾಟಿಕ್ ಆರ್ಥ್ರೈಟಿಸ್ ಕಾಯಿಲೆಯಿಂದ ಬಳಲುತ್ತಿರುವವರಲ್ಲಿ ಕೆಲವೊಮ್ಮೆ ಕತ್ತು ನೋವು ಕಂಡುಬರುತ್ತದೆ.

**ಹೋಮಿಯೋಪತಿ ಚಿಕಿತ್ಸೆ:** ಯಾವುದೇ ರೋಗಿ ಕತ್ತುನೋವಿನ ಸಮಸ್ಯೆ ಎಂದು ಬಂದಾಗ ಆ ರೋಗಿಯ ರೋಗದ ಸಂಪೂರ್ಣ ಚಿತ್ರಣ ಪಡೆದು, ಅವಶ್ಯಕ ದೈಹಿಕ ಪರೀಕ್ಷೆಯ ನಂತರ ಚಿಕಿತ್ಸೆ ಆರಂಭಿಸಿ, ಕೊನೆಗೆ ಸಂಪೂರ್ಣವಾಗಿ ಗುಣಪಡಿಸುವವರೆಗೂ ಎಚ್ಚರಿಕೆಯಿಂದ ನಿಗಾ ವಹಿಸಲಾಗುತ್ತದೆ ಎನ್ನುತ್ತಾರೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ತಜ್ಞರು. ಸಮಸ್ಯೆಯ ನಿರ್ದಿಷ್ಟ ಕಾರಣ ಹುಡುಕಿ, ರೋಗದ ಸಂಪೂರ್ಣ ಲಕ್ಷಣ ಪಡೆದು ವ್ಯಕ್ತಿಗೆ ಸರಿಹೊಂದುವ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆ ನೀಡುವುದರಿಂದ ರೋಗ ಪೂರ್ಣವಾಗಿ ಗುಣಹೊಂದುತ್ತದೆ ಎನ್ನುತ್ತಾರೆ ತಜ್ಞರು.

**ಸಂಪರ್ಕ:** ಹೋಮಿಯೋಕೇರ್ ಇಂಟರ್‌ನ್ಯಾಷನಲ್: ಕರ್ನಾಟಕದಲ್ಲಿನ ಶಾಖೆಗಳು- ಬೆಂಗಳೂರು (ಜಯನಗರ, ಮಲ್ಲೇಶ್ವರ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ವಿಜಯಪುರ, ಬೀದರ್, ಕಲಬುರ್ಗಿ, ಶಿವಮೊಗ್ಗ, ತುಮಕೂರು, ಹಾಸನ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೇರಿ.

ಉಚಿತ ಸಲಹೆಗೆ: 1800 108 1212 (ಟೋಲ್‌ಫ್ರೀ): 955 000 1133
www.homeocare.in

(ಈ ಕ್ಷೇತ್ರದಲ್ಲಿನ ತಜ್ಞರ ಶಿಫಾರಸುಗಳನ್ನು ಆಧರಿಸಿದ ಬರಹ)

### ಲಕ್ಷಣಗಳು

ದೀರ್ಘಕಾಲದಿಂದ ಕತ್ತಿನಲ್ಲಿ ನೋವು ಮತ್ತು ಕತ್ತು ಆಡಿಸಲು ಕಷ್ಟವಾಗುವುದು, ತಲೆಯ ಹಿಂಭಾಗದಲ್ಲಿ ನೋವು, ಎರಡು ಭುಜಗಳಲ್ಲಿ ಮತ್ತು ಕೈಗಳಲ್ಲಿ ಸೆಳೆತ ಉಂಟಾಗುವುದು, ತಲೆ ತಿರುಗುವುದು, ಭಾರವಾದ ವಸ್ತು ಎತ್ತುವುದಕ್ಕೆ ಕಷ್ಟವಾಗುವುದು, ಭುಜಗಳಲ್ಲಿ ನೋವು ಕಾಣಿಸುವುದು, ಕತ್ತಿನ ಭಾಗದ ಮಾಂಸ ಖಂಡಗಳಲ್ಲಿ ಅತಿಯಾದ ನೋವು ಕಾಣಿಸುವುದು ಪ್ರಮುಖ ಲಕ್ಷಣಗಳು.

## ಸಿಂಪಲ್ ಸೋಮು




# ಜೀವ ಇದ್ದರೇನೇ ಅದು ಕಾವ್ಯ

ಹೀಗೂ ಉಂಟು


ನಾನು ಛಂದಸ್ಸನ್ನು ಕಲಿಯಲು ಉಪಕ್ರಮಿಸಿದ ಕಾಲ. ಕವನವೊಂದನ್ನು ರಚಿಸಿ ಛಂದಸ್ಸಿನ ಅಮೂಲ್ಯ ಗಣಿಯಾದ ನನ್ನ ಗುರುಗಳ ಕೈಗಿಟ್ಟೆ. ಅದ್ಭುತವಾಗಿ ಎಲ್ಲವನ್ನೂ ಪರಿಶೀಲಿಸಿದ ಅವರು ಏನೇನೂ ಮಾತನಾಡದೆ ಪದ್ಯವನ್ನು ಹಿಂತಿರುಗಿಸಿದರು. ... 'ಪ್ರಾಸ ಇದೆಯಲ್ಲ?' ಎಂದೆ. 'ಹೌದು. ಎಲ್ಲೆಡೆಯೂ ಅಂತ್ಯಪ್ರಾಸವಿದೆ. ... 'ಮಾತ್ರೆಗಳ ಲೆಕ್ಕವೂ ಸರಿಯಿದೆಯಲ್ಲ, ಪ್ರತಿ ಸಾಲಿನಲ್ಲೂ ಇಪ್ಪತ್ತೇ ಮಾತ್ರೆಗಳು; ... ಚೆಕ್ ಮಾಡಿದ್ದೇನೆ' ಎಂದೆ. 'ಹೌದು. ಸರಿಯಾಗಿದೆ' ಎಂದರು. 'ಪ್ರಾಸವಿದೆ, ಮಾತ್ರೆಗಳು ಸರಿಯಿವೆ, ವಿಷಯವಿದೆ. ಹಾಗಾದರೆ ತಿರಸ್ಕಾರವೇಕೆ?' ಎಂದೆ. 'ನೋಡಯ್ಯ, ಹೆಣಕ್ಕೂ ಕೈ, ಕಾಲು, ಮೂಗು, ಕಿವಿ ಎಲ್ಲವೂ ಇರತ್ತೆ. ಜೀವ ಇರಲ್ಲ. ಪದ್ಯದಲ್ಲಿ ಜೀವ ಇರಬೇಕಯ್ಯ' ಎಂದರು ಪ್ರೊಫೆಸರ್. ಯಾವುದೇ ಕೃತಿಯನ್ನು ಬರೆದ ನಂತರ ..., ಚೆನ್ನಾಗಿದ್ದರೆ ... ಆ ಗುರುಗಳೇ ಪ್ರೊಫೆಸರ್ ಅಕ್ಷರಬ್ರಹ್ಮ ರಾಮಣ್ಣ ಮಿತ್ರ - ಅ.ರಾ.ಮಿತ್ರ.

- ಎಚ್. ರಾಮನಾಥ್

## ಮೂವೀಸ್ today

ಉದಯ ಟಿವಿ
ಬಾಬು ಬಂಗಾರ/ಮಧ್ಯಾಹ್ನ 2.30
ರಾತ್ರಿ 7
ಕಸ್ತೂರಿ ಟಿವಿ
ಸ್ಟಾರ್ ಸುವರ್ಣ ಪ್ಲಸ್
ಕಲರ್ಸ್ ಸೂಪರ್
ಉದಯ ಮೂವೀಸ್

## ವಿಜಯಬಂಧ - 6519



## ಬಜರಂಗ್‌ಗೆ ಕಂಚಿನ ಪದಕ

**ಅಲ್ಮಾಟಿ (ಕಜಕಿಸ್ತಾನ):** ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ಇಲ್ಲಿ ನಡೆಯುತ್ತಿರುವ 'ಬೊಲಾಟ್ ಟರ್ಲಿಖಾನೋವ್ ಕಪ್' ಕುಸ್ತಿ ಚಾಂಪಿಯನ್‌ಷಿಪ್‌ನ 65 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಈ ಮಧ್ಯೆ, ಅಮನ್ 57 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಮೊದಲ ಸ್ವರ್ಣ ಪದಕ ಜಯಿಸಿದ್ದಾರೆ.

ಬಜರಂಗ್ ಮೊದಲ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಅಬ್ಬೋಸ್ ರಾಖ್ಮೊನೋವ್ ಎದುರು 3-5 ಅಂತರದಿಂದ ಸೋತರು. ಆದರೆ, ಆ ಬಳಿಕ ಕಂಚಿನ ಪದಕಕ್ಕಾಗಿ ನಡೆದ ಪ್ಲೇಆಫ್ ಪಂದ್ಯದಲ್ಲಿ 7-0 ಅಂತರದಿಂದ ಕಜಕಿಸ್ತಾನದ ದಿಭಾಸ್ ಸಾಂಯುಕೋಬಾಲೋವ್ ವಿರುದ್ಧ ಜಯ ಗಳಿಸಿದರು.

ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ರವಿ ದಹಿಯಾ ಅವರೊಂದಿಗೆ ಛತ್ರಸಾಲ್ ಕ್ರೀಡಾಂಗಣದಲ್ಲಿ ತರಬೇತಿ ಪಡೆಯುತ್ತಿರುವ ಅಮನ್, 57 ಕೆ.ಜಿ ವಿಭಾಗದಲ್ಲಿ ಗಮನಾರ್ಹ ಪ್ರದರ್ಶನ ನೀಡಿದರು. ಮೊದಲ ಸುತ್ತಿನಲ್ಲಿ ಮಂಗೋಲಿಯಾದ ... ವಿರುದ್ಧ 15-12 ಅಂಕಗಳಿಂದ ಗೆದ್ದ ಅಮನ್, 2ನೇ ಸುತ್ತಿನಲ್ಲಿ ಕಿರ್ಗಿಸ್ತಾನದ ಅಬ್ದುಮಾಲಿಕ್ ಕರಾಚೋವ್ ವಿರುದ್ಧ ತಾಂತ್ರಿಕ ಶ್ರೇಷ್ಠತೆ ಆಧಾರದ ಮೇಲೆ ಜಯ ಗಳಿಸಿದರು. ಅಂತಿಮ ಸುತ್ತಿನಲ್ಲಿ ಕಜಕಿಸ್ತಾನದ ಬಜಾರ್ಬೆಯೋವ್ ವಿರುದ್ಧ 10-9ರಿಂದ ರೋಚಕ ಗೆಲುವು ದಾಖಲಿಸಿ ಸ್ವರ್ಣ ಪದಕಕ್ಕೆ ಮುತ್ತಿಟ್ಟರು.

## ಪ್ರಶಸ್ತಿ ಸುತ್ತಿಗೆ ಭಾರತ ಹಾಕಿ ತಂಡ

**ಲೂಸಾನ್:** ಭಾರತ ಪುರುಷರ ಹಾಕಿ ತಂಡ ಭಾನುವಾರ ಮಲೇಷ್ಯಾ ಮತ್ತು ಪೋಲೆಂಡ್ ತಂಡಗಳ ವಿರುದ್ಧ ಏಕಪಕ್ಷೀಯ ಜಯ ಸಾಧಿಸುವ ಮೂಲಕ ಉದ್ಘಾಟನಾ ಆವೃತ್ತಿಯ ಎಫ್‌ಐಎಚ್ ಹಾಕಿ 5ಎಸ್ ಟೂರ್ನಿಯಲ್ಲಿ ಅಜೇಯ ದಾಖಲೆಯೊಂದಿಗೆ ಫೈನಲ್ ಪ್ರವೇಶಿಸಿದೆ. ಮೊದಲ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ 7-3 ಅಂತರದಲ್ಲಿ ಜಯ ಗಳಿಸಿದ ಭಾರತ, 2ನೇ ಪಂದ್ಯದಲ್ಲಿ ಪೋಲೆಂಡ್ ವಿರುದ್ಧ 6-2ರಿಂದ ಜಯಭೇರಿ ಬಾರಿಸಿತು. ಮಲೇಷ್ಯಾ ವಿರುದ್ಧದ ಪಂದ್ಯದ ದ್ವಿತೀಯಾರ್ಧದಲ್ಲಿ ಭಾರತೀಯ ಆಟಗಾರರು ನಾಲ್ಕು ಗೋಲ್ ಗಳಿಸಿ ಅರ್ಭಟಿಸಿದರು.

## 12ರಂದು ಟಿ20 ಟಿಕೆಟ್ ಮಾರಾಟ

**ಬೆಂಗಳೂರು:** ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 19ರಂದು ನಡೆಯಲಿರುವ ಟಿ20 ಸರಣಿಯ 5ನೇ ಪಂದ್ಯದ (ಹೊನಲು ಬೆಳಕು) ಟಿಕೆಟ್‌ಗಳನ್ನು ಜೂನ್ 12ರಂದು ಆನ್‌ಲೈನ್ ಮತ್ತು ಬಾಕ್ಸ್ ಆಫೀಸ್‌ನಲ್ಲಿ ಮಾರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ವಿಜಾಪುರ ... ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಾಕ್ಸ್ ಆಫೀಸ್‌ನಲ್ಲಿ ಬಿಕರಿಯಾಗದೆ ಉಳಿಯುವ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡಲಾಗುತ್ತದೆ. ಜೂನ್ 13ರಂದು ಬಾಕ್ಸ್ ಆಫೀಸ್‌ನಲ್ಲಿ ಟಿಕೆಟ್ ಮಾರಾಟವಿರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

| ಬಾಕ್ಸ್ ಆಫೀಸ್‌ನಲ್ಲಿ ಮಾರಾಟವಾಗುವ ಟಿಕೆಟ್‌ಗಳ ಪಟ್ಟಿ | | |
|---|---|---|
| ಸ್ಟ್ಯಾಂಡ್ | ಟಿಕೆಟ್ ದರ | ಗೇಟ್ ಸಂಖ್ಯೆ |
| ಜಿ ಅಪ್ಪರ್, ಲೋವರ್ 1, ಲೋವರ್ 2 | ₹750 | 5 - ಕಬ್ಬನ್ ರಸ್ತೆ |
| ಎ ಅಪ್ಪರ್, ಬಿ ಅಪ್ಪರ್, ಲೋವರ್ | ₹2000 | 2 - ಕಬ್ಬನ್ ರಸ್ತೆ |
| ಡಿ ಕಾರ್ಪೊರೇಟ್ | ₹4000 | 19 - ಕ್ವೀನ್ಸ್ ರಸ್ತೆ |
| ಎನ್ ಸ್ಟ್ಯಾಂಡ್ | ₹5000 | 18 - ಕ್ವೀನ್ಸ್ ರಸ್ತೆ |
| ಇ ಎಕ್ಸಿಕ್ಯುಟಿವ್ | ₹6000 | 18 - ಕ್ವೀನ್ಸ್ ರಸ್ತೆ |
| ಆನ್‌ಲೈನ್ ಮಾರಾಟ | | |
| ಗ್ರ್ಯಾಂಡ್ ಟೆರೇಸ್ | ₹8000 | |
| ಪಿ ಕಾರ್ಪೊರೇಟ್ | ₹10000 | |
| ಪೆವಿಲಿಯನ್ ಟೆರೇಸ್ | ₹15000 | |
| ಪಿ1 ಸ್ಟ್ಯಾಂಡ್ | ₹20000 | |

# ನಡಾಲ್ ಮತ್ತೆ ಕಿಂಗ್ ಆಫ್ ಕ್ಲೇ






ರನ್ನರ್ ಅಪ್ ಕ್ಯಾಸ್ಪರ್ ರೂಡ್

### ಫೈನಲ್‌ನಲ್ಲಿ ರೂಡ್‌ಗೆ ಸೋಲು | ನಡಾಲ್ ಮುಡಿಗೆ 14ನೇ ಫ್ರೆಂಚ್ ಓಪನ್ ಮುಕುಟ

**ಪ್ಯಾರಿಸ್ (ಫ್ರಾನ್ಸ್):** ನಿರೀಕ್ಷೆ ನಿಜವಾಯಿತು. ಆವೆ ಮಣ್ಣಿನಂಗಣದ ರಾಜ ರಾಫೆಲ್ ನಡಾಲ್‌ಗೆ ಮತ್ತೊಮ್ಮೆ ಫ್ರೆಂಚ್ ಓಪನ್ ಟ್ರೋಫಿ ಒಲಿಯಿತು. ಭಾನುವಾರ ಪ್ಯಾರಿಸ್‌ನ ಫಿಲಿಪ್ ಚಾಟ್ರಿಯರ್ ಅಂಗಣದಲ್ಲಿ ನಡೆದ 2022ರ ಸಾಲಿನ ಫ್ರೆಂಚ್ ಓಪನ್ ಗ್ರ್ಯಾನ್ ಸ್ಲಾಮ್ ಟೂರ್ನಿಯ ಫೈನಲ್‌ನಲ್ಲಿ 36 ವರ್ಷದ ಸ್ಪೇನ್ ಟೆನಿಸ್ ದಿಗ್ಗಜ ನಡಾಲ್ 23 ವರ್ಷದ ನಾರ್ವೆ ಆಟಗಾರ ಕ್ಯಾಸ್ಪರ್ ರೂಡ್ ಅವರನ್ನು 3 ಸೆಟ್‌ಗಳಿಂದ ಸೋಲಿಸಿ 14ನೇ ಫ್ರೆಂಚ್ ಓಪನ್ ಟ್ರೋಫಿಯನ್ನು ಎದೆಗಪ್ಪಿಕೊಂಡರು.

ಇದರೊಂದಿಗೆ ಫ್ರೆಂಚ್ ಓಪನ್‌ನಲ್ಲಿ ಅವರ ಪ್ರಶಸ್ತಿಗಳ ದಾಖಲೆ 14ಕ್ಕೆ ಏರಿತು. ಇದೇ ವೇಳೆ, ಅವರ ಒಟ್ಟಾರೆ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳ ದಾಖಲೆ 22ಕ್ಕೇರಿತು. ಅತಿ ಹೆಚ್ಚು ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಜಯಿಸಿದವರ ಪಟ್ಟಿಯಲ್ಲಿ ನಡಾಲ್‌ಗೆ ಅಗ್ರಸ್ಥಾನವಾದರೆ, ವಿಶ್ವದ ಅಗ್ರ ಶ್ರೇಯಾಂಕದ ಸರ್ಬಿಯಾ ಆಟಗಾರ ನೊವಾಕ್ ಜೊಕೊವಿಚ್ ಮತ್ತು ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ತಲಾ 20 ಪ್ರಶಸ್ತಿಗಳೊಂದಿಗೆ ಜಂಟಿ 2ನೇ ಸ್ಥಾನದಲ್ಲಿದ್ದಾರೆ.

**ಪ್ರಶಸ್ತಿ ನಿರೀಕ್ಷಿತ:** ಕ್ವಾರ್ಟರ್‌ಫೈನಲ್ ಸೆಣಸಾಟದಲ್ಲಿ ನೊವಾಕ್ ಜೊಕೊವಿಚ್ ಅವರನ್ನು ಸೋಲಿಸಿದಾಗಲೇ ವಿಶ್ವದ 5ನೇ ಶ್ರೇಯಾಂಕದ ಆಟಗಾರ ನಡಾಲ್ 14ನೇ ಬಾರಿ ಫ್ರೆಂಚ್ ಓಪನ್ ಚಾಂಪಿಯನ್ ಆಗುವುದು ಬಹುತೇಕ ಖಚಿತಗೊಂಡಿತ್ತು. ಅದಾದ ಬಳಿಕ ಶುಕ್ರವಾರ ನಡೆದ ಮೊದಲ ಸೆಮಿಫೈನಲ್‌ನಲ್ಲಿ 3ನೇ ಶ್ರೇಯಾಂಕದ ಆಟಗಾರ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಗಾಯಾಳುವಾಗಿ ಅರ್ಧದಲ್ಲೇ ಸ್ಪರ್ಧೆಯಿಂದ ಹಿಂದೆ ಸರಿದದ್ದು ನಡಾಲ್‌ಗೆ ವರದಾನವಾಯಿತು. ಇಷ್ಟಾದ ಬಳಿಕ ಭಾನುವಾರದ ಫೈನಲ್‌ನಲ್ಲಿ ಹೇಳಿಕೊಳ್ಳುವಂಥ ಥ್ರಿಲ್ ಉಳಿದಿರಲಿಲ್ಲ. ಕ್ಲೇ ಕೋರ್ಟ್ ಕಿಂಗ್ ಎಂದೇ ಜನಜನಿತರಾಗಿರುವ ನಡಾಲ್‌ಗೆ ವಿಶ್ವದ 8ನೇ ಶ್ರೇಯಾಂಕದ ನಾರ್ವೆ ಆಟಗಾರ ಕ್ಯಾಸ್ಪರ್ ರೂಡ್ ಸರಿಸಾಟಿಯಾಗಲಾರರು ಎಂಬುದು ಟೆನಿಸ್ ಜಗತ್ತಿಗೆ ಮೊದಲೇ ತಿಳಿದಿತ್ತು. ಅಂತೆಯೇ 2 ಗಂಟೆ 18 ನಿಮಿಷಗಳ ಹೋರಾಟದಲ್ಲಿ ನಡಾಲ್ ಗೆದ್ದರು. ಅದು ಏಕಪಕ್ಷೀಯ ಗೆಲುವು. ಅವರ 18 ಗೇಮ್‌ಗಳಿಗೆ ಪ್ರತಿಯಾಗಿ ರೂಡ್‌ಗೆ ಗೆಲ್ಲಲು ಸಾಧ್ಯವಾಗಿದ್ದು ಬರೇ 6 ಗೇಮ್‌ಗಳು.

ವೃತ್ತಿಜೀವನದುದ್ದಕ್ಕೂ ಎಡಪಾದದ ನೋವಿನಿಂದ ಹೈರಾಣಾಗಿರುವ 36 ವರ್ಷದ ಎಡಗೈ ಆಟಗಾರ ಇಷ್ಟು ದೂರ ಸಾಗಿಬಂದಿರುವುದೇ ಅಚ್ಚರಿಯ ಸಂಗತಿ. ಒಂದು ತಿಂಗಳ ಹಿಂದಷ್ಟೇ ನಡಾಲ್ ಅವರ ಪಾದದ ನೋವು ಉಲ್ಬಣಗೊಂಡಿತ್ತು. ಹೀಗಾಗಿ ಅವರು ಪ್ಯಾರಿಸ್ ವಿಮಾನ ಏರುವ ಬಗ್ಗೆಯೇ ಅನುಮಾನ ಮೂಡಿತ್ತು. ಏನೇ ಆದರೂ ಅವರ ಸ್ಪರ್ಧಾ ಬೆರಗು ಹುಟ್ಟಿಸುವಂಥದ್ದು. ಕೆಲವೇ ದಿನಗಳಲ್ಲಿ ಪಾದದ ನೋವಿನಿಂದ ಮುಕ್ತರಾಗಿ ಮತ್ತೆ ಗೆಲುವುಗಳ ಬೇಟೆಯಾಟ ಶುರುಮಾಡಿದರು. ಈಗ ಪ್ಯಾರಿಸ್ ಅಂಗಣದಲ್ಲೂ ವಿಕ್ರಮ ಮೆರೆದು, ಫ್ರೆಂಚ್ ಓಪನ್ ಗೆದ್ದ ಅತಿ ಹಿರಿಯ ಆಟಗಾರನೆಂಬ ದಾಖಲೆಗೂ ಭಾಜನರಾದರು. ಇದಕ್ಕೂ ಮೊದಲು ಈ ದಾಖಲೆ ಸ್ಪೇನ್‌ನವರೇ ಆದ ಆ್ಯಂಡ್ರೆಸ್ ಜಿಮೆನೊ ಹೆಸರಲ್ಲಿತ್ತು. 50 ವರ್ಷಗಳ ಹಿಂದೆ 34ನೇ ವಯಸ್ಸಿನಲ್ಲಿ ಅವರು ಫ್ರೆಂಚ್ ಓಪನ್ ಜಯಿಸಿ ದಾಖಲೆ ನಿರ್ಮಿಸಿದ್ದರು.

### ಮೂರನೇ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡಕ್ಕೆ ಉತ್ತರ ಪ್ರದೇಶದ ಸವಾಲು

# ಗೆಲುವಿನ ನಿರೀಕ್ಷೆಯಲ್ಲಿ ಮನೀಶ್ ಪಡೆ

**ರಣಜಿ ನಾಕೌಟ್ ಹಣಾಹಣಿ**

■ ವಿಕ ಸುದ್ದಿಲೋಕ ಬೆಂಗಳೂರು

ಮನೀಶ್ ಪಾಂಡೆ ನೇತೃತ್ವದ ಕರ್ನಾಟಕ ತಂಡ ಇಂದು ಕೆಎಸ್‌ಸಿಎನ ಆಲೂರು ಮೈದಾನದಲ್ಲಿ ಆರಂಭಗೊಳ್ಳಲಿರುವ ಪ್ರಸಕ್ತ ಸಾಲಿನ ರಣಜಿ ಟ್ರೋಫಿ ಟೂರ್ನಿಯ 3ನೇ ಕ್ವಾರ್ಟರ್‌ಫೈನಲ್‌ನಲ್ಲಿ ಉ.ಪ್ರದೇಶದ ಸವಾಲು ಎದುರಿಸಲಿದೆ.

ಐಪಿಎಲ್ 15ನೇ ಆವೃತ್ತಿ ಆರಂಭಗೊಳ್ಳುವುದಕ್ಕೂ ಮುನ್ನ ನಡೆದ ಲೀಗ್ ಹಂತದಲ್ಲಿ ಕರ್ನಾಟಕ ತಂಡ 'ಸಿ' ಗುಂಪಿನ ಅಗ್ರಸ್ಥಾನಿಯಾಗಿ ಕ್ವಾರ್ಟರ್‌ಫೈನಲ್ಸ್ ತಲುಪಿದ್ದರೆ, ಉತ್ತರ ಪ್ರದೇಶ ತಂಡ 'ಜಿ' ಗುಂಪಿನ ಮೊದಲ ತಂಡವಾಗಿ ನಾಕೌಟ್ ಹಂತಕ್ಕೇರಿದೆ.

8 ಬಾರಿಯ ಚಾಂಪಿಯನ್ ಕರ್ನಾಟಕ ತಂಡಕ್ಕೆ ನಿರ್ಣಾಯಕ ಘಟ್ಟದಲ್ಲಿ ಪ್ರಮುಖ ಆಟಗಾರರಾದ ಕೆ.ಎಲ್ ರಾಹುಲ್ ಮತ್ತು ಪ್ರಸಿದ್ಧ್ ಕೃಷ್ಣ ಅವರ ಸೇವೆ ಲಭ್ಯವಿಲ್ಲದಿರುವುದು ಸ್ವಲ್ಪಮಟ್ಟಿನ ಹಿನ್ನಡೆ ಎನಿಸಿದೆ.

ರಾಹುಲ್, ಪ್ರವಾಸಿ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಜೂನ್ 9ರಂದು ಆರಂಭವಾಗಲಿರುವ 5 ಪಂದ್ಯಗಳ ಟಿ20 ಸರಣಿಯಲ್ಲಿ ಭಾರತ ತಂಡವನ್ನು ಮುನ್ನಡೆಸುತ್ತಿದ್ದರೆ, ಪ್ರಸಿದ್ಧ್ ಕೃಷ್ಣ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯಕ್ಕೆ (ಜುಲೈ 1ರಿಂದ 5) ಆಯ್ಕೆಯಾಗಿರುವುದರಿಂದ ವಿಶ್ರಾಂತಿಯಲ್ಲಿದ್ದಾರೆ. ಪ್ರಸಿದ್ಧ್ ಬದಲಿಗೆ ಕರ್ನಾಟಕ ತಂಡಕ್ಕೆ ವಿ ಕೌಶಿಕ್ ಸೇರ್ಪಡೆಯಾಗಿದ್ದಾರೆ. ಪ್ರಮುಖ ಆಟಗಾರರಿಬ್ಬರ ಅನುಪಸ್ಥಿತಿಯ ನಡುವೆಯೇ ಉತ್ತರ ಪ್ರದೇಶ ತಂಡವನ್ನು ಸೋಲಿಸಿ ಉಪಾಂತ್ಯ ಪ್ರವೇಶಿಸುವ ದೃಢ ಸಂಕಲ್ಪ ಕರುನಾಡ ಪಡೆಯದ್ದಾಗಿದೆ.

ಇದರ್ಥ ಕರಣ್ ಶರ್ಮ ಸಾರಥ್ಯದ ಉತ್ತರ ಪ್ರದೇಶ ತಂಡ ಸುಲಭದಲ್ಲಿ ಕರ್ನಾಟಕಕ್ಕೆ ಶರಣಾಗುತ್ತದೆ ಎಂದಲ್ಲ. ಆ ತಂಡದಲ್ಲಿ ರಿಂಕು ಸಿಂಗ್, ರಿಯಾನ್ ಪರಾಗ್, ಯಶ್ ದಯಾಳ್, ಮೊಹ್ಸಿನ್ ಖಾನ್‌ರಂಥ ಪ್ರತಿಭಾವಂತ ಆಟಗಾರರಿದ್ದಾರೆ. ಇವರೆಲ್ಲ ಇತ್ತೀಚೆಗೆ ಐಪಿಎಲ್ 15ನೇ ಆವೃತ್ತಿಯಲ್ಲಿ ಮಿಂಚಿದವರು.

**ಮಳೆ ಅಡ್ಡಿ ಸಾಧ್ಯತೆ:** ಬೆಂಗಳೂರು ಸೇರಿ ಸದ್ಯ ದಕ್ಷಿಣ ಭಾರತದ ಬಹುತೇಕ ಕಡೆಗಳಲ್ಲಿ ಮಳೆಯಾಗುತ್ತಿದ್ದು, ಸೋಮವಾರವೂ ಮಳೆ ಮುಂದುವರಿಯುವ ನಿರೀಕ್ಷೆಗಳಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಕರ್ನಾಟಕ vs ಉತ್ತರ ಪ್ರದೇಶ
3ನೇ ಕ್ವಾರ್ಟರ್‌ಫೈನಲ್
ಸ್ಥಳ: ಕೆಎಸ್‌ಸಿಎ ಕ್ರಿಕೆಟ್ ಗ್ರೌಂಡ್, ಆಲೂರು
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ 1
ಇತರ ಕ್ವಾರ್ಟರ್‌ಫೈನಲ್ ಪಂದ್ಯಗಳು
ಬಂಗಾಳ vs ಜಾರ್ಖಂಡ್ (ಸ್ಟೇಟ್-ಜಸ್ಟ್ ಕ್ರಿಕೆಟ್ ಅಕಾಡೆಮಿ, ಬೆಂಗಳೂರು)
ಮುಂಬಯಿ vs ಉತ್ತರಾಖಂಡ (ಕೆಎಸ್‌ಸಿಎ ಕ್ರಿಕೆಟ್ ಗ್ರೌಂಡ್ (2), ಆಲೂರು)
ಪಂಜಾಬ್ vs ಮಧ್ಯಪ್ರದೇಶ (ಕೆಎಸ್‌ಸಿಎ ಕ್ರಿಕೆಟ್ ಗ್ರೌಂಡ್ (3), ಆಲೂರು)
ಎಲ್ಲ ಪಂದ್ಯಗಳು ಬೆಳಗ್ಗೆ 9.30ಕ್ಕೆ ಆರಂಭ

**ಅಪೂರ್ವ ಸಂಗಮ**

2022ನೇ ಇಸವಿಯ ಜೂನ್ 6, ರಣಜಿ ಕ್ರಿಕೆಟ್ ಇತಿಹಾಸದಲ್ಲಿ ಚಿರಸ್ಮರಣೀಯ ದಿನವಾಗಲಿದೆ. ಏಕೆಂದರೆ, ರಣಜಿ ಟೂರ್ನಿಯ 87ನೇ ಆವೃತ್ತಿಯಲ್ಲಿ ಈ ದಿನದಂದು ಬೆಂಗಳೂರಿನ ಆಲೂರಿನಲ್ಲಿ 3 ರಣಜಿ ಕ್ವಾರ್ಟರ್‌ಫೈನಲ್ಸ್ ಪಂದ್ಯಗಳು (ಮುಂಬಯಿ - ಉತ್ತರಾಖಂಡ, ಕರ್ನಾಟಕ - ಉತ್ತರ ಪ್ರದೇಶ ಹಾಗೂ ಪಂಜಾಬ್ - ಮಧ್ಯ ಪ್ರದೇಶ) ಆರಂಭವಾಗಲಿವೆ. ಒಂದೇ ದಿನ ಒಂದೇ ಊರಿನಲ್ಲಿ (3 ಪ್ರತ್ಯೇಕ ಮೈದಾನಗಳಲ್ಲಿ) 3 ರಣಜಿ ನಾಕೌಟ್ ಪಂದ್ಯಗಳು ಆರಂಭವಾಗುತ್ತಿರುವುದು ಇದೇ ಮೊದಲು. ಇದು ಅಪೂರ್ವ ಸಂಗಮ.

**28**, ಕರ್ನಾಟಕ ತಂಡ ರಣಜಿ ಇತಿಹಾಸದಲ್ಲಿ ಆಡಿರುವ ಕ್ವಾರ್ಟರ್‌ಫೈನಲ್ ಪಂದ್ಯಗಳು. ಈ ಪೈಕಿ 19 ಬಾರಿ ಸೆಮಿಫೈನಲ್ಸ್ ಪ್ರವೇಶಿಸಿದೆ.

**01** ಕರ್ನಾಟಕ ತಂಡ ಕ್ವಾ.ಫೈನಲ್‌ನಲ್ಲಿ ಒಮ್ಮೆ ಉ.ಪ್ರದೇಶ ವಿರುದ್ಧ ಆಡಿದ್ದು, ಗೆದ್ದಿದೆ.

ಅಂಕಿ ಅಂಶ: ಚನ್ನಗಿರಿ ಕೇಶವ ಮೂರ್ತಿ

# ಮೊದಲ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ ಫೇಲ್

**ಇಂಗ್ಲೆಂಡ್‌ಗೆ 5 ವಿಕೆಟ್ ಜಯ** | **ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1-0 ಮುನ್ನಡೆ**

**ಲಂಡನ್:** ಅತಿಥೇಯ ಇಂಗ್ಲೆಂಡ್ ತಂಡ ಜೋ ರೂಟ್ ಅವರ ಅಜೇಯ ಶತಕದ (115*) ನೆರವಿನಿಂದ ನ್ಯೂಜಿಲೆಂಡ್ ವಿರುದ್ಧ ಮೊದಲ ಟೆಸ್ಟ್‌ನಲ್ಲಿ 5 ವಿಕೆಟ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಬೆನ್ ಸ್ಟೋಕ್ಸ್ ಬಳಗಕ್ಕೆ 3 ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ದೊರಕಿದೆ.

ಗೆಲುವಿಗೆ 2ನೇ ಇನಿಂಗ್ಸ್‌ನಲ್ಲಿ 277 ರನ್ ಗಳಿಸಬೇಕಿದ್ದ ಆತಿಥೇಯ ತಂಡ ಪಂದ್ಯದ 4ನೇ ದಿನವಾದ ಭಾನುವಾರ ಭೋಜನ ವಿರಾಮಕ್ಕೂ ಮುನ್ನವೇ 5 ವಿಕೆಟ್ ಕಳೆದುಕೊಂಡು 279 ರನ್ ಬಾರಿಸಿತು.

**ಆಂಗ್ಲರಿಗೆ ರೂಟ್ ಆಧಾರ:** ಶನಿವಾರ 277 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ತಂಡ 69 ರನ್ ಕಲೆಹಾಕುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸೋಲಿನತ್ತ ಮುಖ ಮಾಡಿತ್ತು. ಆದರೆ, ಕ್ರೀಸ್ ಬಂದಿದ್ದ ವಿಕೆಟ್ ಉಳಿಸಿಕೊಳ್ಳುತ್ತಿದ್ದರೂ, ಮತ್ತೊಂದು ತುದಿಯಲ್ಲಿ ಮಾಜಿ ನಾಯಕ ಜೋ ರೂಟ್ ಗಟ್ಟಿಯಾಗಿ ತಳವೂರಿದ್ದರಿಂದ ಇಂಗ್ಲೆಂಡ್ ತಂಡ ಚೇತರಿಸಿಕೊಳ್ಳತೊಡಗಿತು. ಅವರಿಗೆ ಹಾಲಿ ನಾಯಕ ಬೆನ್ ಸ್ಟೋಕ್ಸ್ (54) ಉತ್ತಮ ಸಾಥ್ ನೀಡಿದರು. ಈ ಜೋಡಿ ನೋಡನೋಡುತ್ತಿದ್ದಂತೆಯೇ 5ನೇ ವಿಕೆಟ್‌ಗೆ 90 ರನ್ ಕಲೆ ಹಾಕಿತು. ಅಷ್ಟರಲ್ಲಿ ಸ್ಟೋಕ್ಸ್ ಔಟಾದರು. ನಂತರ ರೂಟ್‌ಗೆ ಬೆನ್ ಫೋಕ್ಸ್ (32*) ಸಾಥ್ ನೀಡತೊಡಗಿದರು. ಶನಿವಾರದ ಆಟ ಮುಕ್ತಾಯಗೊಳ್ಳುವಾಗ ರೂಟ್-ಫೋಕ್ಸ್ ಜೋಡಿ ಮುರಿಯದ 6ನೇ ವಿಕೆಟ್‌ಗೆ 57 ರನ್ ಕಲೆಹಾಕಿತ್ತು. ಗೆಲುವಿಗೆ ಇನ್ನು 61 ರನ್‌ಗಳಷ್ಟೇ ಬೇಕಿದ್ದವು. ಭಾನುವಾರ ರೂಟ್ ಮತ್ತು ಫೋಕ್ಸ್ ಜೋಡಿ ಇಂಗ್ಲೆಂಡ್ ತಂಡವನ್ನು ನಿರಾತಂಕವಾಗಿ ಗೆಲುವಿನ ದಡ ಸೇರಿಸಿತು.

**ಸಂಕ್ಷಿಪ್ತ ಸ್ಕೋರ್**

ನ್ಯೂಜಿಲೆಂಡ್: 132 ಮತ್ತು 285
ಇಂಗ್ಲೆಂಡ್: 141 ಮತ್ತು 5ಕ್ಕೆ 279

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಸೋಮವಾರ, 6 ಜೂನ್ 2022
ಇಂದಿನ ತಾಪಮಾನ 21° ಕನಿಷ್ಠ 30° ಗರಿಷ್ಠ
twitter.com/vijaykarnataka facebook.com/vijaykarnataka www.vijaykarnataka.com



ಇಶಾ ಫೌಂಡೇಶನ್‌ನ ಸ್ವಯಂ ಸೇವಾ ಕಾರ್ಯಕರ್ತರು ಮಣ್ಣಿನ ಸಂರಕ್ಷಣೆಗಾಗಿ ವಿಧಾನಸೌಧ ಎದುರು ಜಾಗೃತಿ ಜಾಥಾ ನಡೆಸಿದರು.

## ಕೊರೊನಾ ಮೀಟರ್

| ಸೋಂಕಿತರು | ಗುಣಮುಖ | ಸಕ್ರಿಯ | ಸಾವು |
|---|---|---|---|
| 17,88,895 | 17,69,636 | 2294 | 16,964 |

| ಜೂ 5 ಸೋಂಕಿತರು | ಗುಣಮುಖ | ಸಾವು |
|---|---|---|
| 291 | 142 | 01 |

## ಮೂವರು ಸುಲಿಗೆಕೋರರ ಸೆರೆ

**ಬೆಂಗಳೂರು:** ಕೊಲೆ ಪ್ರಕರಣದಲ್ಲಿ ಜೈಲು ಸೇರಿ ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ಸುಲಿಗೆ ಕೃತ್ಯಕ್ಕೆ ಇಳಿದ ಇಬ್ಬರು ಆರೋಪಿಗಳು ಸೇರಿ ಮೂವರನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ. ಮುನಿರಾಜು ಅಲಿಯಾಸ್ ಸಂಪ (21), ಮುನಿರಾಜು ಅಲಿಯಾಸ್ ಗುಂಡ (25) ಅಜಿತ್ ಕುಮಾರ್ (24) ಬಂಧಿತರು. ಮೇ 28ರಂದು ರಾತ್ರಿ ಯಲಹಂಕ ಸಮೀಪ ಕೇಬಲ್ ನೆಟ್‌ವರ್ಕ್ ಕೆಲಸ ಮಾಡುತ್ತಿದ್ದ ಸಿಬ್ಬಂದಿಗೆ ಚಾಕು ತೋರಿಸಿದ್ದ ದುಷ್ಕರ್ಮಿಗಳು, ಅವರ ಬಳಿ ಹಣ ಕಸಿದು ಪರಾರಿಯಾಗಿದ್ದರು. ಈ ಕುರಿತು ದಾಖಲಾದ ಪ್ರಕರಣದ ಅನ್ವಯ ತನಿಖೆ ನಡೆಸಿ ಆರೋಪಿಗಳಾದ ಮುನಿರಾಜು ಹಾಗೂ ಸಹಚರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಬಿಡುಗಡೆ ಬಳಿಕ ಮತ್ತೆ ಅಪರಾಧ ಕೃತ್ಯದಲ್ಲಿ ಭಾಗಿ**


ಆರೋಪಿಗಳಾದ ಮುನಿರಾಜು ಹಾಗೂ ಗುಂಡ ಕಳೆದ ವರ್ಷ ಚಿಕ್ಕಜಾಲದ ಎಂಬಾತನ ಕೊಲೆ ಕೃತ್ಯದಲ್ಲಿ ಭಾಗಿಯಾಗಿ ಜೈಲು ಸೇರಿದ್ದರು. ಜಾಮೀನಿನ ಮೇಲೆ ಹೊರಗಡೆ ಬಂದಿದ್ದ ಆರೋಪಿಗಳು, ಯಾವುದೇ ಕೆಲಸ ಮಾಡದೆ ದುಶ್ಚಟಗಳಿಗೆ ಹಣ ಹೊಂದಿಸಲು ಸುಲಿಗೆಗೆ ಇಳಿದಿದ್ದರು. ಸುಲಿಗೆ ಮಾಡಿದ ಮೊದಲ ಪ್ರಕರಣದಲ್ಲಿಯೇ ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

## ಕೆರೆಯಲ್ಲಿ ಈಜಲು ಹೋಗಿ ಇಬ್ಬರು ವಿದ್ಯಾರ್ಥಿಗಳ ಸಾವು


ಬೂದಿಗೆರೆ ಕೆರೆಯಲ್ಲಿ ಶವಕ್ಕಾಗಿ ಅಗ್ನಿಶಾಮಕ ಸಿಬ್ಬಂದಿ ಶೋಧ.

**ಬೆಂಗಳೂರು/ ಆನೇಕಲ್:** ಕೆರೆಯಲ್ಲಿ ಈಜಲು ಹೋಗಿ ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.
ಸ್ನೇಹಿತರ ಜತೆ ಕೆರೆಯಲ್ಲಿ ಈಜಲು ಹೋಗಿದ್ದ ಬಾಲಕ ಮೃತಪಟ್ಟ ಘಟನೆ ಆನೇಕಲ್ ತಾಲೂಕಿನ ಸಮಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಡ್ಡಹಳ್ಳಿಯಲ್ಲಿ ನಡೆದಿದೆ. ಪುರುಷೋತ್ತಮ (17) ಮೃತ ದುರ್ದೈವಿ. ಮುತ್ತಗಟ್ಟಿ ನಿವಾಸಿ ಕೃಷ್ಣಪ್ಪರ ಪುತ್ರನಾಗಿರುವ ಪುರುಷೋತ್ತಮ್, ವಿಶ್ವಚೇತನ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದ. ಭಾನುವಾರ ರಜೆ ಇದ್ದಕಾರಣ ಮೂರು ಜನ ಸ್ನೇಹಿತರೊಂದಿಗೆ ಈಜಲು ಹೋಗಿದ್ದ. ಈಜು ಬಾರದೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ.
ದೇವನಹಳ್ಳಿ ತಾಲೂಕಿನ ಬೂದಿಗೆರೆ ಕೆರೆಯಲ್ಲಿ ಶನಿವಾರ ಈಜಲು ಬಂದಿದ್ದ ನಾಲ್ವರು ವಿದ್ಯಾರ್ಥಿಗಳ ಪೈಕಿ ಓರ್ವ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಬೆಂಗಳೂರಿನ ಉದಯನಗರ ನಿವಾಸಿ ಬಿಪಿನ್ (18) ಮೃತ. ಈತ ವಾರಾಂತ್ಯ ರಜೆ ಕಳೆಯಲು ಸ್ನೇಹಿತರೊಂದಿಗೆ ಕೆರೆಯಲ್ಲಿ ಈಜಾಡಲು ಬಂದಿದ್ದು, ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

## ಬತ್ತಲಿಕೆ




ಹೆದ್ದಾರಿ ಪ್ರಾಧಿಕಾರದ ಸಭೆಯಲ್ಲಿ ಚರ್ಚೆ | ಅಧಿಕ ಭಾರ ಹೊರುವ ಮಲ್ಟಿ ಆಕ್ಸಲ್ ಟ್ರಕ್‌ಗಳಿಗಷ್ಟೇ ನಿರ್ಬಂಧ

# ಪೀಣ್ಯ ಫ್ಲೈಓವರ್‌ನಲ್ಲಿ ಬಸ್, ಟ್ರಕ್ ಸಂಚಾರ?


ಪೀಣ್ಯ ಫ್ಲೈಓವರ್‌ನಲ್ಲಿ ಕಬ್ಬಿಣದ ಕಂಬ ಅಳವಡಿಸಿ ಎತ್ತರದ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

**ಪ್ರಮುಖ ಸಂಪರ್ಕ ಮಾರ್ಗ**

ರಾಷ್ಟ್ರೀಯ ಹೆದ್ದಾರಿ 4 ಬೆಂಗಳೂರು ನಗರವನ್ನು ಹತ್ತಾರು ಜಿಲ್ಲೆಗಳೊಂದಿಗೆ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದೆ. ಹೀಗಾಗಿ ಬಸ್ಸುಗಳು, ಟ್ರಕ್‌ಗಳೂ ಸೇರಿದಂತೆ ನಿತ್ಯ ಸಾವಿರಾರು ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ಪೀಣ್ಯ ಕೈಗಾರಿಕಾ ಪ್ರದೇಶಕ್ಕೂ ಬರುವ ವಾಹನಗಳು ಇದೇ ಮಾರ್ಗವಾಗಿ ಸಂಚರಿಸುತ್ತವೆ. ಹೀಗಾಗಿ ಸದಾ ವಾಹನ ದಟ್ಟಣೆ ಇರುತ್ತದೆ. ಗೊರಗುಂಟೆಪಾಳ್ಯದಿಂದ ನಾಗಸಂದ್ರ ಪಾರ್ಲೆ-ಜಿ ಫ್ಯಾಕ್ಟರಿವರೆಗೆ 5 ಕಿಲೋ ಮೀಟರ್ ಫ್ಲೈಓವರ್‌ನಲ್ಲಿ ಬಸ್ ಸೇರಿದಂತೆ ಇತರೆ ವಾಹನಗಳು ಸಂಚರಿಸುವಂತಾದರೆ ಸರ್ವಿಸ್ ರಸ್ತೆಯಲ್ಲಿ ದಟ್ಟಣೆ ಕಡಿಮೆಯಾಗಲಿದೆ. ಫ್ಲೈಓವರ್ ಇಕ್ಕೆಲದ ಪ್ರದೇಶಗಳಿಗೆ ಸಂಚರಿಸುವವರಿಗೂ ಅನುಕೂಲವಾಗಲಿದೆ.


ಪೀಣ್ಯ ಫ್ಲೈಓವರ್ ಕೆಳಭಾಗದಲ್ಲಿ ವಾಹನ ದಟ್ಟಣೆ

■ **ಬೆಂಗಳೂರು/** ಮಹಾಲಕ್ಷ್ಮಿ ಲೇಬಿಟ್

ಬೆಂಗಳೂರು ನಗರವನ್ನು ಹಲವು ಜಿಲ್ಲೆಗಳೊಂದಿಗೆ ಬೆಸೆಯುವ ಪೀಣ್ಯ ಫ್ಲೈಓವರ್ (ಡಾ. ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ)ನಲ್ಲಿ ಮತ್ತೆ ಬಸ್, ಟ್ರಕ್ ಸಂಚಾರಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ.

ಫ್ಲೈಓವರ್ ಸದೃಢತೆ ಹಾಗೂ ವಾಹನ ಸಂಚಾರ ಕುರಿತು ತೀರ್ಮಾನ ಕೈಗೊಳ್ಳಲು ನೇಮಿಸಿರುವ ಪರಿಣತರ ಸಮಿತಿ ಸದಸ್ಯರು ಪಾಲ್ಗೊಂಡಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪರಿಣತರ ಸಮಿತಿಯ ಸದಸ್ಯರೂ ಆಗಿರುವ ಐಐಎಸ್‌ಸಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಚಂದ್ರ ಕಿಶನ್ ಜೆ.ಎಂ. ''ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಂಡಳಿ ಸದಸ್ಯರೊಂದಿಗೆ ಸಭೆಯಲ್ಲಿ ಇತ್ತೀಚೆಗೆ ಭಾಗಿಯಾಗಿದ್ದೆವು. ಬಸ್ಸುಗಳು, ಸಾಮಾನ್ಯ ಟ್ರಕ್‌ಗಳು ಫ್ಲೈಓವರ್ ಮೇಲೆ ಸಾಗಬಹುದು. ಇದೇ ವೇಳೆ ಗ್ರಾನೈಟ್ ಮತ್ತಿತರ ವಸ್ತುಗಳನ್ನು ಸೇರಿದಂತೆ ಅಧಿಕ ಭಾರ ಹೊರುವ ಮತ್ತು ಮಲ್ಟಿ ಆಕ್ಸೆಲ್ ಟ್ರಕ್‌ಗಳನ್ನು ನಿರ್ಬಂಧಿಸಬಹುದು ಎಂದು ನಾವು ಸಲಹೆ ನೀಡಿದ್ದೇನೆ. ಪರಿಣತರ ಸಮಿತಿ ಈ ಬಗ್ಗೆ ತೀರ್ಮಾನಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಶಿಫಾರಸು ಮಾಡಬೇಕಿದೆ,'' ಎಂದರು.

**ಟ್ರಾಫಿಕ್ ದಟ್ಟಣೆ ನೀಗುವ ನಿರೀಕ್ಷೆ**

''ಪರಿಣತರ ಸಮಿತಿ ಶಿಫಾರಸಿನ ಆಧಾರದ ಮೇಲೆ ಪ್ರಾಧಿಕಾರದ ಅಧಿಕಾರಿಗಳು ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ. ಮತ್ತೊಂದು ಮಾತುಕತೆ ನಂತರ ಈ ಬಗ್ಗೆ ಅಂತಿಮ ನಿರ್ಣಯಕ್ಕೆ ಬರಲಾಗುತ್ತದೆ,'' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2021ರ ಡಿಸೆಂಬರ್‌ನಲ್ಲಿ ಪಿಲ್ಲರ್‌ಗಳ ನಡುವೆ ಅಳವಡಿಸಿದ್ದ ರೋಪ್ ಸಡಿಲವಾಗಿ ಲೋಪ ಕಂಡು ಬಂದ ಹಿನ್ನೆಲೆಯಲ್ಲಿ ಕೆಲ ದಿನ ಫ್ಲೈಓವರ್‌ನಲ್ಲಿ ಎಲ್ಲ ರೀತಿಯ ವಾಹನ ಸಂಚಾರ ನಿಷೇಧಿಸಲಾಗಿತ್ತು. ದುರಸ್ತಿ ಬಳಿಕ ಲಘು ವಾಹನಗಳಿಗಷ್ಟೇ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಹೆಚ್ಚು ಎತ್ತರದ ವಾಹನ ತೆರಳದಂತೆ ಕಬ್ಬಿಣದ ಕಂಬಿ ಅಳವಡಿಸಲಾಗಿದೆ. ಹೀಗಾಗಿ ಬಸ್, ಟ್ರಕ್ ಸೇರಿದಂತೆ ಎಲ್ಲ ರೀತಿಯ ಭಾರ ವಾಹನಗಳು ಫ್ಲೈಓವರ್ ಕೆಳಗೆ ಸಂಚರಿಸುತ್ತಿವೆ. ಇದರಿಂದಾಗಿ ಬಸ್‌ಗಳ ಪ್ರಯಾಣ ಸಮಯ ಅಧಿಕವಾಗಿದೆ. ಇತರ ವಾಹನ ಸವಾರರು ಟ್ರಾಫಿಕ್ ದಟ್ಟಣೆ ಅನುಭವಿಸುವಂತಾಗಿದೆ.

> ನಿತ್ಯ ನಾಗಸಂದ್ರ-ಗೊರಗುಂಟೆಪಾಳ್ಯ ನಡುವೆ ಸುಮಾರು 60 ಸಾವಿರ ವಾಹನಗಳು ಸಂಚರಿಸುತ್ತವೆ. ಮೇಲ್ಸೇತುವೆ ಸಮಸ್ಯೆಯಿಂದಾಗಿನಿಂದ ಸಂಚಾರ ಪೊಲೀಸರು ಹೈರಾಣಾಗಿ ಹೋಗುತ್ತಿದ್ದಾರೆ. ಫ್ಲೈಓವರ್ ಮೇಲೆ ವಾಹನಗಳ ಸಂಚಾರ ಮುಕ್ತಗೊಳಿಸದ ಹೊರತು ಸಮಸ್ಯೆಗೆ ಪರಿಹಾರವೇ ಇಲ್ಲ.
>
> **- ಕುಲದೀಪ್ ಕುಮಾರ್ ಜೈನ್**
> ಉಪ ಪೊಲೀಸ್ ಆಯುಕ್ತ(ಸಂಚಾರ)

## ಪ್ರೀತಿಸಿ ವಿವಾಹವಾದ 4 ತಿಂಗಳಲ್ಲಿ ಟೆಕ್ಕಿ ಆತ್ಮಹತ್ಯೆ

■ **ವಿಕ ಸುದ್ದಿಲೋಕ** ಬೆಂಗಳೂರು

ಐಟಿ ಕಂಪನಿಯೊಂದರ ಉದ್ಯೋಗಿ ಯೊಬ್ಬರು ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುಬ್ರಹ್ಮಣ್ಯನಗರ ನಿವಾಸಿ ಡಿ.ಆರ್. ಅಂಬು (26) ಆತ್ಮಹತ್ಯೆ ಮಾಡಿಕೊಂಡವರು. ಅಂಬು ಸಾವಿಗೆ ಆಕೆಯ ಗಂಡ ಅಜಿನ್ ಹಾಗೂ ಕುಟುಂಬಸ್ಥರ ವರದಕ್ಷಿಣೆ ಕಿರುಕುಳ ಕಾರಣ ಎಂದು ಅಂಬು ಕುಟುಂಬಸ್ಥರು ಆರೋಪಿಸಿದ್ದಾರೆ.

ಚಿಕ್ಕಮಗಳೂರು ಕಡೂರು ತಾಲೂಕಿನ ಬೋಳಿಹಳ್ಳಿಯ ಅಂಬು ಎಂಜಿನಿಯರಿಂಗ್ ಪದವೀಧರೆ ಆಗಿದ್ದರು. ಖಾಸಗಿ ಬ್ಯಾಂಕ್ ಉದ್ಯೋಗಿ ಅಜಿನ್ ಅವರನ್ನು ಪ್ರೀತಿಸುತ್ತಿದ್ದ ಅವರು, ನಾಲ್ಕು ತಿಂಗಳ ಹಿಂದಷ್ಟೇ ವಿವಾಹ ಆಗಿದ್ದು, ಸುಬ್ರಹ್ಮಣ್ಯನಗರದ ಗಂಡನ ಮನೆಯಲ್ಲಿ ನೆಲೆಸಿದ್ದರು.

ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅಂಬು ಶನಿವಾರ ಎಂದಿನಂತೆ ಕೆಲಸಕ್ಕೆ ಹೋಗಿ ಮನೆಗೆ ಬಂದಿದ್ದರು. ತಮ್ಮ ಕೋಣೆಗೆ ಹೋಗಿದ್ದ ಅವರು ಹೊರಗಡೆ ಬಂದಿರಲಿಲ್ಲ. ಅವರ ಕೋಣೆಯಲ್ಲಿ ಮಲಗಿರಬಹುದು ಎಂದು ಅವರ ಅತ್ತೆ ಕೂಡ ಸುಮ್ಮನಿದ್ದರು. ಸಾಯಂಕಾಲ 6.30ರ ಸುಮಾರಿಗೆ ಮನೆಗೆ ಬಂದ ಪತಿ ಅಜಿನ್ ಬಾಗಿಲು ಬಡಿದರೂ ತೆರೆಯದಿದ್ದಾಗ ಅನುಮಾನ ಬಂದು ಬಾಗಿಲು ಒಡೆದು ನೋಡಿದಾಗ ಅಂಬು ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.



ವರದಕ್ಷಿಣೆ ಕಿರುಕುಳ ಆರೋಪ

**ತಾಯಿಯ ಆರೋಪ ಏನು?**

''ಮಗಳು ಅಂಬು, ಅಜಿನ್ ನನ್ನು ಪ್ರೀತಿಸಿ ಮದುವೆ ಮಾಡಿಕೊಂಡಿದ್ದಳು. ಆಕೆ, ಮದುವೆಯಾದ ದಿನದಿಂದಲೂ ಮಾನಸಿಕ ಕಿರುಕುಳ ನೀಡಲಾಗಿದೆ. ಜತೆಗೆ ವರದಕ್ಷಿಣೆ ಕಿರುಕುಳ ನೀಡಲಾಗಿದ್ದು, ಅದನ್ನು ಆಕೆ ಹೇಳಿಕೊಳ್ಳಲು ಸಾಧ್ಯವಾಗಿಲ್ಲ. ಅಂಬು ಸಾವಿಗೆ ಆಕೆಯ ಗಂಡ ಅಜಿನ್ ಹಾಗೂ ಕುಟುಂಬಸ್ಥರೇ ಕಾರಣ. ಹೀಗಾಗಿ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಅಂಬು ಸಾವಿನ ಬಗ್ಗೆ ಅನುಮಾನವಿದೆ'' ಎಂದೂ ಅಂಬು ತಾಯಿ ಹೇಮಾವತಿ ಆರೋಪಿಸಿದ್ದಾರೆ.

**ಡೆತ್‌ನೋಟ್‌ನಲ್ಲಿ ಏನಿದೆ?:** ಅಂಬು ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದಿಟ್ಟಿರುವುದು ಕೋಣೆಯಲ್ಲಿ ಪತ್ತೆಯಾಗಿದೆ. ''ನನ್ನ ಸಾವಿಗೆ ನಾನೇ ಕಾರಣ, ನಾಳೆಯ ದಿನವನ್ನು ನೋಡಲು ಕಾಯುತ್ತಿದ್ದರೂ ಕೆಲಸ ಮಾಡುತ್ತಿದ್ದೆ. ನನ್ನ ನೋವನ್ನು ಯಾರೊಂದಿಗೂ ಹಂಚಿಕೊಳ್ಳಲು ಸಾಧ್ಯವಾಗಿಲ್ಲ. ನಿನ್ನೊಂದಿಗೆ ಹೇಳಿಕೊಳ್ಳಲು ಆಗಲಿಲ್ಲ'' ಎಂದು ಗಂಡ ಅಜಿನ್‌ಗೆ ಹೇಳಿದ್ದಾರೆ. ''ಅಮ್ಮಾ ಐ ಲವ್ ಯೂ' ಹಠ ಮಾಡಿಕೊಂಡು ಇಲ್ಲಿಗೆ ಬಂದೆ ಈಗ ಹೋಗುತ್ತಿದ್ದೇನೆ'' ಎಂದು ಡೆತ್‌ನೋಟ್‌ನಲ್ಲಿ ಬರೆದಿರುವುದು ಕಂಡು ಬಂದಿದೆ. ಆರೋಗ್ಯ ಸಮಸ್ಯೆಯಿಂದ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ ಎಂದು ಪೊಲೀಸರು ಹೇಳಿದರು.

## ವಿಶ್ವೇಶ್ವರಯ್ಯ ಟರ್ಮಿನಲ್ ಇಂದಿನಿಂದ ಕಾರ್ಯಾಚರಣೆ



■ **ವಿಕ ಸುದ್ದಿಲೋಕ** ಬೆಂಗಳೂರು

ಉದ್ಘಾಟನೆಗೆ ಸಿದ್ಧಗೊಂಡು 14 ತಿಂಗಳಿಂದ ಕಾದಿದ್ದ ಬೈಯಪ್ಪನಹಳ್ಳಿ ಬಳಿಯ ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಜೂ.6ರಿಂದ ಕಾರ್ಯಾರಂಭಿಸಲಿದೆ.

**ಮೂರು ರೈಲು ಸೇವೆ ಶುರು**

ಮೊದಲ ಹಂತದಲ್ಲಿ ಈ ನಿಲ್ದಾಣದಿಂದ ಮೂರು ರೈಲು ಸೇವೆ ಆರಂಭವಾಗಲಿದೆ. ಬಾಣಸವಾಡಿ-ಎರ್ನಾಕುಲಂ ಎಕ್ಸ್‌ಪ್ರೆಸ್ ರೈಲು(ಸಂಖ್ಯೆ 12684), ಬಾಣಸವಾಡಿ-ತಿರುವನಂತಪುರ (16320), ಬಾಣಸವಾಡಿ-ಪಟ್ನಾ (22354) ರೈಲು ಸೇವೆ ಆರಂಭಗೊಳ್ಳಲಿದೆ. ಇವುಗಳು ವಾರದಲ್ಲಿ ಮೂರು ದಿನ ಸಂಚರಿಸಲಿವೆ.

ವಿಮಾನ ನಿಲ್ದಾಣ ಮಾದರಿಯ ರೈಲು ನಿಲ್ದಾಣ ಕಾಮಗಾರಿ ಪೂರ್ಣಗೊಂಡರೂ ಸುದೀರ್ಘ ಕಾಲ ಕಾರ್ಯಾಚರಣೆ ಆರಂಭವಾಗಿರಲಿಲ್ಲ.

**ದೇಶದ ಮೊದಲ ಎಸಿ ರೈಲು ನಿಲ್ದಾಣ:** ಟರ್ಮಿನಲ್ ಅನ್ನು 300 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, 4,200 ಚದರ ಮೀಟರ್ ವಿಸ್ತೀರ್ಣ ಹೊಂದಿದೆ. ಪ್ರತಿನಿತ್ಯ 50,000 ಮಂದಿ ಪ್ರಯಾಣಿಕರನ್ನು ನಿರ್ವಹಿಸಬಹುದಾಗಿದೆ. ಭಾರತದ ಮೊದಲ ಕೇಂದ್ರೀಯ ಹವಾನಿಯಂತ್ರಿತ ರೈಲು ಟರ್ಮಿನಲ್ ಎಂಬ ಹೆಗ್ಗಳಿಕೆಯನ್ನು ಈ ನಿಲ್ದಾಣ ಹೊಂದಿದೆ.

## ತಿಂಗಳಿಗೂ ಹೆಚ್ಚು ಕಾಲ ಮೈಕ್ ಬಳಕೆಗೆ 450 ರೂ. ಶುಲ್ಕ ನಿಗದಿ

■ **ವಿಕ ಸುದ್ದಿಲೋಕ** ಬೆಂಗಳೂರು



ಒಂದು ತಿಂಗಳ ಅವಧಿಗೂ ಮೇಲ್ಪಟ್ಟು ಧ್ವನಿವರ್ಧಕಗಳ ಬಳಕೆಗೆ ನೀಡಲಾಗುವ ಪರವಾನಗಿ ಶುಲ್ಕ 450 ರೂ.ಗಳಿಗೆ ನಿಗದಿಪಡಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಈ ಹಿಂದೆ ಕೇವಲ ಒಂದು ತಿಂಗಳ ಅವಧಿಗೆ ಶುಲ್ಕ ವಿಧಿಸಿ ವಸೂಲಿ ಮಾಡುವ ಅವಕಾಶವಿತ್ತು. ಆದರೆ ಕರ್ನಾಟಕ ಪೊಲೀಸ್ ನಿಯಮಾವಳಿ-2000ರ ಅನ್ವಯ ಎರಡು ವರ್ಷಗಳ ಅವಧಿಯವರೆಗೆ ಧ್ವನಿವರ್ಧಕಗಳ ಬಳಕೆಗೆ ಅವಕಾಶ ಕಲ್ಪಿಸಿ ಸರಕಾರ ಇತ್ತೀಚೆಗೆ ಸರಕಾರ ಸುತ್ತೋಲೆ ಹೊರಡಿಸಿತ್ತು. ಈ ಹಿನ್ನೆಲೆಯಲ್ಲಿ ಒಂದು ತಿಂಗಳ ಅವಧಿಗೂ ಹೆಚ್ಚಿನ ಕಾಲದ ಧ್ವನಿವರ್ಧಕಗಳ ಬಳಕೆಗೂ 450 ರೂ. ಶುಲ್ಕ ನಿಗದಿಪಡಿಸಲಾಗಿದೆ ಎಂದು ಒಳಾಡಳಿತ ಇಲಾಖೆ ಹೊರಡಿಸಿರುವ ಆದೇಶದಲ್ಲಿ ವಿವರಿಸಲಾಗಿದೆ.

## ಪಾಲಿಕೆ ಚುನಾವಣೆ ಬಿಜೆಪಿ ಉಸ್ತುವಾರಿ ಸಭೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿ ಚುನಾವಣೆ ಘೋಷಣೆ ನಿರೀಕ್ಷೆ ಹಿನ್ನೆಲೆಯಲ್ಲಿ ಬಿಜೆಪಿ ಬೆಂಗಳೂರು ನಗರ ಜಿಲ್ಲಾ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳೊಂದಿಗೆ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸಭೆ ನಡೆಸಿದರು.

ರಾಜ್ಯಸಭೆ ಚುನಾವಣೆ ಕಾರ್ಯತಂತ್ರ, ಪ್ರಧಾನಿ ನರೇಂದ್ರ ಮೋದಿ ಸರಕಾರದ 8 ವರ್ಷದ ಸಾಧನೆಯನ್ನು ಜನರಿಗೆ ತಲುಪಿಸುವ ವಿಚಾರ ಸೇರಿದಂತೆ ಸಂಘಟನೆ ಸಂಬಂಧ ಭಾನುವಾರ ದಿನವಿಡೀ ಜಗನ್ನಾಥ ಭವನದಲ್ಲಿ ಅರುಣ್ ಸಿಂಗ್ ಸಭೆ ನಡೆಸಿದರು.

**ಸಾಮಾಜಿಕ ಜಾಲತಾಣ ಸಮರ್ಪಕ ಬಳಕೆಗೆ ಸೂಚನೆ**

ಬಿಬಿಎಂಪಿ ಚುನಾವಣೆ ಯಾವುದೇ ಕ್ಷಣದಲ್ಲಿ ಎದುರಾಗಬಹುದು. ಅದಕ್ಕೆ ಸಜ್ಜಾಗಿರಬೇಕು. ಜಿಲ್ಲಾ, ತಾಲೂಕು ಪಂಚಾಯಿತಿ ಚುನಾವಣೆಗೂ ತಯಾರಿ ಮಾಡಿಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಪಕ್ಷದ ಸಂಘಟನೆಗೆ ವಿಶೇಷ ಒತ್ತು ಕೊಡಬೇಕು ಎಂದು ಸೂಚಿಸಿದರು.

ಕೇಂದ್ರ ಮತ್ತು ರಾಜ್ಯ ಸರಕಾರದ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು. ರಾಜ್ಯಾದ್ಯಂತ ನಡೆಯುವ ಈ ಅಭಿಯಾನದಲ್ಲಿ ಬೆಂಗಳೂರಿನ ಬಗ್ಗೆಯೂ ಹೆಚ್ಚು ಗಮನ ಹರಿಸಬೇಕು. ಕಾಸ್ಮೋಪಾಲಿಟನ್ ಸಿಟಿ ಆಗಿರುವುದರಿಂದ ಜನರು ಯಾವಾಗಲೂ ಕಚೇರಿ, ಇನ್ನಿತರ ಕೆಲಸದ ಒತ್ತಡದಲ್ಲಿರುತ್ತಾರೆ. ಈ ನಡುವೆಯೂ ಜನಸಂಪರ್ಕ ಮಾಡಬೇಕು. ಜತೆಗೆ ಸಾಮಾಜಿಕ ಜಾಲ ತಾಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಅರುಣ್ ಸಿಂಗ್ ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ.

## ಕೋವಿಡ್ ಕೇಸ್ ಹೆಚ್ಚಳ, ವೃದ್ಧೆ ಬಲಿ

**ಬೆಂಗಳೂರು;** ಕಳೆದ ಎರಡು-ಮೂರು ದಿನಗಳಿಂದ ರಾಜ್ಯಾದ್ಯಂತ ಕೊರೊನಾ ಸೋಂಕಿತರ ಪ್ರಮಾಣ ಹೆಚ್ಚಳವಾಗುತ್ತಿದ್ದು, ಮೂರು ತಿಂಗಳ ಬಳಿಕ ರಾಜ್ಯದಲ್ಲಿ ಮೊದಲ ಬಾರಿಗೆ 301 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ.

ಭಾನುವಾರ 301 ಮಂದಿಯಲ್ಲಿ ಸೋಂಕು ಖಚಿತವಾಗಿದೆ. 21,113 ಮಂದಿ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದು, ಶೇ. 1.40 ಪಾಸಿಟಿವಿಟಿ ದರ ದಾಖಲಾಗಿದೆ. 146 ಮಂದಿ ಚೇತರಿಸಿಕೊಂಡಿದ್ದಾರೆ. ಬೆಂಗಳೂರು ನಗರದಲ್ಲಿ 72 ವರ್ಷದ ವೃದ್ಧೆ ಮೃತಪಟ್ಟಿದ್ದಾರೆ.

ಮಾರ್ಚ್ 3 ರಂದು 382 ಮಂದಿಯಲ್ಲಿ ಸೋಂಕು ದೃಢಪಟ್ಟ 95 ದಿನಗಳ ಬಳಿಕ ಸೋಂಕಿತರ ಸಂಖ್ಯೆ ತ್ರಿಶತಕ ದಾಟಿದೆ. ಇದರಲ್ಲಿ ಬೆಂಗಳೂರು ನಗರವೊಂದರಲ್ಲೇ 291 ಮಂದಿ ಸೋಂಕಿತರು ಪತ್ತೆಯಾಗಿದ್ದಾರೆ. ರಾಜ್ಯದಲ್ಲಿ ಈವರೆಗೆ ಒಟ್ಟು 39.53 ಲಕ್ಷ ಮಂದಿಯಲ್ಲಿ ಸೋಂಕು ಪತ್ತೆಯಾಗಿದ್ದು 39.10 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

## ಕ್ಷುಲ್ಲಕ ಕಾರಣಕ್ಕೆ ಯುವಕನ ಕೊಲೆ

**ಬೆಂಗಳೂರು :** ಕುಡಿತದ ಅಮಲಿನಲ್ಲಿ ಯುವಕರಿಬ್ಬರ ನಡುವೆ ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಜಗಳ ಒಬ್ಬನ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಪುಲಿಕೇಶಿನಗರದಲ್ಲಿ ನಡೆದಿದೆ.

ಕೋಳಿ ಫಾರಂ ಕಾಲೋನಿ ನಿವಾಸಿ ಪ್ರಶಾಂತ್ (24) ಕೊಲೆಯಾದವರು. ಆತನನ್ನು ಕೊಲೆಗೈದ ಆರೋಪಿ ಅರ್ಜುನ್ ಎಂಬಾತ ಪರಾರಿಯಾಗಿದ್ದು, ಬಂಧನಕ್ಕೆ ಪೊಲೀಸರು ಕ್ರಮವಹಿಸಿದ್ದಾರೆ.

ಪ್ರಶಾಂತ್ ಹಾಗೂ ಅರ್ಜುನ್ ಅಕ್ಕ-ಪಕ್ಕದ ಮನೆಯ ನಿವಾಸಿಗಳಾಗಿದ್ದರು. ಭಾನುವಾರ ಸಂಜೆ ಮದ್ಯಪಾನ ಮಾಡಿಕೊಂಡು ಬಂದಿದ್ದ ಪ್ರಶಾಂತ್, ಮೀನು ಮಾರುತ್ತಿದ್ದ ಯುವಕನನ್ನು ಬೆದರಿಸುತ್ತಿದ್ದ. ಇದೇ ವೇಳೆ ಮೀನು ಖರೀದಿ ಮಾಡಲು ಬಂದಿದ್ದ ಅರ್ಜುನ್ ''ಏಕೆ ಮೀನು ಮಾರುವ ಹುಡುಗನಿಗೆ ಬೆದರಿಸುತ್ತಿದ್ದೀ'' ಎಂದು ಪ್ರಶ್ನಿಸಿದ್ದಾನೆ.

ಇದೇ ವಿಚಾರಕ್ಕೆ ಇಬ್ಬರ ನಡುವೆ ಜಗಳ ಆರಂಭವಾಗಿ ಅರ್ಜುನ್ ತನ್ನ ಬಳಿಯಿದ್ದ ಚಾಕುವಿನಿಂದ ಪ್ರಶಾಂತ್ ಎದೆಗೆ ಇರಿದು ಪರಾರಿಯಾಗಿದ್ದಾನೆ. ಚಾಕು ಇರಿತದಿಂದ ತೀವ್ರ ರಕ್ತಸ್ರಾವದಿಂದ ಪ್ರಶಾಂತ್ ಮೃತಪಟ್ಟಿದ್ದಾನೆ. ಪುಲಿಕೇಶಿನಗರ ಪೊಲೀಸರು, ಆರೋಪಿ ಅರ್ಜುನ್‌ಗಾಗಿ ಶೋಧ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

## ಕೆರೆ ಉಳಿಸಲು ನಾಗರಿಕರ ಪಟ್ಟು


ಪಟ್ಟಂದೂರು ಕೆರೆ ಪಕ್ಕ ಬಿಬಿಎಂಪಿಯು ರಸ್ತೆ ನಿರ್ಮಾಣ ಮಾಡುವುದನ್ನು ವಿರೋಧಿಸಿ ನಾಗರಿಕರು ಪ್ರತಿಭಟನೆ ನಡೆಸಿದರು.

■ **ವಿಕ ಸುದ್ದಿಲೋಕ** ಮಹದೇವಪುರ

ಬಫರ್‌ಜೋನ್ ನಿಯಮ ಉಲ್ಲಂಘಿಸಿ ಪಟ್ಟಂದೂರು ಕೆರೆ ಪಕ್ಕ ಬಿಬಿಎಂಪಿಯು ರಸ್ತೆ ನಿರ್ಮಾಣ ಮಾಡುವುದನ್ನು ವಿರೋಧಿಸಿ ನಾಗರಿಕರು ಕೆರೆ ಪಕ್ಕ ಜಮಾಯಿಸಿ ಭಾನುವಾರ ಪ್ರತಿಭಟನೆ ನಡೆಸಿದರು.

'ನಮ್ಮ ವೈಟ್‌ಫೀಲ್ಡ್' ನೇತೃತ್ವದಲ್ಲಿ ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ನಾನಾ ರೀತಿಯ ಪ್ರತಿಭಟನೆಗೆ ಕರೆ ಕೊಡಲಾಗಿತ್ತು. ಪರಿಸರವಾದಿಗಳು, ಕೆರೆ ಸಂರಕ್ಷಕರು ನಾನಾ ಕಡೆಗಳಿಂದ ಆಗಮಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಟ್ವಿಟರ್‌ನಲ್ಲಿ ಟ್ವೀಟ್ ಮಾಡುವ ಮೂಲಕವೂ ಪ್ರತಿಭಟನೆ ನಡೆಸಲಾಯಿತು.

ಪಟ್ಟಂದೂರು ಕೆರೆಯಲ್ಲಿ ಬಿಬಿಎಂಪಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಬಿಡಬೇಕು ಎಂದು ಇತ್ತೀಚೆಗಷ್ಟೇ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ನೋಟಿಸ್ ನೀಡಿದೆ.

2017 ಮತ್ತು 2018ರಲ್ಲೂ ಪ್ರತಿಭಟನೆ ನಡೆಸಲಾಗಿತ್ತು. ಸಾವಿರಾರು ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**PVC ಪೈಪ್‌ಗೆ ಉತ್ತಮ ಪರ್ಯಾಯ**

NETAFIM™
GROW MORE WITH LESS

ಇದನ್ನು ಸುಲಭವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬಹುದು.
ಹೆಚ್ಚು ಬಾಳಿಕೆ ಬರುತ್ತದೆ. ಕಡಿಮೆ ನಿರ್ವಹಣೆಯ ಅಗತ್ಯವಿದೆ.




ಉಪಯೋಗಗಳು :
ಡ್ರಿಪ್ ನ ಮೇನ್/
ಸಬ್ ಮೇನ್ ಲೈನ್,
ಮಿನಿ ಸ್ಪ್ರಿಂಕ್ಲರ್,
ಓವರ್ ಹೆಡ್ ಸ್ಪ್ರಿಂಕ್ಲರ್,
ನೀರು ಸಾಗಣೆ

ಕರ್ನಾಟಕದಾದ್ಯಂತ ವಿತರಕರು ಬೇಕಾಗಿದ್ದಾರೆ
ಈ ಸಂಖ್ಯೆಗೆ ಕರೆ ನೀಡಿ - 809 559 0424
ಭೇಟಿ ನೀಡಿ - www.netafimindia.com

## ಮಾವು ಮೇಳ ಎರಡು ದಿನ ವಿಸ್ತರಣೆ



ನೈಸರ್ಗಿಕ ಮಾವು ಮೇಳದಲ್ಲಿ ಪಾಲ್ಗೊಂಡ ರೈತರಿಗೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ನೆನಪಿನ ಕಾಣಿಕೆ ನೀಡಿದರು.

**ಬೆಂಗಳೂರು:** ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಷ್ಠಾನವು ಮಲ್ಲೇಶ್ವರಂ ಸರಕಾರಿ ಶಾಲಾ ಮೈದಾನದಲ್ಲಿ ಏರ್ಪಡಿಸಿರುವ ನೈಸರ್ಗಿಕ (ಸಾವಯವ) ಮಾವು ಮೇಳವನ್ನು ಸಾರ್ವಜನಿಕರ ಒತ್ತಾಯದ ಮೇರೆಗೆ ಇನ್ನೆರಡು ದಿನ (ಮಂಗಳವಾರದವರೆಗೆ) ವಿಸ್ತರಿಸಲಾಗಿದೆ. ಭಾನುವಾರ ಮೇಳಕ್ಕೆ ಭೇಟಿ ನೀಡಿದ್ದ ಸಚಿವ ಡಾ. ಅಶ್ವತ್ಥನಾರಾಯಣ ಮಾತನಾಡಿ, ''ಮೂರು ದಿನಗಳಲ್ಲಿ ಮೇಳದಲ್ಲಿ ಸುಮಾರು 6 ಟನ್ ಸಾವಯವ ಮಾವು ಮಾರಾಟವಾಗಿದ್ದು, ಅಂದಾಜು 6 ಲಕ್ಷ ರೂ. ವಹಿವಾಟು ನಡೆದಿದೆ. ಆಧುನಿಕ ಬದುಕಿನಲ್ಲಿ ಒತ್ತಡ ಮತ್ತು ಆತಂಕ ಹಾಗೂ ಜೀವನಶೈಲಿಯಿಂದಾಗಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಜತೆಗೆ ಅಸಹಜ ಆಹಾರ ಪದ್ಧತಿಯೂ ಇದಕ್ಕೆ ಕಾರಣವಾಗುತ್ತಿದೆ. ಆದ್ದರಿಂದ ಮೊದಲಿನಿಂದಲೇ ಸಾವಯವ ಆಹಾರಾಭ್ಯಾಸವನ್ನು ಒಂದು ಶಿಸ್ತಾಗಿ ಪಾಲಿಸಬೇಕು,'' ಎಂದು ಸಚಿವರು ಸಲಹೆ ಮಾಡಿದರು. ಈ ಸಂದರ್ಭದಲ್ಲಿ ಅವರು, ಮಳಿಗೆ ಹಾಕಿರುವ 20 ರೈತರಿಗೆ ನೆನಪಿನ ಕಾಣಿಕೆ ವಿತರಿಸಿದರು. ಬಿಜೆಪಿ ಮಲ್ಲೇಶ್ವರಂ ಮಂಡಲದ ಅಧ್ಯಕ್ಷೆ ಕಾವೇರಿ ಕೇದಾರನಾಥ ಮತ್ತಿತರರು ಇದ್ದರು.

## ಜೆಎಸ್ಎಸ್ ಕಾಲೇಜಿಗೆ ಪ್ರಥಮ ಬಹುಮಾನ

**ಬೆಂವಿವಿಯಿಂದ ಅಣಕು ನ್ಯಾಯಾಲಯ ಸ್ಪರ್ಧೆ**

**ಬೆಂಗಳೂರು :** ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ಕೇಂದ್ರ ಆಯೋಜಿಸಿದ್ದ 26ನೇ ರಾಷ್ಟ್ರ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್ಎಸ್ ಕಾಲೇಜು ಪ್ರಥಮ ಬಹುಮಾನ ಪಡೆದಿದೆ. ಪ್ರಶಸ್ತಿಯು ಪ್ರಶಸ್ತಿ ಫಲಕದ ಜತೆಗೆ 15 ಸಾವಿರ ರೂ.ನಗದು ಬಹುಮಾನ ಹೊಂದಿದೆ. ಭೋಪಾಲ್‌ನ ಎನ್ಎಲ್ಐಯು ದ್ವಿತೀಯ ಸ್ಥಾನ ಮತ್ತು 10 ಸಾವಿರ ರೂ.ನಗದು ಬಹುಮಾನ ಪಡೆದಿದೆ. ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಹೈಕೋರ್ಟ್ ನ್ಯಾಯಮೂರ್ತಿ ಡಾ.ಎಚ್.ಬಿ.ಪ್ರಭಾಕರ ಶಾಸ್ತ್ರಿ, ನ್ಯಾ. ಎಸ್. ಆರ್.ಕೃಷ್ಣಕುಮಾರ್, ಬೆಂವಿವಿ ಕುಲಪತಿ ಡಾ.ಕೆ.ಆರ್. ವೇಣುಗೋಪಾಲ್, ಬೆಂವಿವಿ ಕಾನೂನು ಕಾಲೇಜು ಪ್ರಾಂಶುಪಾಲ ಡಾ.ಸುರೇಶ್ ನಾಡಗೌಡರ್ ಭಾಗವಹಿಸಿದ್ದರು. ಬೆಂವಿವಿ ಕಾನೂನು ಕಾಲೇಜು ಮತ್ತು ಅಧ್ಯಯನ ಕೇಂದ್ರದ ಹಳೇ ವಿದ್ಯಾರ್ಥಿಗಳ ಸಂಘ ನಗದು ಬಹುಮಾನದ ಪ್ರಾಯೋಜಕತ್ವವನ್ನು ವಹಿಸಿತ್ತು.

## ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ

**ಯಲಹಂಕ:** ಕೃಷಿ ಇಲಾಖೆಯು 2022-23 ಸಾಲಿನಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದ ಅರ್ಹ ರೈತರಿಂದ ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಿದೆ. ಪ್ರಸಕ್ತ ಸಾಲಿನಲ್ಲಿ ಮಹಿಳೆಯರಿಗೂ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡಲು ಸರಕಾರವು ಅನುಮೋದನೆ ನೀಡಿದೆ. ರೈತರು ಮತ್ತು ರೈತ ಮಹಿಳೆಯರು ಅರ್ಜಿಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ಪಡೆದು ಕೃಷಿ ಪಂಡಿತ ಪ್ರಶಸ್ತಿಗೆ ಜುಲೈ 22 ರೊಳಗಾಗಿ ಮತ್ತು ಕೃಷಿ ಪ್ರಶಸ್ತಿಗೆ ಆ.31ರೊಳಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಬೆಂಗಳೂರು ಉತ್ತರ ತಾಲೂಕು ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರದಲ್ಲಿ ಸಲ್ಲಿಸಬಹುದಾಗಿದೆ ಎಂದು ತಾಲೂಕು ಸಹಾಯಕ ಕೃಷಿ ನಿರ್ದೇಶಕರಾದ ಜಿ.ಟಿ ವಿನೋದಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿಜಯ ಕರ್ನಾಟಕ ವಿಕ English ಕಲಿ ಭಾಗ-936

ಪಿ.ಆರ್. ಆಚಾರ್ಯ, 8431867899, https/pracharya.in

ಪ್ರಿಯರೆ,
ನೀವು ನಿತ್ಯ ನೋಡಿದಂತೆ ಪ್ರತಿ ಕ್ರಿಯೆಯನ್ನು ಮನಸ್ಸಿನಲ್ಲಿ ಅನುವಾದಿಸುವಾಗ 'ನಾನು' ಕರ್ತೃವಾಗಿರುವ ವಾಕ್ಯಗಳನ್ನು ರಚಿಸಬೇಕು. ಅದನ್ನು ಅಭ್ಯಾಸ ಮಾಡಿದರೆ ವಾಕ್ಯಗಳನ್ನು ಅನುವಾದಿಸಲು ಯತ್ನಿಸಬೇಕು. ನೀವು ಸುಮ್ಮನೆ ಕುಳಿತಿದ್ದರೆ, ನೀವು ಮತ್ತು ನಿಮ್ಮ ಸುತ್ತಲಿನ ಜನರು ನಡೆಸುತ್ತಿರುವ ಹಾಗೂ ಮಾಡಿದ ಕ್ರಿಯೆಗಳನ್ನು ಮತ್ತು ಪ್ರಶ್ನಾರ್ಥಕವಾದ ವಾಕ್ಯಗಳನ್ನೂ ರಚಿಸಿ ಅನುವಾದಿಸುವುದು ತುಂಬಾ ಒಳ್ಳೆಯದು. ಕೆಳಗಿನ ವಾಕ್ಯಗಳನ್ನು ಅಭ್ಯಸಿಸಿ.
ನಾನು ಇವತ್ತು ಯಾವ ಅಂಗಿ ಧರಿಸಲಿ? which shirt shall I wear today?
ನಾನು ಬಿಳಿ ಟಿ-ಶರ್ಟ್ ಧರಿಸುತ್ತೇನೆ. I wear white T-shirt today.
ನನ್ನ ಪ್ಯಾಂಟ್ ಎಲ್ಲಿದೆ? Where is my pant?
ಅದು ಬೀರುವಿನಲ್ಲಿದೆ. It is there in the almairah.
ನಾನು ಈಗ ಸ್ನಾನ ಮಾಡಲು ಬಯಸುತ್ತೇನೆ. I want to take a shower now.
ನಾನೀಗ ಸ್ನಾನದ ಮನೆಗೆ ಹೋಗುತ್ತೇನೆ. I go to bath room now.
ಇದು ನಮ್ಮ ಸ್ನಾನದ ಮನೆ. This is our bathroom.
ಇದು ಯಾವ ಸಾಬೂನು? Which soap is this?
ನನ್ನ ಟವೆಲು ಹಗ್ಗದ ಮೇಲಿದೆ. My towel is there on the clothesline.
ನಾನು ನನ್ನ ಬಟ್ಟೆ ಕಳಚುತ್ತಿದ್ದೇನೆ. I am removing my clothes.
ನಾನು ತಂಬಿಗೆಯಿಂದ ನೀರು ತೆಗೆಯುತ್ತಿದ್ದೇನೆ. I am taking water by the tumbler.
ನೀರು ತುಂಬಾ ಬಿಸಿಯಾಗಿದೆ. Water is very hot.
ನಾನು ತಲೆಯಮೇಲೆ ನೀರು ಹೊಯ್ದುಕೊಳ್ಳುತ್ತಿದ್ದೇನೆ. I am pouring water on my head.
(ಮುಂದುವರಿಯುವುದು)

### ನಗರದ ನಾನಾ ಕಡೆ ಪರಿಸರ ದಿನಾಚರಣೆ | ಪಾಲಿಕೆಯಿಂದ ಉಚಿತ ಸಸಿ ವಿತರಣೆ

# ಗಿಡ ನೆಟ್ಟು ಹಸಿರು ಉಳಿಸುವ ಪಣ

■ ವಿಕ ಸುದ್ದಿಲೋಕ ಬೆಂಗಳೂರು

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಹಲವೆಡೆ ಸರಕಾರಿ ಇಲಾಖೆಗಳು, ಸಂಘ ಸಂಸ್ಥೆಗಳು, ನಾಗರಿಕರ ನೇತೃತ್ವದಲ್ಲಿ ಭಾನುವಾರ ಗಿಡಗಳನ್ನು ನೆಟ್ಟು ನೀರೆರೆಯಲಾಯಿತು. ಜತೆಗೆ ಹಸಿರನ್ನು ಕಾಪಾಡುವ ಪಣ ತೊಡಲಾಯಿತು.

**ಬಿಬಿಎಂಪಿ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಭಾನುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಸಸಿ ನೆಡುವ ಮೂಲಕ 'ವಿಶ್ವ ಪರಿಸರ ದಿನಾಚರಣೆ'ಗೆ ಚಾಲನೆ ನೀಡಿದರು.

**ಹಲವೆಡೆ ಜಾಗೃತಿ ಜಾಥಾ**

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ''ಪರಿಸರ ದಿನಾಚರಣೆ ಅಂಗವಾಗಿ ಒಂದು ವಾರ ನಗರದ ನಾಗರಿಕರಿಗೆ ಉಚಿತವಾಗಿ ಸಸಿ ವಿತರಿಸುತ್ತಿದ್ದೇವೆ'' ಎಂದು ಹೇಳಿದರು.

ಪಾಲಿಕೆಯ ಅರಣ್ಯ ವಿಭಾಗದ ನಾನಾ ವಲಯಗಳ ವ್ಯಾಪ್ತಿಯಲ್ಲಿರುವ ಸಸ್ಯ ಕ್ಷೇತ್ರಗಳಲ್ಲಿ ಉಚಿತವಾಗಿ ಸಸಿ ವಿತರಿಸಲಾಗುವುದು. ಪಾಲಿಕೆ ಕೇಂದ್ರ ಕಚೇರಿ, ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ವಿಶೇಷ ಕೌಂಟರ್ ಮೂಲಕ ಪ್ರತಿನಿತ್ಯ ವಿವಿಧ ಜಾತಿಯ ಸಸಿಗಳನ್ನು ವಿತರಿಸಲಾಗುವುದು ಎಂದು ಬಿಬಿಎಂಪಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.



ಸ್ವಾತಂತ್ರ್ಯ ಉದ್ಯಾನದಲ್ಲಿ ಗಿಡ ನೆಟ್ಟು ನೀರು ಎರೆಯಲಾಯಿತು.



ಹೊಸ ನಗರದ ಎಂ.ಆರ್. ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ನಡೆದ ಪರಿಸರ ದಿನಾಚರಣೆಯಲ್ಲಿ ಸಂಸ್ಥೆ ಅಧ್ಯಕ್ಷೆ ಎಲಿಜಬೆತ್ ದೇವಿ ಮತ್ತು ನಿರ್ದೇಶಕ ವಿನೋದ್ ರಾಥೋಡ್ ಸಸಿ ನೆಟ್ಟರು.

**ಸಸಿನೆಟ್ಟ ರಾಜ್ಯಪಾಲ**

ರಾಜಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ರುದ್ರಾಕ್ಷಿ ಸಸಿ ನೆಟ್ಟು ನೀರೆರೆದರು. ರುದ್ರಾಕ್ಷಿ ಗಿಡ, ಚಂಪಕ ಗಿಡ ಹಾಗೂ ಸುಗಂಧ ಪರಿಮಳ ಬೀರುವ ಸಸಿಯನ್ನು ನೆಟ್ಟರು. ಈ ವೇಳೆ ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮತ್ತಿತರರು ಹಾಜರಿದ್ದರು.

**ಕೆಎಸ್ಆರ್‌ಟಿಸಿ:** ಕರ್ನಾಟಕ ರಾಜ್ಯ ಸಾರಿಗೆ ನಿಗಮ ವ್ಯಾಪ್ತಿಯ ಬಸ್ ನಿಲ್ದಾಣಗಳ ಘಟಕಗಳು, ಪ್ರಾದೇಶಿಕ ಕಾರ್ಯಾಗಾರಗಳು ಹಾಗೂ ತರಬೇತಿ ಕೇಂದ್ರಗಳು ಮತ್ತು ನಗರದ ಕೇಂದ್ರ ಕಚೇರಿ ಆವರಣದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಸಂಕಲ್ಪತರು ಫೌಂಡೇಶನ್ ಸಹಯೋಗದೊಂದಿಗೆ 4500 ಗಿಡಗಳನ್ನು ನೆಡಲು ವಿಭಾಗವಾರು ಯೋಜನೆ ರೂಪಿಸಲಾಗಿದೆ.

**ಬಿಜೆಪಿ ಕಚೇರಿ:** ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಲ್ಲೇಶ್ವರದಲ್ಲಿ ಸಸಿ ನೆಟ್ಟು ನೀರೆರೆದರು. ''ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಕಾರ್ಯಕರ್ತರು, ಸಂಸದರು, ಶಾಸಕರು ಹಾಗೂ ಬೂತ್ ಮಟ್ಟದ ಪದಾಧಿಕಾರಿಗಳು ಮತ್ತು ಪಕ್ಷದ ಎಲ್ಲ ಕಾರ್ಯಕರ್ತರಿಂದ ಜೂನ್ 5ರಿಂದ ಒಂದು ತಿಂಗಳ ಕಾಲ ಸಸಿ ನೆಡುವ ಕಾರ್ಯ ಹಮ್ಮಿಕೊಳ್ಳಲಾಗಿದೆ,'' ಎಂದರು.

## ಪರಿಸರ ಪ್ರಶಸ್ತಿ ಪ್ರದಾನ



ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರತಿನಿಧಿ ಪರಿಸರ ಪ್ರಶಸ್ತಿ ಸ್ವೀಕರಿಸಿದರು.

**ಬೆಂಗಳೂರು:** ಪರಿಸರ ದಿನಾಚರಣೆ ಅಂಗವಾಗಿ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಭಾನುವಾರ ''ವಿಶ್ವ ಪರಿಸರ ದಿನಾಚರಣೆ'' ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರವಾಸೋದ್ಯಮ ಮತ್ತು ಅರಣ್ಯ ಪರಿಸರ ಹಾಗೂ ಜೀವಿಶಾಸ್ತ್ರ ಸಚಿವ ಆನಂದ್‌ಸಿಂಗ್ ಮಾತನಾಡಿ, ''ಪರಿಸರ ನಾಶವಾಗದಂತೆ ಸಂರಕ್ಷಿಸಿ ಮುಂದಿನ ಪೀಳಿಗೆವರೆಗೂ ಕೊಂಡೊಯ್ಯುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ,'' ಎಂದರು.

ಜನರಲ್ ಫೋರ್ಸ್ಟ್ ಮಾಸ್ಟರ್ ಎಲ್.ಕೆ. ದಾಸ್, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಕಾರ್ಯದರ್ಶಿ ವಿಜಯ ಮೋಹನ್‌ರಾಜ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಂತ ಎ. ತಿಮ್ಮಯ್ಯ, ಮಂಡಳಿಯ ಸದಸ್ಯ ಕಾರ್ಯದರ್ಶಿ ಶ್ರೀನಿವಾಸಲು ಉಪಸ್ಥಿತರಿದ್ದರು.

ಇದೇ ವೇಳೆ, ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕೋಲಾರದ ರಾಜಶೇಖರ್, ದಕ್ಷಿಣ ಕನ್ನಡದ ಮಾಧವ ಉಳ್ಳಾಲ್, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಗ್ರೀನ್ ರಾಯಚೂರು ಎನ್‌ಜಿಒ ಸಂಸ್ಥೆಗೆ ಪರಿಸರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ

**ಯಲಹಂಕ:** ಪರಿಸರ ಉಳಿಸುವುದು ಕೆಲವರದ್ದಷ್ಟೇ ಹೊಣೆಯಲ್ಲ, ಎಲ್ಲರ ಕರ್ತವ್ಯವಾಗಿದೆ ಎಂದು ಪರಿಸರವಾದಿ ಸುರೇಶ್ ಹೆಬ್ಳೀಕರ್ ಹೇಳಿದರು.

ಯಲಹಂಕದಲ್ಲಿ ಕೆಂಪೇಗೌಡ ಪರಿಸರ ಸಂರಕ್ಷಣಾ ವೇದಿಕೆಯಿಂದ ಆಯೋಜಿಸಿದ್ದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ''ಮಣ್ಣು, ಕಲ್ಲು,ಹುಲ್ಲು, ಗುಡ್ಡ ಎಲ್ಲ ಇರಬೇಕು. ಇವಿಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ. ಪರಿಸರವನ್ನು ಅರ್ಥ ಮಾಡಿಕೊಳ್ಳಬೇಕು.



ವಾಣಿಜ್ಯ ಉದ್ಯಮಗಳು ಪರಿಸರವನ್ನು ಹಾಳು ಮಾಡುತ್ತಿವೆ. ಮಹಾನಗರಗಳು ನಮ್ಮ ಪ್ರಕೃತಿಯ ಮೇಲೆ ಭಾರಿ ಪರಿಣಾಮ ಬೀರುತ್ತಿವೆ,'' ಎಂದು ಆತಂಕ ವ್ಯಕ್ತಪಡಿಸಿದರು. ''ಪರಿಸರ ಗಿಡ, ಮರದ ಬಗ್ಗೆ ಮಕ್ಕಳಿಗೆ ಜ್ಞಾನ ಸಿಗುತ್ತಿಲ್ಲ, ಮಕ್ಕಳು ಮೊಬೈಲ್, ಕಂಪ್ಯೂಟರ್‌ನಲ್ಲಿ ಕಾಲ ಕಳೆಯುತ್ತಿದ್ದಾರೆ,'' ಎಂದು ಬೇಸರ ವ್ಯಕ್ತಪಡಿಸಿದರು.

## ಮಾನವೀಯ ಗುಣದಲ್ಲಿದೆ ಸಮಸ್ಯೆಗಳಿಗೆ ಉತ್ತರ

■ ವಿಕ ಸುದ್ದಿಲೋಕ ಬೆಂಗಳೂರು

ಮಾನವೀಯ ಗುಣಗಳಲ್ಲಿ ಎಲ್ಲ ಸಮಸ್ಯೆಗಳಿಗೂ ಉತ್ತರವಿದೆ. ಮಾನವೀಯ ಗುಣವುಳ್ಳ ವೈಚಾರಿಕತೆಯನ್ನು ನಾವು ಬೆಳೆಸಿಕೊಳ್ಳಬೇಕು. ಇತರರನ್ನು ಗೌರವದಿಂದ ಕಾಣುವುದು ಮೊದಲ ಮಾನವೀಯ ಗುಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

**ವೈ.ಕೆ.ಎಂ -75ರ ಸಂಭ್ರಮದಲ್ಲಿ ಸಿಎಂ ಅಭಿಮತ**



ರವೀಂದ್ರ ಕಲಾಕ್ಷೇತ್ರದಲ್ಲಿ ವೈ.ಕೆ. ಮುದ್ದುಕೃಷ್ಣ ಅವರನ್ನು ಗಣ್ಯರು ಅಭಿನಂದಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ವೈ.ಕೆ.ಎಂ - 75 (ವೈ.ಕೆ. ಮುದ್ದುಕೃಷ್ಣ) ಸಂಭ್ರಮಾಚರಣೆ, ಅಭಿನಂದನೆ ಹಾಗೂ 'ಹಾಡು ಹಿಡಿದ ಜಾಡು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ''ಸಾಹಿತ್ಯಕ್ಕೆ ಬಹಳ ದೊಡ್ಡ ಶಕ್ತಿ ಇದೆ. ಸಾಹಿತ್ಯದಿಂದ ವೈಚಾರಿಕತೆ ಬೆಳೆಯುತ್ತದೆ. ನಮ್ಮಲ್ಲಿನ ಒಳಪದರಗಳಿಗೆ ಸಾಹಿತ್ಯ ಸಹಕರಿಸುತ್ತದೆ'' ಎಂದರು.

ಕವಿ ಎಚ್.ಎಸ್.ವೆಂಕಟೇಶಮೂರ್ತಿ ಮಾತನಾಡಿ, ''ಕನ್ನಡ ನಾಡಿನ ಸುಗಮ ಸಂಗೀತಕ್ಕೆ ಹೊಸ ದಿಕ್ಕು ಕಲ್ಪಿಸಿದ ಶ್ರೇಯಸ್ಸು ವೈ.ಕೆ. ಮುದ್ದುಕೃಷ್ಣ ಅವರಿಗೆ ಸಲ್ಲುತ್ತದೆ. ಸಂಗೀತ ನಿರ್ದೇಶಕ ಮತ್ತು ಗಾಯಕರಾದ ಮೈಸೂರು ಅನಂತಸ್ವಾಮಿ, ಸಿ.ಅಶ್ವತ್ಥ್ ಅವರನ್ನು ಸೇರಿಸಿಕೊಂಡು ಸುಗಮ ಸಂಗೀತದ ಪಥ ಆರಂಭಿಸಿದರು. ಜತೆಗೆ ಹಲವು ಕಲಾವಿದರ ಜತೆಗೂಡಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಹುಟ್ಟುಹಾಕಿದರು. ಕನ್ನಡ ಸಾಹಿತ್ಯ ಪರಿಷತ್ತಿನಷ್ಟೇ ಸುಗಮ ಸಂಗೀತ ಪರಿಷತ್ತು ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸುತ್ತಿರುವುದು ಸಂತಸದ ವಿಚಾರ,'' ಎಂದರು.

ನನ್ನ ಮತ್ತು ಮುಖ್ಯಮಂತ್ರಿಗಳ ನಡುವೆ ತಾತ್ವಿಕ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ, ವೈಯಕ್ತಿಕವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ತುಂಬಾ ಇಷ್ಟಪಡುತ್ತೇನೆ. ಇತ್ತೀಚೆಗೆ ಕೆಲವರು ಶಿಕ್ಷಣ ಸಚಿವ ನಾಗೇಶ್ ಅವರ ಮನೆ ಮೇಲೆ ದಾಳಿ ನಡೆಸಿದ್ದನ್ನು ನಾನು ಖಂಡಿಸುತ್ತೇನೆ.
- ಹಂಪ ನಾಗರಾಜಯ್ಯ ಸಾಹಿತಿ

ಎಂದರು. ವಿ.ನಾ.ರಾಮೋದರಶೆಟ್ಟಿ, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ವೈ.ಕೆ.ಪುಟ್ಟಸೋಮೇಗೌಡ, ಸಪ್ನ ಬುಕ್ ಹೌಸ್‌ನ ನಿತಿನ್ ಷಾ, ಗಾಯಕ ನಗರ ಶ್ರೀನಿವಾಸ ಉಡುಪ, ಶ್ರೀನಿವಾಸ ಜಿ.ಕಪ್ಪಣ್ಣ, ಕಿಕ್ಕೇರಿ ಕೃಷ್ಣಮೂರ್ತಿ ಮತ್ತಿತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

### 70ನೇ ವರ್ಷದ ಅಭಿನಂದನಾ ಸಮಾರಂಭದಲ್ಲಿ ಸಿದ್ಧಲಿಂಗ ಸ್ವಾಮೀಜಿ ಬಣ್ಣನೆ

## ಪ್ರೊ.ಮಲ್ಲೇಪುರಂ ಜ್ಞಾನರತ್ನದ ಸಿರಿವಂತ



ನಗರದ ಗಾಂಧಿಭವನದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿನಂದನಾ ಸಮಾರಂಭ ನಡೆಯಿತು.

■ ವಿಕ ಸುದ್ದಿಲೋಕ ಬೆಂಗಳೂರು

ಮಲ್ಲೇಪುರಂ ಜಿ.ವೆಂಕಟೇಶ್ ಸಿದ್ದಗಂಗಾ ಮಠದ ಗ್ರಂಥಾಲಯದಲ್ಲಿರುವ 10 ಸಾವಿರ ಪುಸ್ತಕಗಳನ್ನು ಓದಿದ ಏಕೈಕ ವ್ಯಕ್ತಿ. ಇವರು ಮಠದ ಅನರ್ಘ್ಯ ರತ್ನ ಎಂದು ಸಿದ್ಧಲಿಂಗ ಸ್ವಾಮೀಜಿ ಬಣ್ಣಿಸಿದರು.

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ 70ನೇ ವಸಂತಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ನಗರದ ಗಾಂಧಿಭವನದಲ್ಲಿ ಆಯೋಜಿಸಿದ್ದ 'ಅಭಿನಂದನಾ ಮತ್ತು ಸಮಾಹಿತ ಗ್ರಂಥ ಲೋಕಾರ್ಪಣೆ' ಸಮಾರಂಭದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ''ನಮ್ಮ ಮಠದಲ್ಲೇ ವೆಂಕಟೇಶ್ ವ್ಯಾಸಂಗ ಮಾಡಿದ್ದಾರೆ. ಬಾಲ್ಯದಲ್ಲೇ ಓದಿನಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡ ಅವರು, ನಮ್ಮ ಗ್ರಂಥಾಲಯದಲ್ಲೇ 10 ಸಾವಿರ ಪುಸ್ತಕಗಳನ್ನು ಓದಿದ ಏಕೈಕ ವ್ಯಕ್ತಿಯಾಗಿದ್ದಾರೆ. ರಾಷ್ಟ್ರಕವಿ ಜಿ. ಶಿವರುದ್ರಪ್ಪ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಹೊಂದಿದ್ದಾರೆ,'' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

''ಮನುಷ್ಯ ಹುಟ್ಟಿದಾಗ ಮಾತ್ರ ಮಾನವ ಜಾತಿ. ಆದರೆ, ಆಚರಣೆಯಲ್ಲಿ ಏನೇನೋ ಆಗುತ್ತಾನೆ. ಯಾರಾದರೂ ನಿಮ್ಮ ಜಾತಿ ಏನೆಂದು ಕೇಳಿದರೆ ಪ್ರೊ. ಮಲ್ಲೇಪುರಂ ಅವರು ಮಾನವ ಜಾತಿ ಎಂದು ಹೇಳುತ್ತಾರೆ. ಆಚರಣೆಯಲ್ಲಿ ಮನುಷ್ಯನಾಗಿ ಬದುಕುತ್ತಿದ್ದಾರೆ. ಅವರ ಇಡೀ ಜೀವನ ಸಾಹಿತ್ಯ ಅಧ್ಯಯನ, ಪ್ರವಚನ, ಸಂಸ್ಕೃತ-ಕನ್ನಡ, ಪಾಳಿ-ಪ್ರಾಕೃತವಾಗಿದ್ದು, ಜ್ಞಾನರತ್ನದ ಸಿರಿವಂತರಾಗಿದ್ದಾರೆ,'' ಎಂದರು.

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮಾತನಾಡಿ, ''ಮಲ್ಲೇಪುರಂ ಅವರು ಆಚಾರ್ಯ, ಪ್ರಾಚಾರ್ಯ, ಸಾಹಿತಿ, ಚಿಂತಕ, ಮಾರ್ಗದರ್ಶಕರಾಗಿದ್ದಾರೆ. ಒಂದು ಬದುಕಿನಲ್ಲಿ ಒಬ್ಬ ವ್ಯಕ್ತಿ ಇಷ್ಟೆಲ್ಲ ರೀತಿಯಲ್ಲಿ ಜೀವನ ಸಾಗಿಸಲು ಸಾಧ್ಯವೇ ಎಂಬ ಪ್ರಶ್ನೆಯೂ ಮಲ್ಲೇಪುರಂ ಅವರನ್ನು ಕಂಡಾಗ ಮೂಡುತ್ತದೆ,'' ಎಂದರು.

ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಸಹಕುಲಪತಿ ಪ್ರೊ.ಬಿ.ಪಿ. ಕೃಷ್ಣಭಟ್ಟ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಲೇಖಕಿ ಡಾ.ವೀಣಾ ಬನ್ನಂಜೆ, ಡಾ.ಪುಂಡೇ ಪಿ.ಕೃಷ್ಣ, ಡಾ. ಕೆ.ಜಿ. ಲಕ್ಷ್ಮೀನಾರಾಯಣಪ್ಪ ಮತ್ತಿತರರು ಇದ್ದರು.

ಸಿದ್ದಗಂಗಾಮಠದ ಶಿವಕುಮಾರ ಸ್ವಾಮೀಜಿ ಅವರು ಇಲ್ಲದಿದ್ದರೆ ಊರಿನಲ್ಲಿ ನಾನು ಸಾಮಾನ್ಯ ರೈತನಾಗಿ ಬದುಕುತ್ತಿದ್ದೆನೇನೋ? ನನ್ನ ಬಾಳಿಗೆ ಅನೇಕ ಗುರು-ಹಿರಿಯರು, ಸಾಧು-ಸಂತರ ಮಾರ್ಗದರ್ಶನವಿದೆ. ಅವರಿಂದಲೇ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಕೆಲಸ ಮಾಡಲು ನನ್ನಿಂದ ಸಾಧ್ಯವಾಯಿತು.
- ಮಲ್ಲೇಪುರಂ ಜಿ.ವೆಂಕಟೇಶ್ ವಿಶ್ರಾಂತ ಕುಲಪತಿ

## ಸಾಹಿತ್ಯ ಅನುವಾದಕ್ಕೆ ಸರಕಾರ ನೆರವು ನೀಡಲಿ

**ಬೆಂಗಳೂರು :** ಕುವೆಂಪು ಕೇವಲ ಕನ್ನಡಿಗರ ಸ್ವತ್ತಲ್ಲ, ವಿಶ್ವದ ಸ್ವತ್ತು. ಅವರ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡಲು ಸರಕಾರ ನೆರವು ನೀಡಬೇಕು ಎಂದು ಕವಿ ಹಾಗೂ ನಾಟಕಕಾರ ಡಾ. ಎಚ್.ಎಸ್. ಶಿವಪ್ರಕಾಶ್ ಹೇಳಿದರು.

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ವತಿಯಿಂದ ನಗರದ ಗಾಂಧಿ ಭವನದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಇಂಗ್ಲಿಷ್ ಅನುವಾದಿತ 'ದಿ ಬ್ರೈಡ್ ಇನ್ ದಿ ರೈನಿ ಮೌಂಟೇನ್ಸ್' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

''ಕುವೆಂಪು ಅವರು ವಿಶ್ವಮಾನವರು. ಕುವೆಂಪು ಸಾಹಿತ್ಯವನ್ನು ಇಂಗ್ಲಿಷ್ ಭಾಷೆಯಂತೆ ಹೆಚ್ಚಾಗಿ ಸ್ಪ್ಯಾನಿಷ್ ಭಾಷೆಗೆ ಅನುವಾದ ಮಾಡಬೇಕಾಗಿದೆ. ಅದರ ಜತೆಗೆ ಲ್ಯಾಟಿನ್ ಅಮೆರಿಕಾ, ಅರೇಬಿಕ್ ಹಾಗೂ ಚೀನಿ ಭಾಷೆಗಳಿಗೆ ಕುವೆಂಪು ಅವರ ಕೃತಿಗಳನ್ನು ಅನುವಾದ ಮಾಡಬೇಕಿದೆ. ಮುಂದಿನ ದಿನಗಳಲ್ಲಿ ಕುವೆಂಪು ಪ್ರತಿಷ್ಠಾನ ಇದನ್ನು ಮಾಡಲಿ. ಇದಕ್ಕೆ ಬೇಕಾದ ನೆರವನ್ನು ಸರಕಾರ ಕಲ್ಪಿಸಿಕೊಡಬೇಕು,'' ಎಂದು ಮನವಿ ಮಾಡಿದರು. ಇದೇ ವೇಳೆ ಕುವೆಂಪು ಪ್ರತಿಷ್ಠಾನದ ಉಗಮ ಮತ್ತು ವಿಕಾಸದ ಬಗ್ಗೆ ಕಡಿದಾಳ್ ಪ್ರಕಾಶ್ ಅವರು ರಚಿಸಿದ 'ಕಟ್ಟುವ ಹಾದಿಯಲ್ಲಿ' ಎಂಬ ಕೃತಿಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ನಾಗಾಭರಣ '' ಕುವೆಂಪು ಅವರು ಕನ್ನಡ ಭಾಷೆ, ಸಾಹಿತ್ಯ, ಪರಂಪರೆಯ ಸೌಂದರ್ಯ ಮತ್ತು ವೈವಿಧ್ಯತೆಯನ್ನು ಅಕ್ಷರದ ರೂಪದಲ್ಲಿ ಸೂಕ್ಷ್ಮವಾಗಿ ಪೋಣಿಸಿದ್ದಾರೆ. ಈ ಅನುವಾದದಿಂದ ಕನ್ನಡತನವನ್ನು ವಿಶ್ವ ಮಟ್ಟದಲ್ಲಿ ಬೆಳೆಸುವ ಪ್ರಯತ್ನ ನಡೆದಿದೆ'' ಎಂದರು.

**ಚಿತ್ರ ಸುದ್ದಿ**



ದಯಾನಂದ ಸಾಗರ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳು ನಾನಾ ಆವಿಷ್ಕಾರಗಳನ್ನು ಭಾನುವಾರ ಪ್ರದರ್ಶಿಸಿದರು. ನಾಯಕ ನಟ ಪ್ರೇಮ್, ದಯಾನಂದ್ ಸಾಗರ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಡಿ ಹೇಮಚಂದ್ರಸಾಗರ್ ಇದ್ದರು.



ತುಳು ಕೂಟ ಬೆಂಗಳೂರು ವತಿಯಿಂದ ಹಮ್ಮಿಕೊಂಡಿರುವ ಐವತ್ತನೇ ವರ್ಷದ 'ವಿಶ್ವ ತುಳು ಸಮ್ಮೇಳನ' ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ವಿಶ್ವ ತುಳು ಸಮ್ಮೇಳನದ ಗೌರವ ಅಧ್ಯಕ್ಷ ಕೆ.ವಿ. ರಾಜೇಂದ್ರಕುಮಾರ್ ಹಾಗೂ ತುಳು ಕೂಟದ ಅಧ್ಯಕ್ಷ ದೇವೇಂದ್ರ ಹೆಗ್ಡೆ ಆಹ್ವಾನ ನೀಡಿದರು.



ಸಂಜೀವಿನಿಪುರದ ಅರ್ಕಾವತಿ ಲೇಔಟ್‌ನ ಪಿ.ಕೆ.ಎಸ್. ಶಾಲೆ ಆವರಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಡಲಾಯಿತು. ಶಾಲೆ ಸಂಸ್ಥಾಪಕ ಕೃಷ್ಣಪ್ಪಶೆಟ್ಟಿ, ಶಿಕ್ಷಕರು ಇದ್ದರು.

## ಶಿಕ್ಷಣಕ್ಕೆ ಮಠಗಳ ಕೊಡುಗೆ ಅಪಾರ



ಬಂಡೇಮಠದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲೆ, ಕಾಲೇಜು, ಕ್ರೀಡಾಂಗಣವನ್ನು ನಾನಾ ಮಠಾಧಿಪತಿಗಳು ಉದ್ಘಾಟಿಸಿದರು.

**ಸಿದ್ಧಗಂಗಾ ಶ್ರೀ ಅಭಿಮತ**

■ ವಿಕ ಸುದ್ದಿಲೋಕ ಕೆಂಗೇರಿ

ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಿಸುವಲ್ಲಿ ಹಾಗೂ ಶೈಕ್ಷಣಿಕ ಪ್ರಗತಿ ಸಾಧಿಸಲು ಮಠಗಳ ಕೊಡುಗೆ ಅಪಾರ ಎಂದು ಸಿದ್ದಗಂಗಾ ಮಠದ ಪೀಠಾಧಿಪತಿ ಸಿದ್ದಲಿಂಗ ಸ್ವಾಮೀಜಿ ತಿಳಿಸಿದರು.

ಶ್ರೀ ಬಂಡೇಶ್ವರ ಎಜುಕೇಶನ್ ಸೊಸೈಟಿಯ 50ನೇ ವರ್ಷದ ಸುವರ್ಣಮಹೋತ್ಸವದ ಅಂಗವಾಗಿ ಕೆಂಗೇರಿ ಉಪನಗರದ ಕೊಮ್ಮಘಟ್ಟ ರಸ್ತೆಯಲ್ಲಿನ ಬಂಡೇ ಮಠದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲೆ, ಕಾಲೇಜು, ಕ್ರೀಡಾಂಗಣದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

''ಶ್ರೀಕ್ಷೇತ್ರ ಏಕದಳ ಬಿಲ್ವ ಬಂಡೆ ಮಠದ ಶ್ರೀಗಳಾದ ಸಚ್ಚಿದಾನಂದ ಸ್ವಾಮೀಜಿಯವರು ಸಾಮಾಜಿಕ ಬದ್ಧತೆ, ಜಾತ್ಯತೀತ ಮನೋಭಾವದಿಂದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಪ್ರಗತಿಗೆ ಕೊಡುಗೆ ನೀಡುವ ಮೂಲಕ ಬಸವಾದಿ ಶರಣರ ಆಶಯಗಳನ್ನು ಈಡೇರಿಸಿದ್ದಾರೆ,'' ಎಂದು ಶ್ಲಾಘಿಸಿದರು.

ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ಮಾತನಾಡಿ ''ಮಠಗಳು ತ್ರಿವಿಧ ದಾಸೋಹಕ್ಕೆ ಆದ್ಯತೆ ನೀಡಿ ಸರಕಾರದ ಜೊತೆಗೆ ಕೈಜೋಡಿಸಿರುವ ಪರಿಣಾಮದಿಂದಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಮೈಲುಗಲ್ಲು ಸ್ಥಾಪಿಸಲು ಸಾಧ್ಯವಾಗಿದೆ,'' ಎಂದರು.

ಬಂಡೇಮಠದ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ ''ಸಮಾಜದ ಎಲ್ಲ ವರ್ಗದವರ ಸಹಕಾರದಿಂದಾಗಿ 50 ವರ್ಷಗಳಿಂದಲೂ ನಿರಂತರವಾಗಿ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರಲು ಸಾಧ್ಯವಾಗಿದೆ,'' ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಮಠಾಧೀಶ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್, ಬಂಡೇಮಠದ ಆಡಳಿತಾಧಿಕಾರಿ ಎನ್.ನಾಗರಾಜ್, ಬಿಜೆಪಿ ಮುಖಂಡ ಕೆ. ಎನ್ ಮಂಜುನಾಥಯ್ಯ ಮತ್ತಿತರರು ಉಪಸ್ಥಿತರಿದ್ದರು.

## ವಿದ್ಯಾರ್ಥಿವೇತನ ವಿತರಣೆ



■ ವಿಕ ಸುದ್ದಿಲೋಕ ಬೆಂಗಳೂರು

ಬೆಂಗಳೂರು ಈಡಿಗರ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ದಾನಿಗಳ ಸಹಯೋಗದಲ್ಲಿ ಭಾನುವಾರ ನಗರದ ಶೇಷಾದ್ರಿಪುರಂ ಈಡಿಗ ಸಂಘದ ಸಭಾಂಗಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಸಂಘದ ಅಧ್ಯಕ್ಷ ಎಂ.ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೆಪಿಎಸ್‌ಸಿ ಮಾಜಿ ಸದಸ್ಯ ಡಾ. ಲಕ್ಷ್ಮಣರಸಯ್ಯ, ಜನತಾ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಇಂದಿರಾ ಗೋಪಾಲಕೃಷ್ಣ, ಸೆಂಟ್ ಫಿಲೋಮಿನಾ ಪಬ್ಲಿಕ್ ಸ್ಕೂಲ್ ಅಧ್ಯಕ್ಷ ಟಿ.ವಿ. ಶ್ರೀನಿವಾಸಮೂರ್ತಿ ಅವರು ಪಾಲ್ಗೊಂಡರು.

ಗೌರವ ಡಾಕ್ಟರೇಟ್ ಪಡೆದಿರುವ ನಟ ಸಾಕ್ಷಿ ನಟ್ಟಪ್ಪ, ಡಾಕ್ಟರೇಟ್ ಗಳಿಸಿದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಎಸ್.ಕುನಾಲ್, ಸಾಫ್ಟ್‌ವೇರ್ ಕಂಪನಿ ತಾಂತ್ರಿಕ ಮುಖ್ಯಸ್ಥ ಡಾ.ಎನ್. ಅನಿಲ್ ಕುಮಾರ್ ಅವರನ್ನು ಸಂಘದಿಂದ ಅಭಿನಂದಿಸಲಾಯಿತು.

ಸಂಘದ ಉಪಾಧ್ಯಕ್ಷ ಬಿ.ವಿ.ಸತ್ಯನಾರಾಯಣ, ಕಾರ್ಯದರ್ಶಿ ಎಸ್.ಜೆ. ಕಾಳೇಗೌಡ, ಸಾಹಿತಿ ಲಕ್ಷ್ಮಣ ಕೊಡಸೆ ಸೇರಿದಂತೆ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

**ಎಲ್ಲಿ-ಏನು? ಸೋಮವಾರ**

**ಸಂಗೀತ ಸೌರಭ ವಾದ್ಯ ಗೋಷ್ಠಿ:** ಕಲಾವಿದರು, ಕಲಾಪೋಷಕರಿಗೆ ಗೌರವಾರ್ಪಣೆ ಹಾಗೂ ಸಂಗೀತ ಸಂಜೆ ಕಾರ್ಯಕ್ರಮ. ಉದ್ಘಾಟನೆ: ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ ರಾಮೇಗೌಡ, ಅಧ್ಯಕ್ಷತೆ: ದೊಡ್ಡಬಳ್ಳಾಪುರ ಎಪಿಎಂಸಿ ಮಾಜಿ ಉಪಾಧ್ಯಕ್ಷ ಟಿ. ಮಂಜುನಾಥ್

**ಸ್ಥಳ:** ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು. ಸಂಜೆ 5.

**ಬೆಂಗಳೂರು ಲಲಿತಕಲಾ ಪರಿಷತ್:** ಡಾ.ಎಚ್.ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ. ಸಮಾರೋಪ ಭಾಷಣ: ಟಿ.ಎನ್. ಸೀತಾರಾಮ್. ನಾಟಕ ಪ್ರದರ್ಶನ 'ಮುಖ್ಯಮಂತ್ರಿ'. ಮುಖ್ಯಪಾತ್ರ: ಡಾ. ಮುಖ್ಯಮಂತ್ರಿ ಚಂದ್ರು. ಕನ್ನಡರೂಪ: ಟಿ. ಎಸ್ ಲೋಹಿತಾಶ್ವ ನಿರ್ದೇಶನ: ಡಾ.ಬಿ.ವಿ ರಾಜಾರಾಂ.



**ಸ್ಥಳ:** ಡಾ.ಎಚ್.ಎನ್ ಕಲಾಕ್ಷೇತ್ರ, 7ನೇ ಬ್ಲಾಕ್ ಜಯನಗರ. ಸಂಜೆ 6.30.

**ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ವಿಶ್ವ ಪರಿಸರ ದಿನದ ಅಂಗವಾಗಿ ರಾಷ್ಟ್ರಮಟ್ಟದ ಕಾರ್ಯಾಗಾರ. ಉದ್ಘಾಟನೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಪರ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್.

**ಸ್ಥಳ:** ಕಾನ್ಫರೆನ್ಸ್ ಹಾಲ್, ಶೇಷಾದ್ರಿಪುರಂ ಕಾಲೇಜು. ಬೆಳಗ್ಗೆ 10.30.

## ಮಕ್ಕಳಲ್ಲಿ ಜಾಗೃತಿ ಮೂಡಿಸಿ

**ಹೆಬ್ಬಾಳ:** ಪರಿಸರ ರಕ್ಷಣೆಗಾಗಿ ಮಕ್ಕಳಲ್ಲಿ ಜಾಗೃತಿ ಮೂಡಿಸಿ ಎಂದು ಶಾಸಕ ಭೈರತಿ ಎಸ್. ಸುರೇಶ್ ಹೇಳಿದರು.

ಸಂಜಯನಗರದ ಶಿಕ್ಷಣಸಾಗರ್ ಶಾಲೆ ಬಳಿಯ ಕೆರೆಯ ಉದ್ಯಾನದಲ್ಲಿ ಮಣ್ಣು ಸಂರಕ್ಷಣೆ ಹಾಗೂ ಗಿಡನೆಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ''ಗಿಡಗಳನ್ನು ನೆಡುವುದಷ್ಟೇ ಅಲ್ಲ, ಅವುಗಳನ್ನು ಪೋಷಿಸುವ ಹೊಣೆಯನ್ನೂ ಹೊರಬೇಕು,''ಎಂದರು. ಮುಖಂಡರಾದ ರಾಘವೇಂದ್ರ, ಶಿವಕುಮಾರ, ರವೀಂದ್ರ, ಗೀತಾ, ಲತಾ, ಮತ್ತಿತರರಿದ್ದರು.

# ಲವಲVK



'ವಿಕ್ರಮ್' ಸಿನಿಮಾದ ಯಶಸ್ಸಿನಲ್ಲಿರುವ ನಟ ಕಮಲ್ ಹಾಸನ್ ಈಗ ಮಲಯಾಳಂನ 'ಸಿ ಯೂ ಸೂನ್' ಸಿನಿಮಾ ಖ್ಯಾತಿಯ ನಿರ್ದೇಶಕ ಮಹೇಶ್ ನಾರಾಯಣನ್ ಅವರಿಗೆ ಡೇಟ್ಸ್ ಕೊಟ್ಟಿದ್ದಾರೆ.

ತೆಲುಗಿನ ಬಿಗ್ ಬಾಸ್ ಸೀಸನ್-6ರ ನಿರೂಪಣೆಯನ್ನು ಬಹುಭಾಷಾ ನಟಿ ಸಮಂತಾ ರುತ್ ಪ್ರಭು ವಹಿಸಿಕೊಳ್ಳಲಿದ್ದಾರೆ ಎಂದು ಸುದ್ದಿಯಾಗಿದೆ.






ವಿಜಯ್ ದೇವರಕೊಂಡ ಮತ್ತು ಪೂಜಾ ಹೆಗ್ಡೆ ನಟಿಸುತ್ತಿರುವ 'ಜನ ಗಣ ಮನ' ಸಿನಿಮಾದ ಚಿತ್ರೀಕರಣ ಆರಂಭವಾಗಿದೆ. ಪೂರಿ ಜಗನ್ನಾಥ್ ನಿರ್ದೇಶನದ ಚಿತ್ರವಿದು.

# ನಾವು ಇತರರಿಗೆ ನೋಡಲು ಸುಂದರವಾಗಿ ಕಾಣಬೇಕೆಂದು ಏಕೆ ಅನಿಸುತ್ತದೆ?

**ಮನುಷ್ಯನಿಗೇಕೆ ತಾನು ಚೆಂದ ಕಾಣಬೇಕು ಅನಿಸುತ್ತದೆ? ಸೌಂದರ್ಯಕ್ಕೆ ತಡೆಯಾಗುತ್ತದೆ ಅನಿಸುವ ದೇಹದ ಅಂಗಾಂಗಗಳಿಗೆ ಮಿತಿ ಹಾಕಿಕೊಳ್ಳುವ ಕಾಸ್ಮೆಟಿಕ್ ಸರ್ಜರಿಯಂಥವನ್ನು ಮಾಡಿಕೊಳ್ಳಬೇಕೆಂಬ ಅನಿಸಿಕೆ ಏಕೆ ಬಂತು? ನಮ್ಮ ಸೌಂದರ್ಯಾರಾಧನೆ ಪ್ರಜ್ಞೆಯ ಮೂಲ ಎಲ್ಲಿದೆ? ಖ್ಯಾತ ಸಸ್ಯವಿಜ್ಞಾನಿ, ಕನ್ನಡದ ರೋಚಕ ಕಥನಗಳ ಸರದಾರ ಡಾ.ಕೆ.ಎನ್.ಗಣೇಶಯ್ಯ ಈ ಕುರಿತು ಬರೆವ ಕುತೂಹಲಕರ ಸರಣಿ ಇಂದಿನಿಂದ ಆರಂಭ.**



ಸಾಂದರ್ಭಿಕ ಚಿತ್ರ





ವಿಕಾಸದ ಹಾದಿಯಲ್ಲಿ ಎಲ್ಲೋ ತನ್ನ ಬಾಲವನ್ನು ಕತ್ತರಿಸಿಕೊಂಡು, ತನ್ನ ದೇಹದ ಮೇಲಿದ್ದ ಕೂದಲನ್ನು 'ಶೇವ್' ಮಾಡಿಕೊಂಡು, ಹಿಂಗಾಲುಗಳ ಮೇಲೆ ನಿಂತು ನಡೆಯಲು ಕಲಿತು, ಮುಂಗಾಲುಗಳನ್ನು ಸ್ವತಂತ್ರವಾಗಿಸಿಕೊಂಡ ಮಂಗವೇ ಈಗಿನ ಮಾನವ ಎನ್ನುತ್ತಾರೆ ಕೆಲವು ವಿಜ್ಞಾನಿಗಳು. ಕೋತಿ, ಚಿಂಪಾಂಜಿ, ಒರಾಂಗುಟಾನ್ ಮುಂತಾದ ಮಂಗಗಳ ಗುಂಪಿನಿಂದ ಕ್ರಮೇಣ ಮಾನವನು ವಿಕಾಸಗೊಂಡ ಹಾದಿಯಲ್ಲಿ ಕಾಣಸಿಗುವ ದೈಹಿಕ ರೂಪಾಂತರಗಳ ಮೈಲುಗಲ್ಲುಗಳತ್ತ ಬೊಟ್ಟು ತೋರಿಸುವ ಈ ನಿರೂಪಣೆಯೇನೋ ಸತ್ಯವೆ; ಆದರೆ ಸಂಪೂರ್ಣವಲ್ಲ. ಕಾರಣ ಮಾನವನ ವಿಕಾಸವನ್ನು ಅಷ್ಟು ಸರಳವಾಗಿ ತೆರೆದಿಡುವ ಆ ನಿರೂಪಣೆಯಲ್ಲಿ ನಮ್ಮಲ್ಲಿ ಬೇರೂರಿರುವ ಕೆಲವು ಪ್ರಮುಖ ಹಾಗೂ ವಿಶೇಷವಾದ ಬದಲಾವಣೆಗಳನ್ನು ಮರೆಮಾಚಲಾಗಿದೆ ಎನ್ನಬಹುದು.

ಹಾಗೆ ಮರೆಮಾಚಲಾಗಿರುವ ಹೆಗ್ಗುರುತುಗಳಲ್ಲಿ ಒಂದು ಪ್ರಮುಖವಾದ ಅಂಶವೆಂದರೆ ಮಾನವ ತನ್ನ ಕೆಲವು ಅಂಗಾಂಗಗಳನ್ನು ಮರೆಮಾಚುವ ವರ್ತನೆಯನ್ನು ಬೆಳೆಸಿಕೊಂಡಿರುವುದು ಹಾಗೂ ಹಾಗೆ ಮರೆಮಾಚುತ್ತಲೇ ಆಕರ್ಷಕವಾಗಿ 'ಸುಂದರ'ವಾಗಿ ಕಾಣಲು ಪ್ರಯತ್ನಿಸುವುದು. ಲಿಂಗ ಸಂಬಂಧಿ ಅಂಗಗಳನ್ನು ಮುಚ್ಚಿಕೊಳ್ಳುವ ಈ ವಾಂಛೆ ಮಾನವನಲ್ಲಿ ವಿಕಾಸಗೊಳ್ಳದಿದ್ದಿದ್ದರೆ ಪ್ರಪಂಚದಾದ್ಯಂತ ಬ್ರಾಗಳ, ಲಂಗೋಟಿಗಳ ಕೋಟಿ ಕೋಟಿ ರೂಪಾಯಿಗಳ ವ್ಯವಹಾರ ಬೆಳೆಯುತ್ತಿರಲಿಲ್ಲ. ಆದರೆ ಈ ವಾಂಛೆ ಹೇಗೆ ಮತ್ತು ಏಕೆ ಬೆಳೆಯಿತು?

**ಮಾನವನೇಕೆ ಅಂಗ ಮುಚ್ಚಿಕೊಳ್ಳುತ್ತಾನೆ?**

ಬೇರಾವ ಪ್ರಾಣಿ ಪ್ರಭೇದದಲ್ಲಿಯೂ ಹಾಗೆ ಲಿಂಗ ಸಂಬಂಧಿ ಅಥವಾ ಸಂಭೋಗ ಸಂಬಂಧಿ ಅಂಗಗಳನ್ನು ಮರೆಮಾಚಿಕೊಳ್ಳುವ ವರ್ತನೆ ಕಾಣಸಿಗದು. ಒಂದು ವೇಳೆ ಇತರೆ ಪ್ರಾಣಿಗಳಿಗೂ ತಮ್ಮ ಲೈಂಗಿಕ ಅಂಗಗಳನ್ನು ಮುಚ್ಚಿಕೊಳ್ಳುವ ಉದ್ದೇಶ ಇದ್ದಿದ್ದರೆ ಅಥವಾ ಆ ವಾಂಛೆ ವಿಕಾಸಗೊಂಡಿದ್ದರೆ, ಅದಕ್ಕಾಗಿ ಅವು ಬಟ್ಟೆಗಳನ್ನೇ ಮೊರೆಹೋಗಬೇಕಿರಲಿಲ್ಲ; ಬದಲಿಗೆ ಕಾಡಿನಲ್ಲಿ ದೊರೆಯುವ ಎಲೆಗಳನ್ನೇ ಹಾಗೆ ಮುಚ್ಚಿಕೊಳ್ಳಲು ಬಳಸಬಹುದಿತ್ತು (ಬಹುಶಃ ಮಾನವ ಹೀಗೆಯೇ ಪ್ರಾರಂಭಿಸಿರಬೇಕು ಕೂಡ). ಯಾವುದೇ ಪ್ರಾಣಿಯಲ್ಲಿಯೂ ಹಾಗೆ ಎಲೆಗಳಿಂದಲೂ ಮುಚ್ಚಿಕೊಳ್ಳುವ ವರ್ತನೆ ಕಾಣದು. ಹಾಗಾಗಿ, ಮಾನವನ ಹೊರತಾಗಿ ಬೇರಾವ ಪ್ರಾಣಿಯಲ್ಲೂ ತಮ್ಮ ಅಂಗಗಳನ್ನು ಮುಚ್ಚಿಕೊಳ್ಳಬೇಕೆಂಬ ವಾಂಛೆ ವಿಕಾಸಗೊಂಡಿಲ್ಲ ಎಂದೆ ತೀರ್ಮಾನಿಸಬಹುದು.

ತಮ್ಮ ಲೈಂಗಿಕ ಭಾಗಗಳನ್ನು ಮುಚ್ಚಿಕೊಳ್ಳುವ ವಾಂಛೆ ಮಾನವ ಪ್ರಭೇದದಲ್ಲಿ ಮಾತ್ರವೇ ಕಂಡು ಬರಲು ಒಂದು ಪ್ರಮುಖ ಕಾರಣವೆಂದರೆ, 'ತಾನು' ಎಂಬ ಸ್ವಾತಿಕೆಯ ಅಥವ ಸ್ವ-ಅಸ್ತಿತ್ವದ ಪ್ರಜ್ಞೆ ನಮ್ಮಲ್ಲಿ ಆಳವಾಗಿ ಪ್ರಕಟಗೊಂಡಿರುವುದು. ಈ ಸ್ವ-ಪ್ರಜ್ಞೆಯಿಂದಾಗಿಯೇ ನೂರಾರು, ಸಾವಿರಾರು ವಿಶಿಷ್ಟ ವರ್ತನೆಗಳು ನಮ್ಮಲ್ಲಿ ನೆಲೆಯಾಗಿವೆ ಎನ್ನಬಹುದು. ಉದಾಹರಣೆಗೆ: 'ನಾಚಿಕೆ', 'ಮಾನ', 'ಮರ್ಯಾದೆ'ಗಳ ಪರಿಕಲ್ಪನೆಗಳು ನಮ್ಮನ್ನು ಬೃಹದಾಕಾರದಲ್ಲಿ ಆವರಿಸಿಕೊಂಡಿರುವುದೇ ನಮ್ಮಲ್ಲಿ 'ತಾನು'/'ನಾನು' ಎಂಬ ಪ್ರಜ್ಞೆ ಆಳವಾಗಿ ಬೇರೂರಿರುವುದರಿಂದ. ನಾಚಿಕೆ, ಮಾನ, ಮರ್ಯಾದೆಗಳು ಅಸ್ತಿತ್ವ ಪಡೆದಿರುವುದೇ 'ಇತರ'ರನ್ನು ನಮ್ಮ ವರ್ತನೆಗಳ ನಿರ್ಣಾಯಕರನ್ನಾಗಿ ಕಂಡಾಗ. ಇತರರ ಮುಂದೆ ತಾನು, ತನ್ನದು ಎಂಬ ಪ್ರಜ್ಞೆ ಮೂಡದಿದ್ದಿದ್ದರೆ ನಮಗೆ ನಾಚಿಕೆಯೇ ಆಗುತ್ತಿರಲಿಲ್ಲ.

ಹಾಗೆಯೇ, ಈ ಸ್ವ-ಅಸ್ತಿತ್ವದ ಪ್ರಜ್ಞೆಯಿಂದಾಗಿಯೇ 'ತಾನು' ಇತರರಿಗೆ ಆಕರ್ಷಕವಾಗಿ, ಸುಂದರವಾಗಿ ಕಾಣಬೇಕು ಎಂಬ ಪ್ರದರ್ಶನಾಭಿಲಾಷೆ ರಾಕ್ಷಸಾಕಾರದಲ್ಲಿ ನಮ್ಮನ್ನು ಆವರಿಸಿಕೊಂಡಿತು ಕೂಡ. ಆ ಸೌಂದರ್ಯದ ಪ್ರದರ್ಶನಾಭಿಲಾಷೆ ಇಲ್ಲದಿದ್ದಿದ್ದರೆ ನಾವು ಬಟ್ಟೆ ತೊಡುತ್ತಿರಲಿಲ್ಲ, ಕಾಸ್ಮೆಟಿಕ್‌ಗಳ ಆವಿಷ್ಕಾರ ಆಗುತ್ತಿರಲಿಲ್ಲ, ಮೂಗಿಗೆ, ಕೆನ್ನೆಗೆ, ಎದೆಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳುವ ಗೋಜಿಗೆ ಹೋಗುತ್ತಿರಲಿಲ್ಲ, ಅಥವಾ ಸೊಂಟದ ಕೊಬ್ಬು ತೆಗೆಸಲು ಪ್ರಯತ್ನಿಸಿ ಜೀವಕ್ಕೇ ಕುತ್ತು ತಂದುಕೊಳ್ಳುತ್ತಿರಲಿಲ್ಲ! ತನ್ನಲ್ಲಿನ ಸೌಂದರ್ಯದ ಕೊರತೆಯನ್ನು ನೀಗಿಸಿಕೊಳ್ಳುವ ಬಯಕೆಯನ್ನು ಅಥವಾ 'ಸೌಂದರ್ಯದಾಹ'ವನ್ನು ಇಂಗಿಸಲೆಂದೇ ಸುಂದರ ಬ್ರಾಗಳ, ವೈವಿಧ್ಯಮಯ ಅಂಡರ್‌ವೇರ್‌ಗಳ, ಡಿಸೈನರ್ ಬಟ್ಟೆಗಳ ಮೊರೆಹೋಗುತ್ತಿರುವುದು, 'ಸ್ಕಿನ್ ಡಾಕ್ಟರ್'ಗಳ ಚರ್ಮದ ಕುಲುಮೆಯಲ್ಲಿ ನಮ್ಮ ದೇಹವನ್ನೇ ಸಾಣೆ ಹಿಡಿಯಲು ಒಡ್ಡಿಕೊಳ್ಳುತ್ತಿರುವುದು. ■

(ನಾಳೆಯ ಸಂಚಿಕೆಯಲ್ಲಿ: ಗಂಡಿಗೇಕೆ ಶೇವ್ ಮಾಡುವ ಗತ್ತು?)

## ಚುರುಮುರಿ

### ಅಲ್ಲು ಅರ್ಜುನ್ ಜತೆ ನಟಿಸಲು ಇಷ್ಟವೆಂದ ಅಕ್ಷಯ್



ದಕ್ಷಿಣ ಮತ್ತು ಉತ್ತರ ಭಾರತದ ಚಿತ್ರರಂಗ ಎಂಬ ವಿಭಾಗೀಕರಣದ ಕುರಿತ ಚರ್ಚೆ ಜೋರಾಗಿ ನಡೆಯುತ್ತಿರುವ ಹೊತ್ತಿನಲ್ಲಿ ನಟ ಅಕ್ಷಯ್ ಕುಮಾರ್ ಇವುಗಳಿಗೆ ಬ್ರೇಕ್ ಹಾಕಿ ಎಂದಿದ್ದಾರೆ. ನಾವೆಲ್ಲರೂ ಭಾರತೀಯ ಚಿತ್ರರಂಗದವರು ಎಂದಿರುವ ಅಕ್ಷಯ್ ಕುಮಾರ್ ನಾನು ಸದ್ಯದಲ್ಲೇ ಅಲ್ಲು ಅರ್ಜುನ್ ಜತೆ ನಟಿಸಲಿದ್ದೇನೆ ಎಂದು ಹೇಳಿದ್ದಾರೆ. ಅಕ್ಷಯ್‌ಕುಮಾರ್ ನಟನೆಯ 'ಸಾಮ್ರಾಟ್ ಪೃಥ್ವಿರಾಜ್' ಸಿನಿಮಾ ಬಿಡುಗಡೆಯಾಗಿ ಯಶಸ್ವಿಯಾಗುತ್ತಿದೆ.

### 200 ಕೋಟಿ ವೆಚ್ಚದಲ್ಲಿ ಹೀರಾಮಂಡಿ



ಬಾಲಿವುಡ್‌ನ ಖ್ಯಾತ ನಿರ್ದೇಶಕ ಸಂಜಯ್ ಲೀಲಾ ಭನ್ಸಾಲಿ ಯಾವುದೇ ಸಿನಿಮಾ ಮಾಡಿದರೂ ಅದು ದೊಡ್ಡ ಮಟ್ಟದಲ್ಲಿರುತ್ತದೆ. ಮೇಕಿಂಗ್ ವಿಚಾರದಲ್ಲಿ ಅವರು ಕಾಂಪ್ರಮೈಸ್ ಆಗುವುದೇ ಇಲ್ಲ. ಮೊನ್ನೆ ಮೊನ್ನೆ ಬಿಡುಗಡೆಯಾದ 'ಗಂಗೂಬಾಯಿ ಕಾಠಿಯಾವಾಡಿ' ಸಿನಿಮಾ ಸಹ ಈ ವಿಚಾರಕ್ಕೇ ಸದ್ದು ಮಾಡಿತ್ತು. ಈಗ 'ಹೀರಾಮಂಡಿ' ಎಂಬ ಸಿನಿಮಾವನ್ನು ಅವರು ಕೈಗೆತ್ತಿಕೊಂಡಿದ್ದು, ಅದಕ್ಕೆ 200 ಕೋಟಿ ರೂಪಾಯಿ ಬಜೆಟ್ ಆಗಲಿದೆಯಂತೆ.

# ಚಾರ್ಲಿಗಾಗಿ 167 ದಿನ ನಟಿಸಿದ ಶ್ವಾನ

**ರಕ್ಷಿತ್ ಶೆಟ್ಟಿ ನಾಯಕರಾಗಿ ನಟಿಸಿರುವ '777 ಚಾರ್ಲಿ' ಸಿನಿಮಾ ಇದೇ ಶುಕ್ರವಾರ ಬಿಡುಗಡೆಯಾಗುತ್ತಿದ್ದು ಸಿನಿಮಾದಲ್ಲಿ 'ಚಾರ್ಲಿ' ಹೆಸರಿನ ನಾಯಿಯೊಂದು ಅದ್ಭುತವಾಗಿ ನಟಿಸಿದೆ. ಅದನ್ನು ನಟಿಸುವಂತೆ ಮಾಡಿದ ರೋಚಕ ಕಥೆಯನ್ನು ನಿರ್ದೇಶಕರು ಲವಲVK ಜತೆ ಹಂಚಿಕೊಂಡಿದ್ದಾರೆ.**





ಇಡೀ ಸಿನಿಮಾವನ್ನು 167 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಚಾರ್ಲಿಯಿಂದ ನಟನೆ ತೆಗೆಸುವುದು ನಮಗೆ ಚಾಲೆಂಜಿಂಗ್ ಆಗಿತ್ತು. ಪ್ರತಿದಿನ ಹಲವು ಆಹಾರ ನೀಡುತ್ತಿದ್ದೆವು, ಅದು ನಟಿಸುತ್ತಿತ್ತು. ಒಮ್ಮೊಮ್ಮೆ ಆಹಾರ ಹೆಚ್ಚಾಗಿ ಅದಕ್ಕೆ ಹೊಟ್ಟೆ ತುಂಬಿ ನಟಿಸುತ್ತಿರಲಿಲ್ಲ. ಜತೆಗೆ ಚಾರ್ಲಿಗೆ ಮೂಡ್ ಇಲ್ಲ ಎಂದರೂ ಸಹ ನಾವು ನಟನೆ ತೆಗೆಸಲು ಹರಸಾಹಸ ಪಡಬೇಕಾಗಿತ್ತು. ಆದರೆ ಈಗ ತೆರೆಮೇಲೆ ಅದರ ನಟನೆ ನೋಡಿದರೆ ಅದ್ಭುತವಾಗಿದೆ ಎನಿಸುತ್ತದೆ.

-ಕಿರಣ್ ರಾಜ್। ನಿರ್ದೇಶಕ

ಹರೀಶ್ ಬಸವರಾಜ್
harish.b@timesgroup.com


ಹಲವು ಸಾಕುನಾಯಿಗಳು ಬಾಲ್ ತಾ, ಪೇಪರ್ ತಾ ಎಂದರೆ ತರುತ್ತವೆ, ಅತ್ತ ಹೋಗು, ಇತ್ತ ಬಾ ಎಂದರೆ ಅರ್ಥ ಮಾಡಿಕೊಳ್ಳುತ್ತವೆ. ಹೀಗೆ ಜನರಿಗೆ ಹೊಂದಿಕೊಂಡ, ಮಾತನ್ನರಿತು ನಡೆದುಕೊಳ್ಳುವ ನಾಯಿಯೊಂದು ಮುಖ್ಯಪಾತ್ರದಲ್ಲಿ ನಟಿಸಿರುವ ಚಿತ್ರ, '777 ಚಾರ್ಲಿ'. ಈಗಾಗಲೇ ಟ್ರೇಲರ್, ಹಾಡುಗಳಿಂದ ದೇಶದಾದ್ಯಂತ ಗಮನ ಸೆಳೆದಿರುವ ಈ ಸಿನಿಮಾದಲ್ಲಿ ಚಾರ್ಲಿ ಪಾತ್ರಧಾರಿ ನಾಯಿಯೇ ಮುಖ್ಯ ಆಕರ್ಷಣೆ. ಇದೊಂದು ಮಾನವ ಮತ್ತು ನಾಯಿಯ ನಡುವಿನ ಅನುಬಂಧದ ಕಥೆ. ರಕ್ಷಿತ್ ಶೆಟ್ಟಿಗಿಂತಲೂ 'ಚಾರ್ಲಿ'ಯೇ ಸಿನಿಮಾದ ಹೆಚ್ಚಿನ ದೃಶ್ಯಗಳಲ್ಲಿದೆ ಎಂಬುದು ನಿರ್ದೇಶಕ ಕಿರಣ್ ರಾಜ್ ಅವರ ಮಾತು.

"777 ಚಾರ್ಲಿ ಸಿನಿಮಾದಲ್ಲಿ ಚಾರ್ಲಿಯ ನಟನೆ ಅದ್ಭುತವಾಗಿದೆ. ಚಾರ್ಲಿಯನ್ನು ನಟಿಸುವಂತೆ ಮಾಡುವುದು ನಮಗೆ ದೊಡ್ಡ ಸವಾಲಾಗಿತ್ತು. ಅದೇ ಕಾರಣಕ್ಕೆ ಸಿನಿಮಾ ಮುಗಿಯಲು ಮೂರು ವರ್ಷವಾಯಿತು. ಜತೆಗೆ ನಮ್ಮ ಸಿನಿಮಾ ಅಷ್ಟು ದೀರ್ಘವಾಗಲು ಕಾರಣ ಏನು ಎಂಬುದು ಸಿನಿಮಾ ನೋಡಿದರೆ ಗೊತ್ತಾಗುತ್ತದೆ. ಪ್ರತಿಯೊಂದು ದೃಶ್ಯದಲ್ಲಿಯೂ ಚಾರ್ಲಿ ಅಷ್ಟು ಅದ್ಭುತವಾಗಿ ನಟಿಸಿದ್ದಾಳೆ. ಇದು ನಮಗೆ ಆನಂದದಾಯಕ ಮತ್ತು ಸವಾಲು ಎರಡೂ ಆಗಿತ್ತು. ಚಾರ್ಲಿಯ ಬಳಿ ನಾವು ಟಾಸ್ಕ್‌ಗಳನ್ನು ಮಾಡಿಸಲು ಸಹಾಯ ಮಾಡಿದ್ದು ಟ್ರೇನರ್ ಪ್ರಮೋದ್ ಬಿ.ಸಿ. ಅವರು ನಮ್ಮ ತಂಡದ ಸದಸ್ಯರೇ ಆಗಿ ಹೋಗಿದ್ದರು. ಚಾರ್ಲಿಯ ಪ್ರತಿ ನಟನೆಯನ್ನು ಅವರೇ ಮಾಡಿಸಿದ್ದಾರೆ' ಎಂದು ಹೇಳಿದ್ದಾರೆ ನಿರ್ದೇಶಕ ಕಿರಣ್ ರಾಜ್.

'ಚಾರ್ಲಿ 350ರಿಂದ 400ರಿಂದ ಟಾಸ್ಕ್ ಅನ್ನು ಮಾಡಿದೆ. ಇವುಗಳನ್ನು ಮಾಡಲು ಚಾರ್ಲಿಗೆ ಸಿಕ್ಕಾಪಟ್ಟೆ ಟ್ರೀಟ್ ಕೊಟ್ಟಿದ್ದೇವೆ. ಒಳ್ಳೊಳ್ಳೆ ಫುಡ್ ನೀಡುತ್ತಾ ಅವುಗಳನ್ನು ಸಂತೃಪ್ತಿ ಇದನ್ನು ಮಾಡಿದ್ದೇವೆ. ಒಂದು ವೇಳೆ ಕೊಡುತ್ತಿದ್ದ ಆಹಾರ ಪದೇಪದೆ ರಿಪೀಟ್ ಆದರೆ ಚಾರ್ಲಿ ಡಲ್ ಆಗುತ್ತಿದ್ದಳು. ಟಾಸ್ಕ್‌ಗಳಿಗೆ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಇಲ್ಲಿ ಹೇಗಿತ್ತು ಎಂದರೆ ರಕ್ಷಿತ್, ರಾಜ್ ಬಿ. ಶೆಟ್ಟಿ, ಸಂಗೀತಾ ಶೃಂಗೇರಿ, ಡಾನಿಶ್ -ಈ ನಾಲ್ಕು ಜನ ಚಾರ್ಲಿಯ ಪರ್ಫಾರ್ಮೆನ್ಸ್ ಬಗ್ಗೆ ಬಹಳ ಎಚ್ಚರಿಕೆಯಿಂದ ಇರುತ್ತಿದ್ದರು. ಅದರ ನಟನೆಯಾದ ತಕ್ಷಣ ಅವರು ಜಾಗ್ರತರಾಗಿ ನಟಿಸಲು ಆರಂಭಿಸುತ್ತಿದ್ದರು' ಎಂದಿದ್ದಾರೆ ಕಿರಣ್ ರಾಜ್.

'ಇಡೀ ತಂಡದಲ್ಲಿ ಚಾರ್ಲಿಯನ್ನು ನೋಡಿಕೊಂಡಷ್ಟು ಚೆನ್ನಾಗಿ ನಾವು ಯಾರನ್ನೂ ನೋಡಿಕೊಂಡಿಲ್ಲ. ಅದಕ್ಕಾಗಿ ಎಸಿ ಇರುವ ಕ್ಯಾರವಾನ್ ಅನ್ನು ವಿಶೇಷವಾಗಿ ರೆಡಿ ಮಾಡಿದ್ದೆವು. ಕಾಶ್ಮೀರದಲ್ಲಿಯೂ ಕ್ಯಾರವಾನ್‌ನ ಒಳಗಡೆ ವಿಶೇಷ ಸೌಲಭ್ಯ ಕಲ್ಪಿಸಿ ಅದರ ಆರೋಗ್ಯವನ್ನು ಕಾಪಾಡಿದ್ದೇವೆ. ಕೆಲವೊಮ್ಮೆ ದಿನಕ್ಕೆ ಒಂದೇ ಒಂದು ಶಾಟ್ ತೆಗೆದಿದ್ದೇವೆ. ಸಿನಿಮಾ ನೋಡಿದವರಿಗೆ ಚಾರ್ಲಿಯ ನಟನೆಯೇ ಅದ್ಭುತ ಎಂಬುದು ತಿಳಿಯುತ್ತದೆ. ನಾಯಿಯ ಬಗ್ಗೆ ಇದುವರೆಗೂ ಬಂದಿರುವ ಹಲವು ಸಿನಿಮಾಗಳಲ್ಲಿರುವ ನಾಯಿಗಳ ನಟನೆಗೆ ಹೋಲಿಸಿಕೊಂಡರೆ ನಮ್ಮ ಚಾರ್ಲಿಯ ನಟನೆ ಅದ್ಭುತವಾಗಿದೆ. ಅದನ್ನು ಸಿನಿಮಾ ನೋಡಿದವರೂ ಹೇಳುತ್ತಾರೆ' ಎಂಬುದು ನಿರ್ದೇಶಕ ಕಿರಣ್ ರಾಜ್ ಅವರ ಮಾತು.

'ಚಾರ್ಲಿ 777' ಈಗಾಗಲೇ ದೆಹಲಿ ಸೇರಿದಂತೆ ಒಂದಷ್ಟು ನಗರಗಳಲ್ಲಿ ಪ್ರೀಮಿಯರ್ ಕಂಡಿದ್ದು ನೋಡಿದವರೆಲ್ಲರೂ ಸಿನಿಮಾ ಮೆಚ್ಚಿಕೊಂಡಿದ್ದಾರೆ. ರಾಜಕಾರಣಿ ಮತ್ತು ಪ್ರಾಣಿಪ್ರಿಯೆ ಮನೇಕಾ ಗಾಂಧಿ ಸಿನಿಮಾ ನೋಡಿ ಚಿತ್ರತಂಡಕ್ಕೆ ಮೆಚ್ಚುಗೆ ಸೂಚಿಸಿದ್ದಾರೆ. ರಕ್ಷಿತ್ ಶೆಟ್ಟಿ ತಮ್ಮ ಪರಂವಃ ಬ್ಯಾನರ್‌ನಡಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ■



# ಬೈರಾಗಿ ಜುಲೈ 1ರಂದು ತೆರೆಗೆ



ಪೃಥ್ವಿ ಅಂಬಾರ್, ಶಿವರಾಜ್‌ಕುಮಾರ್, ಡಾಲಿ

**ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ನಾಯಕರಾಗಿರುವ 'ಬೈರಾಗಿ' ಸಿನಿಮಾದ ರಿಲೀಸ್ ದಿನಾಂಕ ಅನೌನ್ಸ್ ಆಗಿದೆ. ಈ ಸಿನಿಮಾದ ಒಂದಷ್ಟು ವಿವರಗಳು ಇಲ್ಲಿವೆ.**

'ಬೈರಾಗಿ' ಸಿನಿಮಾದಲ್ಲಿ ಎಲ್ಲ ವರ್ಗದವರಿಗೂ ಇಷ್ಟವಾಗುವಂತಹ ಅಂಶಗಳಿವೆ. ನನ್ನ ಮತ್ತು ಡಾಲಿ ಕಾಂಬಿನೇಶನ್‌ನಲ್ಲಿ ಪ್ರೇಕ್ಷಕರಿಗೆ ಭರ್ಜರಿ ರಸದೌತಣ ಸಿಗಲಿದೆ. ಪೃಥ್ವಿ ಅಂಬಾರ್, ಶಶಿಕುಮಾರ್ ಸೇರಿದಂತೆ ಹಲವರ ನಟನೆಯೂ ಬಹಳ ಚೆನ್ನಾಗಿದೆ. ಯುವ ನಿರ್ಮಾಪಕ ಕೃಷ್ಣ ಅವರ ಪ್ರಯತ್ನಕ್ಕೆ ಖಂಡಿತ ಜಯ ಸಿಗಲಿದೆ.

-ಶಿವರಾಜ್‌ಕುಮಾರ್। ನಟ

ಲವಲVK ಸುದ್ದಿಲೋಕ
feedbacklvk@vijaykarnataka.com

ಟಗರು ಚಿತ್ರದ ನಂತರ ಶಿವರಾಜ್‌ಕುಮಾರ್ ಮತ್ತು ಡಾಲಿ ಧನಂಜಯ ಕಾಂಬಿನೇಶನ್‌ನ ಎರಡನೇ ಸಿನಿಮಾ 'ಬೈರಾಗಿ' ಜುಲೈ 1ರಂದು ತೆರೆಮೇಲೆ ಬರಲಿದೆ. ಈಗಾಗಲೇ ಹಾಡುಗಳ ಮೂಲಕ ಸಿನಿಮಾ ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿದೆ.

ತಮಿಳಿನ ಖ್ಯಾತ ನಿರ್ದೇಶಕ ಸಿನಿಮಾಟೋಗ್ರಾಫರ್ ವಿಜಯ್ ಮಿಲ್ಟನ್ ನಿರ್ದೇಶನ ಮಾಡಿರುವ ಈ ಸಿನಿಮಾವನ್ನು ಕೃಷ್ಣ ಸಾರ್ಥಕ್ ನಿರ್ಮಾಣ ಮಾಡಿದ್ದಾರೆ. ಈಗಾಗಲೇ ಅನೂಪ್ ಸೀಳಿನ್ ಅವರ ಸಂಗೀತದ ಹಾಡುಗಳು ಬಿಡುಗಡೆಯಾಗಿ ವೈರಲ್ ಆಗುತ್ತಿವೆ. ಅದರಲ್ಲೂ ಮೊನ್ನೆ ಬಿಡುಗಡೆಯಾದ 'ರಿದಂ ಆಫ್ ಶಿವಪ್ಪ' ಹಾಡು ಬಹುಬೇಗ ಹತ್ತು ಲಕ್ಷ ಮಂದಿ ನೋಡಿದ ಹಾಡಿನ ಪಟ್ಟಿಗೆ ಸೇರಿಕೊಂಡಿದೆ.

'ಶಿವರಾಜ್‌ಕುಮಾರ್ ಅವರ ವಿಭಿನ್ನ ಅವತಾರಗಳು ಈ ಸಿನಿಮಾದಲ್ಲಿ ಕಂಡು ಬರುತ್ತವೆ. 'ಟಗರು' ನಂತರ ಶಿವಣ್ಣ ಮತ್ತು ಡಾಲಿ ಒಟ್ಟಿಗೆ ನಟಿಸಿದ್ದು, ಅದಕ್ಕಿಂತ ವಿಭಿನ್ನವಾದ ಕಾಂಬಿನೇಶನ್ ಇದಾಗುತ್ತದೆ. ಇವರಿಬ್ಬರ ಜತೆಗೆ ಪೃಥ್ವಿ ಅಂಬಾರ್ ಅವರದ್ದು ಬೋನಸ್ ರೀತಿ ಫೀಲ್ ಆಗುತ್ತದೆ. ಈ ಸಿನಿಮಾದಲ್ಲಿ ಭಾವನಾತ್ಮಕ ಅಂಶಗಳು, ಆ್ಯಕ್ಷನ್ ಹೀಗೆ ಎಲ್ಲವೂ ಇದ್ದು ಇದೊಂದು ಆ್ಯಕ್ಷನ್ ಡ್ರಾಮಾ ಪ್ಯಾಕೇಜ್ ಆಗಿದೆ' ಎಂದು ಚಿತ್ರತಂಡ ಮಾಹಿತಿ ನೀಡಿದೆ.

ಈ ಸಿನಿಮಾದಲ್ಲಿ ಯಶಾ ಶಿವಕುಮಾರ್ ಮತ್ತು ಬಹುಭಾಷಾ ನಟಿ ಅಂಜಲಿ ನಾಯಕಿಯರಾಗಿ ನಟಿಸಿದ್ದಾರೆ. ಡಾಲಿ ಧನಂಜಯ, ಪೃಥ್ವಿ ಮತ್ತು ಯಶಾ ಶಿವಕುಮಾರ್ ಅವರ ತ್ರಿಕೋನ ಪ್ರೇಮಕಥೆ ಮತ್ತು ಶಿವರಾಜ್‌ಕುಮಾರ್ ಮತ್ತು ಅಂಜಲಿ ನಡುವಿನ ಪ್ರೇಮಕಥೆಯೂ ಇದರಲ್ಲಿದೆ. ಇವರೆಲ್ಲರ ಜತೆ ಹಿರಿಯ ನಟ ಶಶಿಕುಮಾರ್ ಅವರದ್ದು ಪ್ರಮುಖ ಪಾತ್ರವಾಗಿದ್ದು, ಅದು ಸಹ ಚಿತ್ರಕಥೆಯಲ್ಲಿ ಹೊಸ ತಿರುವುಗಳನ್ನು ನೀಡುತ್ತದೆಯಂತೆ.

ಶಿವರಾಜ್‌ಕುಮಾರ್ ಅವರ ಹುಲಿವೇಷದ ಪೋಸ್ಟರ್‌ಗಳು ಸಹ ವೈರಲ್ ಆಗಿವೆ. 'ರಿದಂ ಆಫ್ ಶಿವಪ್ಪ' ಹಾಡನ್ನು ಸಿಂಗಲ್ ಟೇಕ್‌ನಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದಿರುವ ಚಿತ್ರತಂಡ, ಬೈರಾಗಿ ಯಾರು, ಇದಕ್ಕೆ 'ಬೈರಾಗಿ' ಎಂಬ ಟೈಟಲ್ ಯಾಕಿಡಲಾಗಿದೆ ಎಂಬುದನ್ನು ಸಹ ಚಿತ್ರ ಮಂದಿರದಲ್ಲಿಯೇ ನೋಡಿ ತಿಳಿಯಬೇಕು ಎಂದಿದೆ. ■


# ಲಂಡನ್ ಕೆಫೆಯಲ್ಲಿ ಆಪರೇಷನ್

ಲವಲVK ಸುದ್ದಿಲೋಕ
feedbacklvk@vijaykarnataka.com



ಮೇಘಾ ಶೆಟ್ಟಿ

ಕವೀಶ್ ಶೆಟ್ಟಿ ಎಂಬ ಹೊಸ ಪ್ರತಿಭೆ ನಾಯಕರಾಗಿರುವ ಮತ್ತು 'ಜೊತೆ ಜೊತೆಯಲಿ' ಧಾರಾವಾಹಿ ಖ್ಯಾತಿಯ ಮೇಘಾ ಶೆಟ್ಟಿ ನಟಿಸುತ್ತಿರುವ ಸಿನಿಮಾ ಆರಂಭದಿಂದಲೂ ಸದ್ದು ಮಾಡುತ್ತಲೇ ಇದೆ. ಈ ಸಿನಿಮಾಗೆ ಈಗ 'ಅಪ್ಪರ್ ಆಪರೇಷನ್ ಲಂಡನ್ ಕೆಫೆ' ಎಂದು ಹೆಸರಿಡಲಾಗಿದೆ. ಟೈಟಲ್ ಮತ್ತು ಸಿನಿಮಾದ ಫಸ್ಟ್ ಲುಕ್ ಅನ್ನು ಸ್ಯಾಂಡಲ್‌ವುಡ್‌ನ ಖ್ಯಾತ ನಟ, ನಿರ್ದೇಶಕ ರಿಷಬ್ ಶೆಟ್ಟಿ ಬಿಡುಗಡೆ ಮಾಡಿದ್ದಾರೆ.



ಕವೀಶ್ ಶೆಟ್ಟಿ

ರಿಷಭ್ ಶೆಟ್ಟಿ ಅವರ ಸ್ನೇಹಿತ ಸಡಗರ ರಾಘವೇಂದ್ರ ಅವರು ಈ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಕನ್ನಡ, ಮರಾಠಿ, ಹಿಂದಿ, ತಮಿಳು, ತೆಲುಗು, ಮಲಯಾಳಂ ಭಾಷೆಯಲ್ಲಿ ತಯಾರಾಗುತ್ತಿರುವ ಈ ಸಿನಿಮಾದ ಬಹುತೇಕ ಚಿತ್ರೀಕರಣ ಮುಗಿದಿದೆ. ಆದರೆ ಇದುವರೆಗೂ ಟೈಟಲ್ ಮಾತ್ರ ಇಟ್ಟಿರಲಿಲ್ಲ, ಈಗ ಅದು ರಿವೀಲ್ ಆಗಿದೆ.

ಇದೊಂದು ದೊಡ್ಡ ಮಟ್ಟದ ಆ್ಯಕ್ಷನ್ ಪ್ಯಾಕೇಜ್ ಆಗಿದ್ದು, ಹಾಲಿವುಡ್ ಶೈಲಿಯ ಮೇಕಿಂಗ್ ಇರಲಿದೆಯಂತೆ. ಪೋಸ್ಟರ್‌ನಲ್ಲಿಯೂ ಅದು ಎದ್ದು ಕಾಣುತ್ತಿದೆ. ನುರಿತ ತಾಂತ್ರಿಕ ವರ್ಗ ಹಾಗೂ ಕನ್ನಡ, ಮರಾಠಿ ಮತ್ತು ಬಹುಭಾಷಾ ಕಲಾವಿದರನ್ನು ಹೊಂದಿರುವ ಲಂಡನ್ ಕೆಫೆಯ ಬಗೆಗಿನ ಹೆಚ್ಚಿನ ವಿವರವನ್ನು ನಿರ್ದೇಶಕ ಸಡಗರ ರಾಘವೇಂದ್ರ ಮುಂದಿನ ದಿನಗಳಲ್ಲಿ ಬಿಚ್ಚಿಡಲಿದ್ದಾರಂತೆ. 'ರಿಷಭ್ ಶೆಟ್ಟಿಯವರು ನಮ್ಮ ಸಿನಿಮಾದ ಟೈಟಲ್ ಮತ್ತು ಫಸ್ಟ್ ಲುಕ್ ಲಾಂಚ್ ಮಾಡಿಕೊಟ್ಟಿದ್ದು ನಮಗೆ ಸಂತೋಷದ ಸಂಗತಿ. ಪ್ರೇಕ್ಷಕರ ನಿರೀಕ್ಷೆಯಂತೆ ಈ ಸಿನಿಮಾ ಅದ್ದೂರಿಯಾಗಿ ಮೂಡಿ ಬಂದಿದೆ' ಎಂದಿದ್ದಾರೆ ನಿರ್ದೇಶಕ ರಾಘವೇಂದ್ರ. ■

# ಮಹೇಶ್ ಬಾಬು ಸಿನಿಮಾದಲ್ಲಿ ರವಿಚಂದ್ರನ್

**ಸ್ಯಾಂಡಲ್‌ವುಡ್‌ನ ಕ್ರೇಜಿಸ್ಟಾರ್ ರವಿಚಂದ್ರನ್ ಇತ್ತೀಚೆಗಷ್ಟೇ ತಮ್ಮ 61ನೇ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿಕೊಂಡರು. ಈಗ ಅವರ ಆಪ್ತವಲಯದಿಂದ ಹೊಸ ಸುದ್ದಿಯೊಂದು ಹೊರಬಿದ್ದಿದೆ.**

ಲವಲVK ಸುದ್ದಿಲೋಕ
feedbacklvk@vijaykarnataka.com

ವಯಸ್ಸು 61 ಆದರೂ ಹಲವು ಸಿನಿಮಾಗಳನ್ನು ಕೈಯಲ್ಲಿ ಇಟ್ಟುಕೊಂಡಿರುವ ಕ್ರೇಜಿಸ್ಟಾರ್ ರವಿಚಂದ್ರನ್‌ಗೆ ತೆಲುಗು ಚಿತ್ರರಂಗದಿಂದ ಆಫರ್ ಬಂದಿದೆ ಎನ್ನಲಾಗಿದೆ. ಸದ್ಯ ಸಿಕ್ಕಿರುವ ಮಾಹಿತಿ ಪ್ರಕಾರ ಮಹೇಶ್ ಬಾಬು ಮತ್ತು ತ್ರಿವಿಕ್ರಮ್ ಶ್ರೀನಿವಾಸ್ ಕಾಂಬಿನೇಶನ್‌ನ ಸಿನಿಮಾದಲ್ಲಿ ರವಿಚಂದ್ರನ್ ಅವರನ್ನು ನಟಿಸುವಂತೆ ಕೇಳಲಾಗಿದೆ.


'ಸರ್ಕಾರು ವಾರಿ ಪಾಟ' ಸಿನಿಮಾದಿಂದ ಭರ್ಜರಿ ಸಕ್ಸಸ್ ಪಡೆದುಕೊಂಡಿರುವ ನಟ ಮಹೇಶ್ ಬಾಬು ಈಗ ಹೊಸ ಸಿನಿಮಾದ ಶೂಟಿಂಗ್ ಆರಂಭಿಸಲು ಸಜ್ಜಾಗಿದ್ದಾರೆ. 'ಅಲಾ ವೈಕುಂಠಪುರಮುಲೋ'ದಂತಹ ಬ್ಲಾಕ್ ಬಸ್ಟರ್ ಹಿಟ್ ನೀಡಿದ ನಿರ್ದೇಶಕ ತ್ರಿವಿಕ್ರಮ್ ಶ್ರೀನಿವಾಸ್ ಸಹ ಮಹೇಶ್ ಬಾಬುಗಾಗಿ ಭರ್ಜರಿ ಮಾಸ್ ಕಥೆಯೊಂದನ್ನು ಸಿದ್ಧಪಡಿಸಿಕೊಂಡಿದ್ದು, ಜೂನ್ ತಿಂಗಳ ಕೊನೆಯಿಂದ ಚಿತ್ರೀಕರಣ ಆರಂಭವಾಗಲಿದೆ. ಇದೇ ಸಿನಿಮಾದಲ್ಲೀಗ ರವಿಚಂದ್ರನ್ ನಟಿಸಲಿದ್ದಾರೆ ಎಂಬ ಗಾಸಿಪ್ ಹಬ್ಬಿದೆ.

ಈ ಹೊಸ ಸಿನಿಮಾದಲ್ಲಿ ಮಹೇಶ್ ಬಾಬು ಅವರ ತಂದೆಯ ಪಾತ್ರದಲ್ಲಿ ರವಿಚಂದ್ರನ್ ಕಾಣಿಸಿಕೊಳ್ಳಲಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ಈಗಾಗಲೇ ಕನ್ನಡದಲ್ಲಿ ಸುದೀಪ್, ಗಣೇಶ್ ಮುಂತಾದ ನಟರಿಗೆ ತಂದೆಯ ಪಾತ್ರ ಮಾಡಿರುವ ರವಿಚಂದ್ರನ್ ಈಗ ಮಹೇಶ್ ಬಾಬುಗೂ ತೆರೆಯ ಮೇಲೆ ತಂದೆಯಾಗಲಿದ್ದಾರೆ. ಇದು ಸಿನಿಮಾದ ಪ್ರಮುಖ ಅಂಶಗಳಲ್ಲಿ ಒಂದು. ಹಾಗಾಗಿ ರವಿಚಂದ್ರನ್ ಅವರು ಒಪ್ಪಿಕೊಳ್ಳಬಹುದು ಎಂಬ ಮಾತು ಕೇಳಿ ಬರುತ್ತಿದೆ.

**ಟಾಲಿವುಡ್ ನಂಟು**

ರವಿಚಂದ್ರನ್ ಅವರಿಗೆ ಮೊದಲಿನಿಂದಲೂ ತೆಲುಗು ಚಿತ್ರರಂಗದೊಂದಿಗೆ ಉತ್ತಮ ಒಡನಾಟ ಇದೆ. ಚಿರಂಜೀವಿ, ನಾಗಾರ್ಜುನ ಸೇರಿದಂತೆ ಅನೇಕ ನಟರು ಕ್ರೇಜಿಸ್ಟಾರ್ ಅವರ ಆತ್ಮೀಯ ಸ್ನೇಹಿತರು. 'ಶಾಂತಿ ಕ್ರಾಂತಿ' ಸಿನಿಮಾವನ್ನು ತೆಲುಗು ಭಾಷೆಯಲ್ಲಿಯೂ ರವಿಚಂದ್ರನ್ ನಿರ್ಮಾಣ ಮಾಡಿದ್ದರು. ಆ ಸಿನಿಮಾಗೆ ನಾಗಾರ್ಜುನ ನಾಯಕರಾಗಿದ್ದರು. ರವಿಚಂದ್ರನ್ ಅವರ ಸೂಪರ್ ಹಿಟ್ ಸಿನಿಮಾಗಳಲ್ಲಿ ಒಂದಾದ 'ಸಿಪಾಯಿ' ಚಿತ್ರಕ್ಕಾಗಿ ಚಿರಂಜೀವಿ ಅವರನ್ನು ಕರೆತಂದಿದ್ದರು. ಆನಂತರ ಆ ಸಿನಿಮಾವನ್ನು 'ಮೇಜರ್' ಹೆಸರಿನಲ್ಲಿ ತೆಲುಗಿಗೆ ಡಬ್ ಮಾಡಿ ಬಿಡುಗಡೆ ಮಾಡಿದ್ದರು. ತೆಲುಗಿನ ಅಲ್ಲು ಅರವಿಂದ್ ಕನ್ನಡದಲ್ಲಿ ನಿರ್ಮಾಣ ಮಾಡಿದ್ದ 'ಮಾಂಗಲ್ಯಂ ತಂತುನಾನೇನ' ಸಿನಿಮಾದಲ್ಲಿ ರವಿಚಂದ್ರನ್ ನಟಿಸಿದ್ದರು. ಹಾಗಾಗಿ ರವಿಚಂದ್ರನ್ ನಟಿಸಲೂಬಹುದು ಎನ್ನಲಾಗಿದೆ. ಈ ವಿಷಯವನ್ನು ಚಿತ್ರತಂಡವಾಗಲಿ, ರವಿಚಂದ್ರನ್ ಆಗಲಿ ಖಚಿತಪಡಿಸಿಲ್ಲ.

ಮಹೇಶ್ ಬಾಬು ಸಿನಿಮಾಗಿಂತಲೂ ಮುನ್ನ ಕರ್ನಾಟಕದ ಗಾಲಿ ಜನಾರ್ದನ ರೆಡ್ಡಿ ಪುತ್ರ ಕಿರೀಟಿ ರೆಡ್ಡಿ ನಟಿಸುತ್ತಿರುವ ಹೊಸ ಸಿನಿಮಾದಲ್ಲಿ ರವಿಚಂದ್ರನ್ ನಟಿಸಲಿದ್ದಾರೆ. ತೆಲುಗಿನಲ್ಲಿಯೂ ಬಿಡುಗಡೆಯಾಗಲಿರುವ ಈ ಸಿನಿಮಾ ಟಾಲಿವುಡ್‌ನ ಖ್ಯಾತ ನಿರ್ಮಾಪಕ ಸಾಯಿ ಕೊರ್ರಪಾಟಿಯವರ ಸಿನಿಮಾ. ■



ರವಿಚಂದ್ರನ್



ಮಹೇಶ್ ಬಾಬು

# ಸೆನ್ಸಾರ್ ಮೆಚ್ಚುಗೆ ಪಡೆದ ಆವರ್ತ



ಜಯಚಂದ್ರ

ಲವಲVK ಸುದ್ದಿಲೋಕ
feedbacklvk@vijaykarnataka.com

ವೇಮುಗಲ್ ಜಗನ್ನಾಥ ರಾವ್ ನಿರ್ದೇಶನ ಮಾಡಿರುವ ವಿಭಿನ್ನ ರೀತಿಯ ಥ್ರಿಲ್ಲರ್ ಚಿತ್ರ 'ಆವರ್ತ'ವನ್ನು ಇತ್ತೀಚೆಗೆ ಸೆನ್ಸಾರ್ ಮಂಡಳಿಯ ಸದಸ್ಯರು ನೋಡಿದ್ದು, ಸಿನಿಮಾದ ಕಂಟೆಂಟ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಉತ್ತಮ ಸಂಭಾಷಣೆ, ಹೊಸತರಹದ ಸ್ಕ್ರೀನ್ ಪ್ಲೇ ಮತ್ತು ಕೊನೆಯವರೆಗೂ ಸೀಟಿನತುದಿಗೆ ಕೂರಿಸುವ ಸಸ್ಪೆನ್ಸ್ ಥ್ರಿಲ್ಲರ್ ಅಂಶಗಳು ಪ್ರೇಕ್ಷಕರನ್ನು ಸೆಳೆಯುತ್ತವೆ ಎಂದಿದ್ದಾರಂತೆ ಸದಸ್ಯರು.

ಹಿರಿಯ ನಟ ದಿವಂಗತ ಎಸ್. ಶಿವರಾಂ ಕೊನೆಯದಾಗಿ ನಟಿಸಿರುವ ಸಿನಿಮಾ ಇದು. ಈ ಚಿತ್ರದ ಮೂಲಕ ಜಯಚಂದ್ರ, ಧನ್ಯಾ ಹೊಸದಾಗಿ ಪರಿಚಯಗೊಳ್ಳುತ್ತಿದ್ದಾರೆ. ನಾಯಕಿಯಾಗಿ ನಯನಾ, ಮೇಘನಾ ಗೌಡ ಇದ್ದಾರೆ. ಕಲ್ಪೇಶ್ ವರ್ಧನ್, ರಾಮರಾವ್, ಶಶಿಧರ್ ಮುಂತಾದವರು ಅಭಿನಯಿಸಿದ್ದಾರೆ.

ಇದೊಂದು ಮಿಸ್ಟರಿ ಸಸ್ಪೆನ್ಸ್ ಥ್ರಿಲ್ಲರ್ ಆಗಿದ್ದು, ಹೊಸಬಗೆಯ ತಾಂತ್ರಿಕತೆ ಹೊಂದಿದೆ ಎಂದಿದೆ ಚಿತ್ರತಂಡ. ಈ ಚಿತ್ರವನ್ನು ಬೆಂಗಳೂರು, ಮಡಿಕೇರಿ, ಉಡುಪಿ, ಕುಂದಾಪುರ, ಕಾರವಾರ ಮುಂತಾದ ಕಡೆ ಚಿತ್ರಿಸಲಾಗಿದೆ. ■

RNI No. KARKAN/2016/71628
Printed and Published by R J Prakashan on behalf of Metropolitan Media Company Limited, Published at No. 4, KSCCF Compound, Pampa Maha Kavi Road, Chamrajpet, Bengaluru -560 018, Ph: 080 40877666 and Printed at (a) Fourth Estate Ltd., No. 9/10/11-A, 4th Main, Bommasandra Industrial Area, Hosur Road, Bengaluru -560 099 (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018 (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204 (d) Metropolitan Media Company Limited., Plot No. 118, Sy. No.532, Honaga Industrial Area, Kakati, Belagavi (e) Metropolitan Media Company Limited., Plot No. 15 & 16, KIADB Rayapur Industrial Area, Hubballi (f) Metropolitan Media Company Limited, Plot No. 9, KSSIDC Industrial Area, Kaladagi Road, Vidyagiri, Bagalkot-587 102 (g) Metropolitan Media Company Limited, Plot No.224, Sy. No.41/2, 41/8 & 42, Kapnoor 2nd Stage Industrial Area, Kalaburagi. (h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited, 284 (Part), 285, 286 & 287, Baikampady Industrial Area, Mangaluru - 575 011. Regd. Office: No.4, KSCCF compound, Pampamahakavi road, Chamarajpet, Bengaluru - 560018 (Ph:080-40877666). Editor: Sudarshan Channangihalli.
© All Rights Reserved. Reproduction in whole or part without permission is prohibited.

**ಕೊರೊನಾ ದಿಕ್ಕಟ್ಟಿನ ನಂತರ ರಾಜ್ಯದಲ್ಲಿ ಪೂರ್ಣಪ್ರಮಾಣದಲ್ಲಿ ಶಾಲೆಗಳು ಆರಂಭಗೊಂಡಿದ್ದು, ಇದರೊಂದಿಗೆ ಸರಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲೆಗಳೂ ಬಾಗಿಲು ತೆರೆದಿವೆ. ಎಲ್ಲ ಕೊರತೆಗಳ ನಡುವೆಯೂ ವಸತಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ. ಕೆಲವು ಕಡೆ ಉತ್ತಮ ಸೌಕರ್ಯಗಳೂ ಇವೆ. ವಿವಿಧ ಜಿಲ್ಲೆಗಳಲ್ಲಿರುವ ವಿದ್ಯಾರ್ಥಿ ನಿಲಯಗಳ ಸ್ಥಿತಿಗತಿ ಕುರಿತು ಒಂದು ನೋಟ.**

# ಸೌಕರ್ಯವಿಲ್ಲದಿದ್ದರೂ ಹಾಸ್ಟೆಲ್‌ಗೆ ಬೇಡಿಕೆ!

ವಿಕ REALITY CHECK

**ಮೈಸೂರು:** ಜಿಲ್ಲೆಯಲ್ಲಿ 37 ವಸತಿ, 21 ಆಶ್ರಮ ಶಾಲೆಗಳಿವೆ. ಈ ಬಾರಿ ಹೆಚ್ಚಿನ ಅರ್ಜಿಗಳು ಬಂದಿವೆ. 2 ವರ್ಷಗಳ ಬಳಿಕ ಪೂರ್ಣ ಪ್ರಮಾಣದಲ್ಲಿ ಆರಂಭಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಜ್ಜಾಗಿದೆ. ಸ್ವಚ್ಛತೆ, ದುರಸ್ತಿ, ಸುಣ್ಣಬಣ್ಣ ಬಳಿಯುವ ಕೆಲಸ ಸಾಗಿದೆ. ಮೂಲಸೌಕರ್ಯ ಒದಗಿಸಲಾಗಿದೆ.

**ಹಾಸನ:** ಬಿಸಿಎಂ ಹಾಸ್ಟೆಲ್‌ನಲ್ಲಿ 2,500, ಸಮಾಜ ಕಲ್ಯಾಣ ಇಲಾಖೆಯ 125 ಹಾಸ್ಟೆಲ್‌ನಲ್ಲಿ 13,350 ವಿದ್ಯಾರ್ಥಿಗಳಿದ್ದಾರೆ. ಕೊರೊನಾ ನಾಲ್ಕನೇ ಅಲೆ ಎಚ್ಚರಿಕೆ ಹಿನ್ನೆಲೆ ಶುಚಿತ್ವಕ್ಕೆ ಆದ್ಯತೆ ನೀಡಲಾಗಿದೆ. 27 ಮೊರಾರ್ಜಿ ವಸತಿ ಶಾಲೆಗಳಿದ್ದು, ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಬಿಸಿಎಂ, ಅಲ್ಪಸಂಖ್ಯಾತ ಇಲಾಖೆಯ 30 ಹಾಸ್ಟೆಲ್‌ಗಳಿದ್ದು, 9ಕ್ಕೆ ಸ್ವಂತ ಕಟ್ಟಡ ಇಲ್ಲ, ಅಂಕಗಳ ಆಧಾರದ ಮೇಲೆ ಪ್ರವೇಶ ನೀಡಲಾಗಿದೆ.

**ಕೊಡಗು:** ಮೂಲಸೌಕರ್ಯಗಳಿಗೆ ಒತ್ತು ನೀಡಲಾಗಿದೆ. ಕುಡಿಯುವ ಬಿಸಿನೀರು, ಆಹಾರಕ್ಕೆ ಸಿಬ್ಬಂದಿ ಹಾಜರಾತಿಗೆ ಗಮನ ಹರಿಸಲಾಗಿದೆ. ಪ್ರತ್ಯೇಕ ಐಸೋಲೇಷನ್ ಕೊಠಡಿ ಸಿದ್ಧಪಡಿಸಲಾಗಿದೆ.

ಕುಶಾಲನಗರ, ಕೊಡ್ಲಿಪೇಟೆ, ಮಡಿಕೇರಿ ನಗರದಲ್ಲಿ ಹೆಚ್ಚಿನ ಬೇಡಿಕೆ ಇದೆ. ಸಿದ್ದಾಪುರದ ಸಮೀಪದ ಬಸವನಹಳ್ಳಿ ಆದಿವಾಸಿಗಳ ಆಶ್ರಮ ಶಾಲೆಯಲ್ಲಿ ಕೋವಿಡ್‌ಗಿಂತ ಮುಂಚೆ 60 ವಿದ್ಯಾರ್ಥಿಗಳಿದ್ದರು. ಈಗ 130 ಮಂದಿ ಇದ್ದಾರೆ. ಶನಿವಾರಸಂತೆ ವ್ಯಾಪ್ತಿಯ ಹಾಸ್ಟೆಲ್‌ಗಳಿಗೆ ವಿದ್ಯಾರ್ಥಿಗಳ ಕೊರತೆ ಇದೆ.

**ಚಾಮರಾಜನಗರ:** ಪರಿಶಿಷ್ಟ ಜಾತಿ, ವರ್ಗದ ಇಲಾಖೆಯ 31 ಹಾಸ್ಟೆಲ್‌ಗಳಿದ್ದು, 3,975 ಸೀಟುಗಳಿವೆ. ಆದರೆ, ಪ್ರವೇಶಾತಿ ಪಡೆದಿರುವವರ ಸಂಖ್ಯೆ 1,554 ಮಾತ್ರ.


ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ಸಂಖ್ಯೆ 54. ಒಟ್ಟು 5,250 ಸೀಟುಗಳಿಗೆ ಕೇವಲ 1,969 ಮಕ್ಕಳು ದಾಖಲಾಗಿದ್ದಾರೆ. ಉತ್ತಮ ಸೌಕರ್ಯ ಇದ್ದರೂ ವಿದ್ಯಾರ್ಥಿಗಳೇ ಇಲ್ಲ. ಗ್ರಾಮ ಪಂಚಾಯಿತಿ, ಹೋಬಳಿ ಮಟ್ಟದಲ್ಲಿ ಕಾಲೇಜುಗಳು ಆರಂಭಗೊಂಡಿದ್ದು, ಹಾಸ್ಟೆಲ್‌ನತ್ತ ವಿದ್ಯಾರ್ಥಿಗಳು ಮುಖ ಮಾಡುತ್ತಿಲ್ಲ.

**ಮಂಡ್ಯ:** ಮೆಟ್ರಿಕ್ ಪೂರ್ವ, ಪದವಿ ಹಾಸ್ಟೆಲ್‌ಗಳು ಶುರುವಾಗಿವೆ. ಇನ್ನೂ ಹಲವು ವಿದ್ಯಾರ್ಥಿಗಳಿಗೆ ಆರಂಭವಾಗಿಲ್ಲ. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ 46 ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ 21 ಹಾಸ್ಟೆಲ್‌ಗಳಿವೆ. 9ಕ್ಕೆ ಸ್ವಂತ ಕಟ್ಟಡ ಇಲ್ಲ, 26 ವಸತಿ ಶಾಲೆಗಳಿವೆ.


60 ಬಿಸಿಎಂ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ಇದ್ದರೆ, 45 ಬಾಡಿಗೆ ಕಟ್ಟಡದಲ್ಲಿ, 2 ಉಚಿತ ಕಟ್ಟಡದಲ್ಲಿ ನಡೆಯುತ್ತಿವೆ. ಹಾಸ್ಟೆಲ್ ಆರಂಭಕ್ಕೂ ಮುನ್ನ ಸ್ಯಾನಿಟೈಸ್ ಮಾಡಲಾಗಿದೆ. ಮೂಲಸೌಕರ್ಯ ಒದಗಿಸಲಾಗಿದೆ. ಶಿಥಿಲ ಕಟ್ಟಡಗಳನ್ನು ದುರಸ್ತಿ ಮಾಡಲಾಗಿದೆ.

**ಬಳ್ಳಾರಿ:** ವಸತಿ ನಿಲಯಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಕೊಠಡಿಗಳ ಸಂಖ್ಯೆ ಹೆಚ್ಚಿಸಲು ಒತ್ತಾಯ ಕೇಳಿಬಂದಿದೆ. ಸಮಾಜ ಕಲ್ಯಾಣ ಇಲಾಖೆಯಡಿ 41 ವಸತಿ ನಿಲಯಗಳಿದ್ದು, 5,200 ವಿದ್ಯಾರ್ಥಿಗಳಿದ್ದಾರೆ. 4 ಬಾಡಿಗೆ ಕಟ್ಟಡದಲ್ಲಿವೆ. ಹೆಚ್ಚುವರಿ 8 ಹಾಸ್ಟೆಲ್ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸಿದ್ದು, 2 ನಿಲಯಗಳ ಕಾಮಗಾರಿ ಆರಂಭವಾಗಿದೆ.

ಬಿಸಿಎಂ ಇಲಾಖೆಯಡಿ 49 ವಸತಿ ನಿಲಯಗಳಿದ್ದು, 4,405 ವಿದ್ಯಾರ್ಥಿಗಳಿದ್ದಾರೆ. 31 ಸ್ವಂತ ಕಟ್ಟಡದಲ್ಲಿ, 13 ಬಾಡಿಗೆ ಕಟ್ಟಡದಲ್ಲಿ, 2 ಉಚಿತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. 3 ಕಡೆ ಕಟ್ಟಡ ನಿರ್ಮಿಸಲಾಗುತ್ತಿದೆ. ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಡಿ 6 ವಸತಿ ನಿಲಯಗಳಿದ್ದು, ಇದರಲ್ಲಿ 400 ವಿದ್ಯಾರ್ಥಿಗಳಿದ್ದಾರೆ. ಬಹುತೇಕ ಕಡೆ ಸೌಲಭ್ಯದ ಕೊರತೆ ಇದ್ದು, ವಿದ್ಯಾರ್ಥಿಗಳು ಪರದಾಡುವಂತಾಗಿದೆ.



ಬಸವನಬಾಗೇವಾಡಿ ಪಟ್ಟಣದ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ.



ಚಾಮರಾಜನಗರ ಹಾಸ್ಟೆಲ್‌ನಲ್ಲಿ ಯೋಗಾಸನ ನಿರತ ನಿಲಯಾರ್ಥಿಗಳು



ಬೆಳಗಾವಿ ಜಿಲ್ಲೆಯಲ್ಲಿ ಹಾಸ್ಟೆಲ್ ಪುನರಾರಂಭಕ್ಕೆ ಸಿದ್ಧತೆ

## ಕೋವಿಡ್ ನಂತರ ಬೇಡಿಕೆ

**ಬೆಳಗಾವಿ:** ಕೋವಿಡ್ ನಂತರ ಹಾಸ್ಟೆಲ್ ಮತ್ತು ವಸತಿ ಶಾಲೆಗಳಿಗೆ ಬೇಡಿಕೆ ಹೆಚ್ಚಿದೆ. ಮಂಜೂರಾತಿ ಸಂಖ್ಯೆಗಿಂತಲೂ ಹೆಚ್ಚು ವಿದ್ಯಾರ್ಥಿಗಳು ದಾಖಲಾಗುತ್ತಿದ್ದಾರೆ.

ಬಿಸಿಎಂ, ಎಸ್‌ಸಿ, ಎಸ್ಟಿ ಸೇರಿದ 263 ಹಾಸ್ಟೆಲ್‌ಗಳಿವೆ. 54 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 23 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಊಟ, ವಸತಿ ಕಲ್ಪಿಸಲಾಗಿದೆ. ಡಿ ದರ್ಜೆ ಸಿಬ್ಬಂದಿ ಕೊರತೆ ಇದ್ದು, ಗುತ್ತಿಗೆ ಆಧಾರದ ಸಿಬ್ಬಂದಿ ಬಳಕೆ ಮಾಡಲಾಗುತ್ತಿದೆ. ಕೋವಿಡ್ ಕೇರ್ ಕೇಂದ್ರಗಳಿಗೆ ಬಳಕೆ ನಂತರ ಹಾಸ್ಟೆಲ್‌ಗಳನ್ನು ಶುಚಿಗೊಳಿಸಿ ಸಿದ್ಧಗೊಳಿಸಲಾಗಿದೆ.

## ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ

**ಕಲಬುರಗಿ:** ಎಲ್ಲ ವಸತಿ ಶಾಲೆಗಳು ಮೇ 16ರಿಂದ ಪೂರ್ಣಪ್ರಮಾಣದಲ್ಲಿ ಆರಂಭಗೊಂಡಿವೆ. ಕೋವಿಡ್ ಭಯ ಬಿಟ್ಟು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದಿದ್ದಾರೆ.

32 ಪೋಸ್ಟ್ ಮೆಟ್ರಿಕ್, 74 ಪ್ರಿ ಮೆಟ್ರಿಕ್ ಹಾಗೂ 38 ಮೊರಾರ್ಜಿ ಹಾಸ್ಟೆಲ್‌ಗಳು ಆರಂಭಗೊಂಡಿವೆ. ಹಾಸ್ಟೆಲ್‌ವಾರು ಆಯ್ಕೆ ಮಾಡದೆ ನೇರವಾಗಿ ತಾಲೂಕು ಮಟ್ಟದಲ್ಲಿ ಪ್ರವೇಶ ನೀಡಲಾಗುತ್ತಿದೆ. ಅಗತ್ಯವಿರುವ ಕಡೆ ಸುಣ್ಣಬಣ್ಣ, ಸ್ವಚ್ಛತೆ, ಮೂಲಸೌಕರ್ಯ ಒದಗಿಸಲು ಸೂಚಿಸಲಾಗಿದೆ. ಪಡಿತರ, ದವಸ ಧಾನ್ಯವೂ ಸಮರ್ಪಕವಾಗಿ ಬರುತ್ತಿದೆ.

## ಹೆಚ್ಚುವರಿ ಹಾಸ್ಟೆಲ್ ಕಟ್ಟಡಗಳ ನಿರ್ಮಾಣಕ್ಕೆ ಆಗ್ರಹ

**ಕೊಪ್ಪಳ:** ವಸತಿ ನಿಲಯಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಕೊಠಡಿಗಳ ಸಂಖ್ಯೆ ಹೆಚ್ಚಿಸಬೇಕೆಂಬ ಒತ್ತಾಯ ಕೇಳಿಬಂದಿದೆ. ಸಮಾಜ ಕಲ್ಯಾಣ ಇಲಾಖೆಯಡಿ 60 ವಸತಿ ನಿಲಯಗಳಿದ್ದು, 6,700 ವಿದ್ಯಾರ್ಥಿಗಳಿದ್ದಾರೆ. 12 ಬಾಡಿಗೆ ಕಟ್ಟಡಗಳಿವೆ. ಹೆಚ್ಚುವರಿ 10 ಹಾಸ್ಟೆಲ್ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸಿದ್ದು, ಈಗಾಗಲೇ 4 ನಿಲಯಗಳು ನಿರ್ಮಾಣವಾಗುತ್ತಿವೆ. ಬಿಸಿಎಂ ಇಲಾಖೆಯಡಿ 55 ವಸತಿ ನಿಲಯಗಳಿದ್ದು, 5,505 ವಿದ್ಯಾರ್ಥಿಗಳಿದ್ದಾರೆ. 40 ಸ್ವಂತ ಕಟ್ಟಡದಲ್ಲಿ, 12 ಬಾಡಿಗೆ ಕಟ್ಟಡದಲ್ಲಿ, 3 ಉಚಿತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಡಿ 7 ವಸತಿ ನಿಲಯಗಳಿದ್ದು, 500 ವಿದ್ಯಾರ್ಥಿಗಳಿದ್ದಾರೆ. 3ಕ್ಕೆ ಸ್ವಂತ, 4 ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. 2 ನಿಲಯಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಬಹುತೇಕ ಹಾಸ್ಟೆಲ್‌ಗಳಲ್ಲಿ ಮೂಲಸೌಕರ್ಯ ಕೊರತೆ ಇದೆ.

**ರಾಯಚೂರು:** ಈಗಷ್ಟೇ ಹಾಸ್ಟೆಲ್‌ಗಳಿಗೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಕಳೆದ ವರ್ಷ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಈ ಸಲವೂ ಅವಕಾಶ ಕಲ್ಪಿಸಲಾಗಿದೆ. ವಸತಿ ನಿಲಯಗಳಲ್ಲಿ ಸ್ವಚ್ಛತೆ ಕೈಗೊಳ್ಳಲಾಗಿದೆ.

**ವಿಜಯನಗರ:** ಜಿಲ್ಲೆಯಲ್ಲಿ 51 ವಸತಿ ಶಾಲೆಗಳಿವೆ. 6ನೇ ತರಗತಿಗೆ ಪ್ರವೇಶ ಪ್ರಕ್ರಿಯೆ ನಡೆಯುತ್ತಿದೆ. 5 ಬಿಸಿಎಂ ಹಾಸ್ಟೆಲ್‌ಗಳಿದ್ದು, ದುರಸ್ತಿಗೊಳಿಸಲಾಗಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 1 ಮೆಟ್ರಿಕ್ ಪೂರ್ವ ಬಾಲಕರ, 1 ಬಾಲಕಿಯರ, 2 ಮೆಟ್ರಿಕ್ ನಂತರ ಬಾಲಕರ, 3 ಮೆಟ್ರಿಕ್ ನಂತರ ಬಾಲಕಿಯರ ಹಾಸ್ಟೆಲ್ ಕಾಮಗಾರಿಗಳು ಮುಕ್ತಾಯಗೊಂಡಿವೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ 4-5 ವಸತಿ ಶಾಲೆಗಳ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಡಳಿತ ಮುಂದಾಗಿದೆ.

**ಬಾಗಲಕೋಟೆ:** ಸಮಾಜ ಕಲ್ಯಾಣ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಇಲಾಖೆಗಳು ವಿದ್ಯಾರ್ಥಿಗಳ ಸ್ವಾಗತಕ್ಕೆ ಎಲ್ಲ ಸಿದ್ಧತೆ ಮಾಡಿಕೊಂಡಿವೆ. 200ಕ್ಕೂ ಹೆಚ್ಚು ಹಾಸ್ಟೆಲ್‌ಗಳಲ್ಲಿ ಶೇ.60ರಷ್ಟು ಹಳೆ ವಿದ್ಯಾರ್ಥಿಗಳು ವಾಪಸ್ ಆಗಿದ್ದಾರೆ. ಹೊಸಬರಿಗೆ ಕೌನ್ಸೆಲಿಂಗ್ ನಡೆಯಬೇಕಿದೆ. ಜೂನ್ 20ರೊಳಗೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಕೆಲವು ಕಡೆ ಸುಣ್ಣಬಣ್ಣ ಬಳಿಯುವ ಕಾರ್ಯ ಆರಂಭವಾಗಿದೆ. ಇನ್ನು ಕೆಲವೆಡೆ ಕಟ್ಟಡಗಳು ಸುಣ್ಣಬಣ್ಣ ಕಾಣಬೇಕಿದೆ. ಪೂರ್ಣ ಪ್ರಮಾಣದ ಸಿಬ್ಬಂದಿ ಕೊರತೆ ಇದೆ. ಪಡಿತರ, ಮೂಲಸೌಕರ್ಯಕ್ಕೆ ಒತ್ತು ನೀಡಲಾಗಿದೆ.

**ವಿಜಯಪುರ:** ಶಾಲೆಗಳ ಆರಂಭದೊಂದಿಗೆ ಹಾಸ್ಟೆಲ್‌ಗಳೂ ಬಾಗಿಲು ತೆರೆದಿದ್ದು, ಗ್ರಾಮೀಣ ಮಕ್ಕಳಿಗೆ ಅನುಕೂಲವಾಗಿದೆ. ಒಟ್ಟು 218 ಹಾಸ್ಟೆಲ್‌ಗಳು ಆರಂಭಗೊಂಡಿವೆ.

ಜೂನ್ 10ರಿಂದ ಬಹುತೇಕ ಹಾಸ್ಟೆಲ್‌ಗಳು ಭರ್ತಿಯಾಗಿವೆ. ಬಹುತೇಕ ಕಡೆ ಸೌಲಭ್ಯಗಳೊಟ್ಟಿಗೆ, ಕೆಲ ದುರಸ್ತಿ ಕಾರ್ಯ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಬೇಕಾದ ಸಾಮಗ್ರಿ, ಸೋಪು ಕಿಟ್, ಹಾಸಿಗೆ ಹೊದಿಕೆ ಮತ್ತಿತರ ಸೌಲಭ್ಯ ಪೂರೈಸಲಾಗಿದೆ.

**ಹಾವೇರಿ:** ಜಿಲ್ಲೆಯಲ್ಲಿ 150 ವಸತಿ ಶಾಲೆ ಹಾಗೂ ಹಾಸ್ಟೆಲ್‌ಗಳಿದ್ದು, 6,800 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. 34 ಹಾಸ್ಟೆಲ್ ಬಾಡಿಗೆ ಕಟ್ಟಡದಲ್ಲಿದ್ದರೂ ಪಡಿತರ, ಮೂಲಸೌಕರ್ಯ ಕೊರತೆ ಇಲ್ಲ. ಪ್ರವೇಶ ಪ್ರಕ್ರಿಯೆ ಇನ್ನೂ ಮುಂದುವರಿದಿದ್ದು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳಕ್ಕೆ ಬೇಡಿಕೆ ಬರುವ ಸಾಧ್ಯತೆ ಇದೆ.

**ಧಾರವಾಡ:** ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಹಾಸ್ಟೆಲ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.

ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ 41 ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಿವೆ. ಅಲ್ಲದೇ ವಿವಿಧ ಇಲಾಖೆಯ 10ಕ್ಕೂ ಹೆಚ್ಚು ವಸತಿ ಶಾಲೆಗಳಿವೆ. ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ತಾಂತ್ರಿಕ ಕಾರಣಗಳಿಂದ ಬಿಸಿಎಂ ಹಾಸ್ಟೆಲ್‌ಗಳಿಗೆ ಅರ್ಜಿ ಆಹ್ವಾನಿಸಿಲ್ಲ, ಮೂಲಸೌಕರ್ಯ ಒದಗಿಸಲಾಗುತ್ತಿದೆ.

# ಸಮವಸ್ತ್ರ ಬಳಸಿ ನೆಲ ಸ್ವಚ್ಛ, ಪೋಷಕರ ಆಕ್ರೋಶ

**ಮುಂಡಗೋಡ:** ತಾಲೂಕಿನ ಮೊರಾರ್ಜಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬನ ಸಮವಸ್ತ್ರ ಬಳಸಿ ನೆಲ ಸ್ವಚ್ಛಗೊಳಿಸಿದ ಘಟನೆ ಭಾನುವಾರ ಬೆಳಕಿಗೆ ಬಂದಿದೆ. 8ನೇ ತರಗತಿಯ ಅಭಿಷೇಕ ಜಗನೇರಿ ಎಂಬ ವಿದ್ಯಾರ್ಥಿಗೆ ತರಗತಿಗೆ ಹಾಕಿಕೊಂಡು ಹೋಗಲು ಸಮವಸ್ತ್ರವಿಲ್ಲದಿದ್ದಾಗ ಆತಂಕಗೊಂಡು ಮನೆಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾನೆ. ಪೋಷಕರು ಆಗಮಿಸಿ ವಿಚಾರಿಸಿದರೂ ಯಾರೆಂಬುದು ಗೊತ್ತಾಗಿಲ್ಲ. ಕೆಲ ದಿನಗಳ ಹಿಂದೆ ಇದೇ ವಿದ್ಯಾರ್ಥಿಯ ಟ್ರಂಕ್ ಮುರಿಯಲಾಗಿತ್ತು. ಇಂಥ ಘಟನೆಗಳಿಂದ ಬೇಸತ್ತ ವಿದ್ಯಾರ್ಥಿಯ ಪಾಲಕರು ತನ್ನ ಮಗನ ವರ್ಗಾವಣೆ ಪತ್ರ ನೀಡುವಂತೆ ಶಿಕ್ಷಕರಲ್ಲಿ ಕೇಳಿಕೊಂಡರು. ಸಿಬ್ಬಂದಿ ಕೊರತೆ ಇದ್ದು ಸಿಬ್ಬಂದಿ ಭರ್ತಿ ಮಾಡಿದರೆ ಇಂತಹ ಅಚಾತುರ್ಯ ತಡೆಯಲು ಸಾಧ್ಯ ಎಂದು ಶಿಕ್ಷಕರು ಹೇಳಿದರು.







